ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್. ಪದವಿಯ ನಿಬಂಧ

"ಡಾ|| ಬೆಸಗರಹಳ್ಳಿ ರಾಮಣ್ಣನವರ ಕಥೆಗಳಲ್ಲಿ ಶೋಷಣೆಯ ನೆಲೆಗಳು-ಒಂದು ಅಧ್ಯಯನ"

ಸಂಶೋಧನ ವಿದ್ಯಾರ್ಥಿ

ಸುನಿಲ್ ಕುಮಾರ್ .ಹೆಚ್

ಮಾರ್ಗದರ್ಶಕರು

ಡಾ|| ಆರ್. ಲಕ್ಷ್ಮೀನಾರಾಯಣ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಬೆಂಗಳೂರು.

೨೦೦೯- ೨೦೧೦

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್. ಪದವಿಯ ನಿಬಂಧ

"ಡಾ॥ ಬೆಸಗರಹಳ್ಳಿ ರಾಮಣ್ಣನವರ ಕಥೆಗಳಲ್ಲಿ ಶೋಷಣೆಯ ನೆಲೆಗಳು-[ಒಂದು ಅಧ್ಯಯನ]"

ಸಂಶೋಧನ ವಿದ್ಯಾರ್ಥಿ

ಸುನಿಲ್ ಕುಮಾರ್ .ಹೆಚ್

ಮಾರ್ಗದರ್ಶಕರು

ಡಾ॥ ಆರ್. ಲಕ್ಷ್ಮೀನಾರಾಯಣ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಬೆಂಗಳೂರು.

೨೦೦೯- ೨೦೧೦

pp. 6

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್. ಪದವಿಯ ನಿಬಂಧ

"ಡಾ|| ಬೆಸಗರಹಳ್ಳಿ ರಾಮಣ್ಣನವರ ಕಥೆಗಳಲ್ಲಿ ಶೋಷಣೆಯ ನೆಲೆಗಳು-ಒಂದು ಅಧ್ಯಯನ"

ನೋಂದಣಿ ಸಂಖ್ಯೆ : **BMSBKS-00405**

ಅಭ್ಯರ್ಥಿಯ ಪ್ರಮಾಣ ಪತ್ರ

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೯-೧೦ ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಡಾ॥ ಬೆಸಗರಹಳ್ಳಿ ರಾಮಣ್ಣನವರ ಕಥೆಗಳಲ್ಲಿ ಶೋಷಣೆಯ ನೆಲೆಗಳು–ಒಂದು ಅಧ್ಯಯನ"** ಎಂಬ ನಿಬಂಧವನ್ನು **ಡಾ॥ ಆರ್. ಲಕ್ಷ್ಮೀನಾರಾಯಣ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ನಿಬಂಧ ನನ್ನ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 12-09-2010

ಸಂಶೋಧಕರು

ಹೆಚ್. ಸುನೀಲ್ ಕುಮಾರ್

(ಸುನಿಲ್ ಕುಮಾರ್ .ಹೆಚ್)

ಸ್ಥಳ: ಬೆಂಗಳೂರು.

ಮಾರ್ಗದರ್ಶಕರ ಪ್ರಮಾಣ ಪತ್ರ

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೯-೧೦ ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಡಾ॥ ಬೆಸಗರಹಳ್ಳಿ ರಾಮಣ್ಣನವರ ಕಥೆಗಳಲ್ಲಿ ಶೋಷಣೆಯ ನೆಲೆಗಳು-ಒಂದು ಅಧ್ಯಯನ"** ಎಂಬ ನಿಬಂಧವನ್ನು **ಸುನಿಲ್ ಕುಮಾರ್ .ಹೆಚ್** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ನಿಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 12-9-2010

ಸ್ಥಳ: ಬೆಂಗಳೂರು

ಮಾರ್ಗದರ್ಶಕರು

ಆರ್. ಲಕ್ಷ್ಮೀನಾರಾಯಣ

(ಡಾ॥ ಆರ್. ಲಕ್ಷ್ಮೀನಾರಾಯಣ)

ಡಾ॥ ಬೆಸಗರಹಳ್ಳಿ ರಾಮಣ್ಣನವರ ಕಥೆಗಳಲ್ಲಿ ಶೋಷಣೆಯ ನೆಲೆಗಳು-[ಒಂದು ಅಧ್ಯಯನ]

ಪರಿವಿಡಿ

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ

ಉದ್ದೇಶ:

ನಮ್ಮ ಭಾರತ ದೇಶವು ಗ್ರಾಮ ಪ್ರಧಾನ್ಯತೆಯುಳ್ಳ ರಾಷ್ಟ್ರವಾಗಿದೆ. ಈ ದೇಶದಲ್ಲಿ ಸ್ವಾತಂತ್ರ್ಯ ಪೂರ್ವದ ಗ್ರಾಮೀಣ ಪ್ರದೇಶಗಳಲ್ಲಿ ಶೋಷಣೆ ಎಂಬುದು ಸರ್ವೇ ಸಾಮಾನ್ಯವಾದ ವಿಷಯವಾಗಿತ್ತು. ಆಗ ಪರಕೀಯರಾದ ಪೋರ್ಚುಗೀಸರು, ಫ್ರೆಂಚರು, ಡಚ್ಚರು, ಬ್ರಿಟೀಷರು ಭಾರತೀಯರನ್ನು ಸ್ವಾತಂತ್ರ್ಯ ಹೀನರನ್ನಾಗಿ ಮಾಡಿ ಅವರುಗಳ ಮೇಲೆ ಶೋಷಣೆಯನ್ನು ಮಾಡಲಾಗುತ್ತಿತ್ತು. ಈ ಶೋಷಣೆ ಎಂಬುದು ಸ್ವಾತಂತ್ರ್ಯಾ ನಂತರದ ಸಮಾಜದಲ್ಲೂ ಮುಂದುವರೆದು ಅದು ಹೇಗೆ ಅಸ್ತಿತ್ವದಲ್ಲಿತ್ತು ಮತ್ತು ಅದರ ತೀವ್ರತೆ ಎಷ್ಟರ ಮಟ್ಟಿಗೆ ಇತ್ತು ಎಂಬುದನ್ನ ತಿಳಿಯಲು ಬೆಸಗರಹಳ್ಳಿ ರಾಮಣ್ಣನವರ ಶೋಷಣೆಯನ್ನು ವಸ್ತುವಾಗುಳ್ಳ ಕಥೆಗಳು ಹೆಚ್ಚು ಸಹಾಯಕಾರಿಯಾಗಿವೆ. ಸ್ವಾತಂತ್ರ್ಯಾ ನಂತರದಲ್ಲಿ ಶೋಷಣೆಯು ಬೇರೆಯವರಿಂದ ಆಗದೆ ನಮ್ಮವರಿಂದಲೇ ಆದುದು ಅತ್ಯಂತ ಅವಮಾನಕರ ಸಂಗತಿಯಾಗಿದೆ. ಹೀಗೆ ಶೋಷಣೆಯು ಹೇಗೆ, ಯಾರಿಂದ, ಯಾರ ಮೇಲೆ, ಭಿನ್ನ ಭಿನ್ನ ನೆಲೆಗಳಲ್ಲಿ ನಡೆಯುತ್ತದೆ ಎಂಬುದನ್ನು ಬೆಸಗರಹಳ್ಳಿ ರಾಮಣ್ಣನವರು ಶೋಷಣೆಯನ್ನು ವಸ್ತುವಾಗುಳ್ಳ ಕಥೆಗಳಲ್ಲಿ ಜೀವಂತವಾಗಿ ಹೊರತರುವಲ್ಲಿ ಯಶಸ್ವಿಯಾಗಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಸಣ್ಣಕಥೆಗಳು ವಿಶಿಷ್ಟವಾದ ಸಾಹಿತ್ಯಪ್ರಕಾರವಾಗಿದ್ದು ಈ ಸಾಹಿತ್ಯ ಪ್ರಕಾರದಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಹೀಗೆ ಎಲ್ಲಾ ಘಟ್ಟಗಳಲ್ಲೂ ಸಣ್ಣಕಥೆಗಳು ಮೂಡಿ ಬಂದಿವೆ. ಅದರಲ್ಲೂ ದಲಿತ ಸಾಹಿತ್ಯಕ್ಕೆ ಸೇರಿದ ಕಥೆಗಳು ಹೆಚ್ಚು ಪ್ರಾಶಸ್ತ್ಯವನ್ನು ಪಡೆದಿದೆ. ನವ್ಯೋತ್ತರ ಕಥೆಗಾರರಲ್ಲಿ ಬೆಸಗರಹಳ್ಳಿ ರಾಮಣ್ಣನವರು ಅತ್ಯಂತ ಪ್ರಮುಖರಾದವರಾಗಿದ್ದು, ದಲಿತರ ಬದುಕಿನ ಚಿತ್ರಣ ಹಾಗೂ ಅವರ ಮೇಲೆ ಶೋಷಣೆಯು ಭಿನ್ನ-ಭಿನ್ನ ನೆಲೆಗಳಲ್ಲಿ ಹೇಗೆ ಜರುಗುತ್ತವೆ ಎಂಬುದನ್ನು ಬೆಸಗರಹಳ್ಳಿ ರಾಮಣ್ಣನವರು ತಮ್ಮ ಕಥಾಗುಚ್ಛಗಳಲ್ಲಿ ನಿರೂಪಿಸಿದ್ದಾರೆ. ಹೀಗಾಗಿ ಶೋಷಣೆಯ ಭಿನ್ನ ನೆಲೆಗಳನ್ನು ಕಂಡುಕೊಳ್ಳಲು ಈ ಅಧ್ಯಯನವನ್ನು ಮಾಡಲಾಗಿದೆ.

ಬೆಸಗರಹಳ್ಳಿ ರಾಮಣ್ಣನವರು ದಲಿತರ ಬಗೆಗೆ ವಿಶೇಷವಾದ ಕಾಳಜಿ, ಅನುಕಂಪ ಹೊಂದಿದ್ದು ಅವರ ಜೀವನ ಕ್ರಮ, ಆಚರಣೆ, ಸಂಸ್ಕೃತಿ, ನೋವು, ನಲಿವು, ಬಡತನ ದಾರಿದ್ರ್ಯ, ಸುಖ-ದುಃಖ, ಒಳಿತು ಕೆಡುಕುಗಳು ಮುಂತಾದವುಗಳ ಬಗ್ಗೆ ವಿಶೇಷವಾದ ಆಸಕ್ತಿಯನ್ನು ಹೊಂದಿದ್ದವರಾಗಿದ್ದ ಅದೇ ರೀತಿ ದಲಿತರ ಶೋಷಣೆಗೆ ಕಾರಣರಾದ ಶೋಷಕರ ವಿರುದ್ಧ

ತಳೆದಿದ್ದ ನಿಲುವು ಅವರ ನೇರನುಡಿ, ಶೈಲಿ, ಭಾಷೆ, ಕಥಾವಸ್ತು ಇವುಗಳು ನನ್ನ ಮೇಲೆ ಹೆಚ್ಚು ಪ್ರಭಾವ ಬೀರಿದುದರಿಂದ ಈ ಸಂಪ್ರಬಂಧದಲ್ಲಿ "ಡಾ॥ ಬೆಸಗರಹಳ್ಳಿ ರಾಮಣ್ಣನವರ ಕಥೆಗಳಲ್ಲಿ ಶೋಷಣೆಯ ನೆಲೆಗಳು" ಎಂಬ ವಿಷಯವನ್ನು ಆಯ್ಕೆ ಮಾಡಿಕೊಳ್ಳಲು ಸಹಾಯಕವಾಯಿತು.

ವ್ಯಾಪ್ತಿ

ಬೆಸಗರಹಳ್ಳಿ ರಾಮಣ್ಣನವರು ತಮ್ಮ ಕಥೆಗಳನ್ನು ಕ್ರಿ.ಶ. 1967 ರಿಂದ ಕ್ರಿ.ಶ. 1980ರ ನಡುವೆ ಬರೆದಿದ್ದಾರೆ. ಅಂದರೆ ಸ್ವಾತಂತ್ರ್ಯಾನಂತರದಲ್ಲಿ ಅವರು ರಚಿಸಲಾದ ಕಥೆಗಳನ್ನು ಮಾತ್ರ ಪರಿಶೋಲಿಸಲಾಗಿದೆ. ಎಪ್ಪತ್ತು ಎಂಭತ್ತರ ದಶಕದಲ್ಲಿನ ಸಮಾಜದ ಸ್ಥಿತಿಗತಿ, ಅಲ್ಲಿನ ಸಂಸ್ಕೃತಿ-ಆಚರಣೆಗಳು, ಅಂದಿನ ಜನಜೀವನ, ದಲಿತರ ಬದುಕಿನ ಚಿತ್ರಣ ಹೀಗೆ ಅಂದಿನ ಸಮಾಜಕ್ಕೆ ಮಾತ್ರ ಸೀಮಿತವಾಗಿರುವ ಕಥೆಗಳನ್ನು ಚರ್ಚಿಸಿ ಆ ಕಥೆಗಳಲ್ಲಿ ಶೋಷಣೆಯನ್ನು ವಸ್ತುವಾಗುಳ್ಳ ಕಥೆಗಳನ್ನು ಆರಿಸಿಕೊಂಡು ವಿಮರ್ಶಿಸಲಾಗಿದೆ. ಬೆಸಗರಹಳ್ಳಿ ರಾಮಣ್ಣನವರ ಕಥೆಗಳಲ್ಲಿನ ಭಾಷೆ, ಪರಿಸರ, ಶೈಲಿ, ವಸ್ತು ಮುಂತಾದವುಗಳು ಅಂದಿನ ಕಾಲಘಟಕ್ಕೆ ಹೆಚ್ಚು ಒತ್ತು ನೀಡುತ್ತವೆ, ಪ್ರಸ್ತುತಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಲಾಗಿಲ್ಲ.

ಶೋಷಣೆಗೆ ಮುಖ್ಯ ಕಾರಣವಾದ ಜಾತಿ ಪದ್ಧತಿ, ಜಮೀನ್ದಾರಿ ಪದ್ದತಿ, ಜೀತ ಪದ್ಧತಿ, ಪರದಾ ಪದ್ಧತಿ. ಇವೇ ಮುಂತಾದ ಹಲವು ಅನಿಷ್ಟ ಪದ್ಧತಿಗಳು ಅಂದಿನ ಸಂಪ್ರದಾಯ ಬದ್ಧ ಸಮಾಜದಲ್ಲಿ ಹೆಚ್ಚು ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ಶಿಕ್ಷಣಕ್ಕೆ ಪ್ರಾಮುಖ್ಯತೆಯನ್ನು ನೀಡಲಾಗಿರಲಿಲ್ಲ. ಸ್ತ್ರೀಯನ್ನು ಅಡುಗೆ ಮನೆಗೆ ಮಾತ್ರ ಸೀಮಿತಳನ್ನಾಗಿಸಿ ಸರಿಯಾದ ಸ್ಥಾನಮಾನವನ್ನು ನೀಡಲಾಗಿರಲಿಲ್ಲ. ಅಂದು ಬಡತನ ಮತ್ತು ನಿರುದ್ಯೋಗಿದೆ ಹೆಚ್ಚು ಅಸ್ತಿತ್ವದಲ್ಲಿತ್ತು. ಇಂತಹ ಪರಿಸ್ಥಿತಿಯ ಹಿನ್ನಲೆಯಲ್ಲಿ ಬೆಸಗರಹಳ್ಳಿ ರಾಮಣ್ಣನವರು ಕಥೆಗಳನ್ನು ರಚಿಸಿದ್ದಾರೆ

ಶೋಷಣೆಯು ಜಾತಿ, ಮತ, ಧರ್ಮ, ವರ್ಣ, ವರ್ಗ, ಬಡವ, ಶ್ರೀಮಂತ ಅಧಿಕಾರ, ಲಿಂಗ ಆಧಾರಿತವಾಗಿ ನಡೆಯುತ್ತದೆ. ಹೀಗೆ ಭಿನ್ನ ರೀತಿಯಲ್ಲಿ ನಡೆಯುವ ಶೋಷಣೆಯು ಯಾರಿಂದ, ಹೇಗೆ, ಯಾರ ಮೇಲೆ ನಡೆಯುತ್ತಿತ್ತು. ಎಂಬುದರ ಕುರಿತಾಗಿ ಈ ಅಧ್ಯಯನದಲ್ಲಿ ವಿಮರ್ಶಾತ್ಮಕವಾಗಿ ಅಭ್ಯಸಿಸಲಾಗಿದೆ.

ಸ್ವರೂಪ:

ಬೆಸಗರಹಳ್ಳಿ ರಾಮಣ್ಣನವರು ಮೂಲತ: ಗ್ರಾಮೀಣ ಹಿನ್ನಲೆಯಲ್ಲಿ ಮಾಡಿಬಂದಂತಹ ಕಥೆಗಾರರಾಗಿದ್ದಾರೆ. ಇವರ ಎಲ್ಲಾ ಕಥೆಗಳು ಮಂಡ್ಯ ಜಿಲ್ಲೆಯ ಸುತ್ತಮುತ್ತಲಿನ ಗ್ರಾಮೀಣ ಪರಿಸರವನ್ನು ದೃಷ್ಟಿಯಲ್ಲಿಟ್ಟು ಕೊಂಡು ರಚಿತವಾದವುಗಳೇ ಆಗಿವೆ. ಗ್ರಾಮೀಣ ಪ್ರದೇಶಗಳಲ್ಲಿ

ದಲಿತರು ಹೆಚ್ಚಾಗಿರುವುದು ಕಂಡುಬರುತ್ತದೆ. ಆ ದಲಿತರ ಬದುಕಿನ ವಿವಿಧ ಸ್ತರಗಳ ಬಗೆಗೆ ರಾಮಣ್ಣನವರು ತಾವು ಕಂಡು ಅನುಭವಿಸಿದಂತಹ ಜೀವನದ ಅನುಭವವನ್ನು ಕಥಾರೂಪವಾಗಿ ಹೊರತಂದಿದ್ದಾರೆ.

ಅಲಕ್ಷ್ಯಕ್ಕೀಡಾದ ಹಾಗೂ ತುಳಿತಕ್ಕೆ ಒಳಗಾದ ಜನಾಂಗದವರಾದ ದಲಿತರು ಶೋಷಕರಿಂದ ಯಾವೆಲ್ಲಾ ಬಗೆಯ ಶೋಷಣೆಗೆ ತುತ್ತಾದರು ಎಂಬುದು ಬೆಸಗರಹಳ್ಳಿ ರಾಮಣ್ಣನವರ ಕಥೆಗಳ ಹೂರಣವಾಗಿದೆ. ಅವರ ಈ ಕಥೆಗಳಲ್ಲಿ ಶೋಷಣೆಗೆ ಒಳಗಾದವರ ನೋವು, ಬಡತನ, ದಾರಿದ್ರ್ಯ, ಹಸಿವು ಇತ್ಯಾದಿ ಅಂಶಗಳು ಒಳಗೊಂಡಿದ್ದು, ಜಮೀನ್ದಾರರು, ಅಧಿಕಾರಶಾಹಿಗಳು, ಪಟ್ಟಭದ್ರರು, ಶ್ರೀಮಂತರು ಮೊದಲಾವರ ದೌರ್ಜನ್ಯ, ದಬ್ಬಾಳಿಕೆ, ಕ್ರೌರ್ಯ ಪ್ರವೃತ್ತಿಗಳ ಯಥಾವತ್ತಾದ ಚಿತ್ರಣವಿರುವುದು ತಿಳಿಯುತ್ತದೆ.

ಬೆಸಗರಹಳ್ಳಿ ರಾಮಣ್ಣನವರು ತಮ್ಮ ಕಥೆಗಳಲ್ಲಿ ಶೋಷಣೆಯು ಹೇಗೆ, ಯಾರಿಂದ, ಯಾರ ಮೇಲೆ ಎಸಗಲಾಗುತ್ತದೆ ಎಂಬುದನ್ನು ಸವಿವರವಾಗಿ ಚಿತ್ರಿಸಿದ್ದಾರೆ. ದಲಿತರು ಅದನ್ನು ಹೇಗೆ ಸ್ವೀಕರಿಸುತಾರೆ. ಹೇಗೆ ವಿರೋಧಿಸುತ್ತಾರೆ ಎಂಬುದರ ಕುರಿತಾಗಿ ಹಾಗೂ ಶೋಷಕರ ವಿರುದ್ಧ ಯಾವುದೇ ಬಗೆಯ ಪ್ರತಿಕ್ರಿಯಿಸಲಾದಷ್ಟು ಅಸಹಾಯಕರಾಗಿರುವುದು ಒಂದೆಡೆಯಾದರೆ ಅದನ್ನು ಪ್ರತಿಭಟಿಸುವ ಪರಿ ಇನ್ನೊಂದೆಡೆಯಾಗಿದೆ. ಹೀಗೆ ಶೋಷಣೆಗೆ ಈಡಾದ ದಲಿತರ ಎರಡೂ ಚಿತ್ರಣಗಳನ್ನು ಕಾಣುತ್ತೇವೆ.

* * * * *

ಅಧ್ಯಾಯ – ೧

ಡಾ॥ ಬೆಸಗರಹಳ್ಳಿ ರಾಮಣ್ಣನವರ ಬದುಕು ಮತ್ತು ಬರಹ

ಅಧ್ಯಾಯ – 1

ರಾಮಣ್ಣನವರ ವ್ಯಕ್ತಿ ಜೀವನ

ರಾಮಣ್ಣನವರು ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಬೆಸಗರಹಳ್ಳಿಯವರು ತಂದೆ 'ಚಿಕ್ಕ ಎಲ್ಲೇಗೌಡ', ತಾಯಿ 'ದೊಡ್ಡ ತಾಯಮ್ಮ'. ಇವರು 15 ಆಗಸ್ಟ್ 1938 ರಂದು ಜನಿಸಿದರು. ತಂದೆ ವ್ಯವಸಾಯಗಾರರಾದ್ದರಿಂದ ಇವರ ಬಾಲ್ಯ ಹಳ್ಳಿಯಲ್ಲೇ ಕಳೆಯಿತು. ಇವರು ಬೆಸಗರಹಳ್ಳಿ ಮದ್ದೂರು, ಮೈಸೂರುಗಳಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಎಂ.ಬಿ.ಬಿ.ಎಸ್ ಪದವಿಯನ್ನು ಪಡೆದರು. ವೃತ್ತಿಯಲ್ಲಿ ವೈದ್ಯರಾದ ಇವರು ಕನ್ನಡ ಸಾಹಿತ್ಯದ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದರು. ಮಂಡ್ಯದ ತಮ್ಮ 'ನೆಲದ ಒಡಲು' ಮನೆಯಲ್ಲಿ ಹೆಂಡತಿ ರಾಜಮ್ಮ ಹಾಗೂ ಮಕ್ಕಳಾದ ರವಿಕಾಂತ ಗೌಡ ಮತ್ತು ಪೂರ್ಣಿಮಾರೊಂದಿಗೆ ನೆಲೆಸಿದ್ದರು. ಹಾಗೂ 1998ರಲ್ಲಿ ಇವರು ದೈವಾದೀನರಾದರು.

ಸಾಹಿತ್ಯಾಸಕ್ತಿಗೆ ಕಾರಣ ಮತ್ತು ಪ್ರೇರಣೆ

ರಾಮಣ್ಣನವರು ಬಾಲ್ಯದಲ್ಲಿರುವಾಗ ಕೇಳಿದ 'ಅಜ್ಜಿಯ ಕಥೆಗಳು' ಇವರ ಸಾಹಿತ್ಯದ ಮೂಲ ಆಸಕ್ತಿಗೆ ಕಾರಣವಾಗಿದೆ. ಅವರ ತಂದೆಯ ಸೋದರ ಮಾವನ ಹೆಂಡತಿ (ದೇಸಳ್ಳಿ ಅಮ್ಮ)ಯು ಸೃಷ್ಟಿಸಿ ಹೇಳುತ್ತಿದ್ದ ಕತೆಗಳೊಂದಿಗೆ "ರಾಮಣ್ಣನವರ ಸೋದರ ಮಾವನಿಗೆ ಕಾಫ್ಕನ 'ದಿ ಟ್ರೇಲ್' ಮತ್ತು ದಾಸ್ತೊವಸ್ಕಿಯ 'ಕ್ರೈಂ ಅಂಡ್ ಪನಿಶ್‌ಮೆಂಟ್' ಹಾಗೂ ಟಾಲ್‌ಸ್ಟಾಯ್‌ನ 'ಅನ್ನಾ ಕೆರನೀನಾ' ಕಾದಂಬರಿಗಳ ಬಗ್ಗೆ ಇದ್ದಂತಹ ಜ್ಞಾನ ಇವರಿಗೆ ಸಾಹಿತ್ಯದ ಕಡೆ ಒಲವು ಮೂಡಲು ಕಾರಣವಾಯಿತು."[1] ಇವರನ್ನು ಸಾಹಿತ್ಯದ ಕಡೆ ವಾಲುವಂತೆ ಮಾಡಿದಂತಹ ಮತ್ತೊಬ್ಬ ಮುಖ್ಯ ವ್ಯಕ್ತಿಯೆಂದರೆ ರಾಮಣ್ಣನವರ ಪ್ರೀತಿಯ ಅಣ್ಣ ಪುಟ್ಟಸ್ವಾಮಿ. ಅಣ್ಣನು ಗದ್ದೆಯ ಅಂಚಿನಲ್ಲಿ ನಿಂತು ರನ್ನನ 'ದುರ್ಯೋಧನನ ಪ್ರಲಾಪ'ವನ್ನು ನಟಿಸಿ ಹಾಡಿದ್ದು, ಕುಮಾರವ್ಯಾಸನ ಪದ್ಯಗಳನ್ನು ಹಾಡಿದುದ್ದು ಕುವೆಂಪುರವರ ಗೀತಿಗಳನ್ನು ಹಾಡಿದುದ್ದು, ಬುದ್ಧನು ತನ್ನ ಹೆಂಡತಿ–ಮಗನನ್ನು ಬಿಟ್ಟು ಕಾಡಿಗೆ ಹೊದುದ್ದನ್ನು ಬಣ್ಣಿಸಿ ಹೇಳಿದುದ್ದು ಹಾಗೂ ಮೈಸೂರಿನ ದಸರಾ ಮತ್ತು ಪ್ರದರ್ಶನದಲ್ಲಿ ಕುಮಾರವ್ಯಾಸನ 'ಕರ್ನಾಟ ಭಾರತ ಕಥಾಮಂಜರಿಯನ್ನು ಕೊಂಡು ಓದಿದುದ್ದು ಈ ಎಲ್ಲಾ ಘಟನೆಗಳು ಸಾಹಿತ್ಯದ ಮೇಲಿನ ಆಸಕ್ತಿಯನ್ನು ಮೂಡಿಸಿ ಸಾಹಿತ್ಯ ರಚನೆಯ ಕಡೆ ಸೆಳೆಯುವಂತೆ ಮಾಡಿವೆ.

ಇನ್ನು ಸಾಹಿತ್ಯದ ಮೂಲ ಪ್ರೇರಣೆ ಮನೆಯವರಿಂದಲೇ ಆದರೂ ಇವರ ಸಾಹಿತ್ಯದ ಆಸಕ್ತಿ ಹೆಮ್ಮರವಾಗಿ ಬೆಳದದ್ದು ಮೈಸೂರಿನಲ್ಲಿ ಓದು ಆರಂಭಿಸಿದಾಗ ಯುವರಾಜ ಕಾಲೇಜಿನಲ್ಲಿ

ಜಿ.ಎಸ್. ಶಿವರುದ್ರಪ್ಪನವರು ಸಾಹಿತ್ಯ ಬೋಧಿಸಿದ ರೀತಿ ಮತ್ತು ನೆಡೆದಾಡುವ ಕನ್ನಡದ 'ಶಬ್ದಕೋಶ', 'ಜ್ಞಾನಕೋಶ' ಎಂದು ಗೌರವಿಸುತ್ತಿದ್ದ ಕನ್ನಡದ ದಿಗ್ಗಜಗಳಾದ ಡಿ.ಎಲ್.ಎನ್ ಹಾಗೂ ತೀ.ನಂ.ಶ್ರೀಯವರು ಮಹಾರಾಜ ಕಾಲೇಜಿನ ಕರ್ನಾಟಕ ಸಂಘವು ನೆಡೆಸುತ್ತಿದ್ದ 'ಸಾಹಿತ್ಯ ಸಂಜೆ'ಯಲ್ಲಿ ಮಾಡಿದ ಭಾಷಣಗಳು ಇವರಿಗೆ ಸಾಹಿತ್ಯದಲ್ಲಿ ಅಭಿರುಚಿಯನ್ನು ಹುಟ್ಟಿಸಿದವು "ಜಿ.ಎಸ್.ಎಸ್. ರವರ ಮುಖ್ಯತ್ವದಲ್ಲಿ ಯುವರಾಜ ಕಾಲೇಜಿನ ವಿದ್ಯಾರ್ಥಿಗಳ 'ಲಲಿತ ಕಲಾ ಸಂಘ' ದಿಂದ 'ವಸಂತ' ಎಂಬ ವಾರ್ಷಿಕ ಪತ್ರಿಕೆ ತರುವುದಕ್ಕಾಗಿ ವಿದ್ಯಾರ್ಥಿಗಳಿಂದ ಕಥೆ, ಕವನ, ಪ್ರಬಂಧಗಳನ್ನು ಆಹ್ವಾನಿಸಿದರು. ಆಗ ರಾಮಣ್ಣನವರು 1958ರಲ್ಲಿ 'ಹಸುವಿನ ಕಹಳೆ' ಎಂಬ ಕಥೆ ಬರೆದುಕೊಟ್ಟಾಗ ಅದು ಪತ್ರಿಕೆಯಲ್ಲಿ ಪ್ರಕಟವಾಗಲಿಲ್ಲ, ಕಥೆಯನ್ನು ಜಿ.ಎಸ್.ಎಸ್. ಹಿಂತಿರುಗಿಸಿ ಪತ್ರಿಕೆ ಪ್ರಕಟವಾಗಲಿಲ್ಲ ಹೀಗಾಯ್ತು ಎಂದು ಬೇಜಾರು ಮಾಡಿಕೊಳ್ಳದೆ ಸಾಹಿತ್ಯವನ್ನು ಓದುವುದನ್ನಾಗಲಿ, ಬರೆಯಬೇಕೆಂಬ ಇಚ್ಛೆಯನ್ನಾಗಲೀ ತುಚ್ಚವಾಗಿ ಕಾಣಬಾರದು"[2] ಎಂದು ಸಮಾಧಾನ ಹೇಳಿದರು. ಇದು ರಾಮಣ್ಣನವರಿಗೆ ಸಾಹಿತ್ಯದ ಮೇಲೆ ಇನ್ನೂ ಹೆಚ್ಚಿನ ಪ್ರೇಮ ಮೂಡಲು ಸಾಧ್ಯವಾಯಿತು.

ಬೆಸಗರಹಳ್ಳಿ ರಾಮಣ್ಣನವರು ಕುವೆಂಪು, ಟಾಲ್‌ಸ್ಟಾಯ್, ದಾಸ್ತೊವಸ್ಕಿ, ಮೈಕಲ್ ಶೂಲ್‌ಕೋವ್, ಚೆಕಾವ್, ಪ್ರೇಮಚಂದ್ ಇನ್ನೂ ಮುಂತಾದ ಮಹಾಚೇತನಗಳಿಂದ ಪ್ರೇರಣೆ ಪಡೆದವದ್ದಾರೆ. ಇವರು ವೈದ್ಯರಾಗಿದ್ದರೂ ಕೂಡ ವೈದ್ಯಕೀಯ ಪುಸ್ತಕಗಳಿಗಿಂತ ಸಾಹಿತ್ಯದ ಪುಸ್ತಕಗಳನ್ನು ಹೆಚ್ಚು ಸಂಗ್ರಹಿಸಿರುವುದು ರಾಮಣ್ಣನವರ ಸಾಹಿತ್ಯದ ಮೇಲಿನ ಪ್ರೀತಿ ಒಲವನ್ನು ತೋರಿಸುತ್ತದೆ.

ರಾಮಣ್ಣನವರ ಬರಹಗಳು

1967	–	ನೆಲದ ಒಡಲು	(ಕಥಾ ಸಂಕಲನ)
1972	–	ಗರ್ಜನೆ	(ಕಥಾ ಸಂಕಲನ)
1975	–	ನೆಲದ ಸಿರಿ	(ಆಯ್ದ ಕಥೆಗಳು)
1976	–	ಹರಕೆಯ ಹಣ	(ಕಥಾ ಸಂಕಲನ)
1979	–	ಒಂದು ಹುಡುಗನಿಗೆ ಬಿದ್ದ ಕನಸು	(ಕಥಾ ಸಂಕಲನ)
1986	–	ಕನ್ನಂಬಾಡಿ	(ಸಮಗ್ರ ಕಥಾಸಂಕಲನ)
1991	–	ಸುಗ್ಗಿ	(ಆಯ್ದ ಕಥೆಗಳು)
1990	–	ಶೋಕ ಚಕ್ರ	(ಕವನ ಸಂಕಲನ)
1994	–	ರಕ್ತ ಕಣ್ಣೀರು, ತೋಳಗಳ ನಡುವೆ	(ಕಾದಂಬರಿಗಳು)
1998	–	ಕೊಳಲು ಮತ್ತು ಖಡ್ಗ	(ಕಥಾ ಸಂಕಲನ)

ರಾಮಣ್ಣನವರ ಬಿಡಿ ಕಥೆಗಳು

1.	ಹಾವಿಲ್ಲದ ಹುತ್ತ	– ಪ್ರಜಾವಾಣಿ, ದೀಪಾವಳಿ ವಿಶೇಷಾಂಕ,	1962
2.	ವ್ಯಭಿಚಾರ	– ಕರ್ಮವೀರ, ದೀಪಾವಳಿ ವಿಶೇಷಾಂಕ,	1985
3.	ಕರೀಹಸು	– ಲಂಕೇಶ್ ಪತ್ರಿಕೆ, ದೀಪಾವಳಿ ವಿಶೇಷಾಂಕ,	1988
4.	ಧರ್ಮ	– ಸುಧಾ, ಯುಗಾದಿ ವಿಶೇಷಾಂಕ,	1988
5.	ನೂರು ರೂಪಾಯಿ ನೋಟು	– ಪ್ರಜಾವಣಿ, ದೀಪಾವಳಿ ವಿಶೇಷಾಂಕ,	1988
6.	ಕುಂಡ್ಯನೆಂಬೀ ನಾಡಿನಲ್ಲಿ	– ಸುದ್ಧಿಸಂಗಾತಿ, ದೀಪಾವಳಿ ವಿಶೇಷಾಂಕ,	1988
7.	ಜಾಡಮಾಲೆ	– ಪ್ರಜಾವಣಿ, ದೀಪಾವಳಿ ವಿಶೇಷಾಂಕ,	1990
8.	ಹತ್ಯೆ	– ಸುದ್ದಿಸಂಗಾತಿ, ದೀಪಾವಳಿ ವಿಶೇಷಾಂಕ,	1990
9.	ಆಳುಮಗ	– ಸುಧಾ, ಯುಗಾದಿ ವಿಶೇಷಾಂಕ,	1990

ಕಥಾ ಸಾಹಿತ್ಯ

ಡಾ॥ ಬೆಸಗರಹಳ್ಳಿ ರಾಮಣ್ಣನವರು ಐದು ಕಥಾ ಸಂಕಲನಗಳು, ಒಂದು ಸಮಗ್ರ ಕಥಾ ಸಂಕಲನ, ಎರಡು ಕಾದಂಬರಿಗಳು ಮತ್ತು ಒಂದು ಕವನ ಸಂಕಲನವನ್ನು ರಚಿಸಿದ್ದಾರೆ.

"ನೆಲದ ಒಡಲು"(1967) ಇವರ ಮೊಟ್ಟಮೊದಲ ಕಥಾ ಸಂಕಲನ ಇದರಲ್ಲಿ ಒಟ್ಟು ಏಳು ಕಥೆಗಳಿವೆ. ಈ ಕಥೆಗಳು 'ನಿರ್ಮಲ', 'ಸುಧಾ', 'ಪ್ರಬುದ್ಧ' 'ಕರ್ನಾಟಕ' ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ಇವೆಲ್ಲವುಗಳನ್ನು ಒಟ್ಟಿಗೆ ಸೇರಿಸಿ 'ವಿಶ್ವೇಶ್ವರ ಪ್ರಕಾಶ'ದಲ್ಲಿ ಪ್ರಕಟಿಸಿದ್ದಾರೆ. ಇಲ್ಲಿ ಬರುವ ಹಲವು ಕಥೆಗಳಲ್ಲಿ ಒಡೆದು ಹೋದ ಮನ, ಸ್ನೇಹ, ವ್ಯಕ್ತಿ, ಕುಟುಂಬ ಇವುಗಳು ಒಂದಾಗುವ ಸಹಜ ಚಿತ್ರಣವನ್ನು ಕಾಣಬಹುದು.

'ಗರ್ಜನೆ'(1972) ಇವರ ಎರಡನೇ ಕಥಾಸಂಕಲನ ಇದರಲ್ಲಿ ಒಟ್ಟು ಒಂಭತ್ತು ಕಥೆಗಳಿವೆ. ಈ ಕಥಾಸಂಕಲನವನ್ನು 'ಪ್ರಬುದ್ಧ ಪ್ರಕಾಶನ'ವು ಪ್ರಕಟಗೊಳಿಸಿದೆ. ಇಲ್ಲಿಯ ಕಥೆಗಳು ಸಾಮಾಜಿಕವಾದ ರೂಪವನ್ನು ಪಡೆದುಕೊಂಡು ಭಿನ್ನವಾಗಿವೆ. ಇಲ್ಲಿ ಬಂಡಾಯ ಪ್ರಖರವಾಗಿದ್ದು. ವರ್ಣವರ್ಗ ಸಂಘರ್ಷವು ಮೌನವಾಗಿ ವ್ಯಕ್ತವಾಗುತ್ತದೆ.

'ಹರಕೆಯ ಹಣ' (1976) ಇವರ ಮೂರನೇ ಕಥಾ ಸಂಕಲನ, ಇದರಲ್ಲಿ ಐದು ಕಥೆಗಳಿವೆ. ಈ ಸಂಕಲನವನ್ನು 'ನೆಲಮನೆ ಪ್ರಕಾಶನ'ದವರು ಪ್ರಕಟಿಸಿದ್ದಾರೆ. ಇಲ್ಲಿರುವ ಕಥೆಗಳು ಗ್ರಾಮ್ಯಲೋಕದ ವಸ್ತುವನ್ನು ಒಳಗೊಂಡಿದೆ. ನಿರ್ದಿಷ್ಟ ಪ್ರಾದೇಶಿಕತೆಯ ಹಿನ್ನಲೆಯಲ್ಲೇ ಈ

ಸಮಾಜದ ಬೃಹತ್ ಭಾಗವಾದ ಬದುಕಿನ ಸ್ತರಗಳನ್ನು ಚಿತ್ರಿಸುವ ಮತ್ತು ಅಲಕ್ಷ್ಯಕ್ಕೀಡಾದ ಜನಾಂಗದ ಬದುಕಿನ ಸಾಂಸ್ಕೃತಿಕ ಶೋಷಣೆಯ ಸೂಕ್ಷ್ಮಗಳು ಅಭಿವ್ಯಕ್ತಿಗೊಂಡಿವೆ. ಪಟ್ಟಭದ್ರರು ಹಾಗೂ ಅಧಿಕಾರಶಾಹಿಯ ನಡವಳಿಕೆ ಮತ್ತು ವ್ಯಕ್ತಿ ನಿಷ್ಠ ಪ್ರತಿಭಟನೆಯ ಇತಿಮಿತಿಗಳನ್ನು ಸಾಂಸ್ಕೃತಿಕ ಸಾಮಗ್ರಿಯ ಹಿನ್ನೆಲೆಯಲ್ಲಿ ಹಿಡಿದಿಟ್ಟಿದ್ದಾರೆ.

'ಒಂದು ಹುಡುಗನಿಗೆ ಬಿದ್ದ ಕನಸು' (1979) ಕಥೆಗಾರರ ಅನುಭವಗಳನ್ನು ಸಾಕಷ್ಟು ತುಂಬಿಕೊಂಡ ನಾಲ್ಕನೇ ಕಥಾಸಂಕಲನ ಇಲ್ಲಿ ಒಟ್ಟು ಏಳು ಕಥೆಗಳಿವೆ. ಈ ಕಥಾಸಂಕಲನವನ್ನು 'ನೆಲಮನೆ ಪ್ರಕಾಶ' ದಿಂದ ಪ್ರಕಟಿಸಲಾಗಿದೆ. ಇಲ್ಲಿನ ಸಾಕಷ್ಟು ಕಥೆಗಳಲ್ಲಿ ತುರ್ತು ಪರಿಸ್ಥಿತಿಯ ಘೋರ ವಾತಾವರಣ, ನಡುಕ ಹುಟ್ಟಿಸುವ ರೀತಿಯಲ್ಲಿ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಕೆಲವು ಕಥೆಗಳಲ್ಲಿ ದೇಶದ ಹಲವು ಸಮಸ್ಯೆಗಳು ತೆರೆದುಕೊಂಡಿವೆ. ಜೊತೆಗೆ ಸ್ನೇಹ ಸಂಬಂಧಿತ ಕತೆಗಳು ಹಾಗೂ 'ಬೇಲ'ದಲ್ಲಿ ಶೃಂಗಾರದ ನಿರ್ವಹಣೆ ಅಶ್ಲೀಲದ ದಡ ಮುಟ್ಟದಂತೆ ಮಧುರವಾಗಿ ಚಿತ್ರಿತವಾಗಿದೆ.

'ಕೊಳಲು ಮತ್ತು ಖಡ್ಗ' (1998)ವು ಇವರ ಐದನೇ ಕಥಾ ಸಂಕಲನವಾಗಿದೆ. ಇಲ್ಲಿ 'ಕನ್ನಂಬಾಡಿ'ಯ ಏಳು ಕಥೆಗಳು ಮತು ಅನಂತರ ಬರೆದ ಹೊಸ ಕತೆಗಳಿಂದ ಕೂಡಿದೆ. ಈ ಸಂಕಲನವು ಬೆಂಗಳೂರಿನ ಕ್ರೈಸ್ತ ಕಾಲೇಜಿನಿಂದ ಪ್ರಕಟವಾಗಿದೆ. ಇಲ್ಲಿ ಬಂದಿರುವ ಕಥೆಗಳು ಕೊಳಲಿನ ಮಧುರ ನಾದದಂತೆ ಮತ್ತು ಖಡ್ಗದಂತೆ ಹರಿತವಾಗಿಯೂ ಇರುವುದರಿಂದ ಈ 'ತಲೆಬಹರ'ವನ್ನು ನೀಡಲಾಗಿದೆ.

'ನೆಲೆದ ಸಿರಿ' (1975) ಮತ್ತು 'ಸುಗ್ಗಿ' (1991) ಇವು ಆಯ್ದ ಕಥಾಸಂಕಲನವಾಗಿವೆ. ನೆಲೆದಸಿರಿಯನನು 'ನೆಲಮನೆ ಪ್ರಕಾಶನ' ಪ್ರಕಟಿಸಿದೆ, ಈ ನೆಲದ ಸಿರಿಯಲ್ಲಿ ಒಟ್ಟು 14 ಕಥೆಗಳಿವೆ ಇದನ್ನು ಪದವಿ ತರಗತಿಗಾಗಿ ಆಯ್ದು ಸಿದ್ಧಪಡಿಸಿದ ಸಂಕಲನವಾಗಿದೆ. ಸುಗ್ಗಿ ಸಂಕಲನದಲ್ಲಿ 11 ಕಥೆಗಳಿವೆ. ಈ ಸಂಕಲನವನ್ನು ಗ್ರಾಮೀಣ ಭಾರತದ ಕಥಾಸಾಮ್ರಾಟ 'ಪ್ರೇಮಚಂದ'ರಿಗೆ ಅರ್ಪಿಸಿದ್ದಾರೆ.

'ಕನ್ನಂಬಾಡಿ' (1986) ಇದು ರಾಮಣ್ಣನವರ ಸಮಗ್ರ ಕಥಾ ಸಂಕಲನ, ಇವರು 1962 ರಿಂದ 1985 ರವರೆಗೆ ಬರೆದ ಎಲ್ಲಾ ಕಥೆಗಳು ಇದರಲ್ಲಿ ಸೇರಿಕೊಂಡಿವೆ. ಆದರೆ ಈ ಅವಧಿಯಲ್ಲಿ ಬರೆದ ಅವರ ಉತ್ತಮ ಕಥೆಯಾದ 'ಕಣಿವೆಯ ಅಂಚು' ಈ ಸಂಕಲನ ದಿಂದ ತಪ್ಪಿಸಿಕೊಂಡಿವೆ. ಈ ಸಂಕಲನದಲ್ಲಿ ಒಟು 35 ಕಥೆಗಳಿವೆ. ಇದಕ್ಕೆ ವಿಮರ್ಶಕ ಶ್ರೀ ಕೆ.ಎಸ್. ಭಗವಾನರು ಉತ್ತಮ ಮುನ್ನುಡಿ ಬರೆದಿದ್ದಾರೆ.

* * * * *

ಅಡಿ ಟಿಪ್ಪಣಿಗಳು

1. ಸ.ಚಿ. ರಮೇಶ – ಡಾ॥ ಬೆಸಗರಹಳ್ಳಿ ರಾಮಣ್ಣನವರ ಜೀವನ ಚರಿತ್ರೆ, ಪುಟ ಸಂ. 28

2. ಕೆ.ಎಸ್. ಭಗವಾನ್ – ಕನ್ನಂಬಾಡಿ ಮುನ್ನುಡಿ, ಪುಟ ಸಂ. 18

ಅಧ್ಯಾಯ – ೨

ಸಣ್ಣಕಥೆಗಳ ಉಗಮ, ಪ್ರಾರಂಭ ಮತ್ತು ಬೆಳವಣಿಗೆ

ಅಧ್ಯಾಯ – 2

ಸಣ್ಣ ಕಥೆಯ ಉಗಮ ಪ್ರಾರಂಭ ಮತ್ತು ಬೆಳವಣಿಗೆ

ಸಣ್ಣ ಕಥೆಯ ಉಗಮ

ಕಥೆಗಳ ಉಗಮಕಾಲ ಅನಾದಿ, ಕಥೆಗಳ ಸೃಷ್ಟಿಕರ್ತ ಯಾರೆಂಬುದಕ್ಕೆ ಆಧಾರಗಳು ದೊರೆಯುವುದಿಲ್ಲ. ಜನರಿಂದಲೇ ಜನಪದವಾಗಿ ಕಥೆಯು ಬರುತ್ತಲೇ ಇರುತ್ತವೆ. ಹೀಗೆ ಜನರಿಂದ ಬಂದ ಕತೆಗೆ ಬರವಣಿಗೆಯ ಜೊತೆ ನೀಡಿದಾಗ ಅದು ಸಾಹಿತ್ಯ ಕ್ಷೇತ್ರದಲ್ಲಿಯೂ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡು ತನ್ನದೇ ಆದ ಛಾಪು ಮೂಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಕತೆಗಳು ಪ್ರತಿಯೊಬ್ಬರ ಬದುಕಿಗೂ ಅಂಟಿಕೊಂಡಂತೆಯೇ ಇರುತ್ತವೆ. ಮನುಷ್ಯ ಹುಟ್ಟಿದಾಗಿ ನಿಂದಲೂ ಒಂದಲ್ಲ ಒಂದು ಕತೆಯನ್ನು ಕೇಳಿರುತ್ತಾನೆ ಇಲ್ಲವೇ ಹೇಳಿರುತ್ತಾನೆ. ಕತೆಯನ್ನು ಹೇಳದ ಕೇಳದ ವ್ಯಕ್ತಿಯನ್ನು ಹುಡುಕುವುದು ನೀರಿನಲ್ಲಿ ಮೀನಿನ ಹೆಜ್ಜೆಯನ್ನು ಹುಡುಕಿದಷ್ಟೇ ಕಷ್ಟ. "ಕಥೆಗಳೆಂದರೆ ಶ್ರೀ ಸಾಮಾನ್ಯರಿಗೆ ಒಂದು ಜಗತ್ತಿದ್ದಂತೆ. ಆ ಜಗತ್ತಿನಲ್ಲಿ ಅವರೇ ಸಾಮ್ರಾಟರಾಗಿ ತಮ್ಮ ಯುಕ್ತಿ, ಶಕ್ತಿ, ಚಲುವುಗಳಿಗೆ ಒಪ್ಪುವಂತೆ ಆಡಳಿತ ನಡೆಸುತ್ತಾರೆ, ಕೊಲ್ಲುತ್ತಾರೆ, ಕಾಪಾಡುತ್ತಾರೆ, ನಗುತ್ತಾರೆ, ಅಳುತ್ತಾರೆ, ರಕ್ತದ ಹೊಳೆಯನ್ನೇ ಹರಿಸುತ್ತಾರೆ. ನಗೆಯ ಬೆಳದಿಂಗಳನ್ನೇ ಚೆಲ್ಲುತ್ತಾರೆ."[1]

ಜನಪದ ಪರಂಪರೆಯಲ್ಲಿ ಕಥೆಯ ಸಾಹಿತ್ಯ ರಾಶಿ–ರಾಶಿಯಾಗಿರುವುದನ್ನು ನೋಡಬಹುದು ಒಬ್ಬರ ಬಾಯಿಂದ ಮತ್ತೊಬ್ಬರ ಬಾಯಿಗೆ ಹರಡುತ್ತಾ ಬಂದಿರುವ ಅಜ್ಜಿಯ ಕಥೆಗಳು ರಾಜ ರಾಣಿ ಕತೆಗಳು, ವೀರರ ಕತೆಗಳು, ಪೌರಾಣಿಕ ಕತೆಗಳು ಹೀಗೆ ಅನೇಕ ಕತೆಗಳಿವೆ. ಭಾರತದಲ್ಲಂತೂ ಹುಟ್ಟಿದರೊಂದು ಕಥೆ ಸತ್ತರೊಂದು ಕಥೆ, ಬಾಲ್ಯಕ್ಕೊಂದು ಕಥೆ ಮುಪ್ಪಿಗೊಂದು ಕಥೆ, ಪ್ರೀತಿಗೆ ಮತ್ತೊಂದು ಕಥೆ ಹೀಗೆ ಭಾರತ ಕತೆಗಳ ಆಗರವಾಗಿದೆ. 'ಕಥೆ' ಎಂಬುದು ಕಥನ ಸಾಹಿತ್ಯದ ಒಂದು ಪ್ರಕಾರವಾಗಿದೆ. ಕನ್ನಡದ ಸಣ್ಣಕತೆಗೆ ಪ್ರೇರಣೆ ಪಶ್ಚಿಮದಿಂದ ದೊರೆತುದುದು ನಿಜವಾದರೂ ಅದರ ಬೇರುಗಳು ಭಾರತೀಯ ಕಥನ ಪರಂಪರೆಯಲ್ಲಿರುವುದರಿಂದ ಸಣ್ಣಕತೆಯನ್ನು ಕುರಿತ ಪಾಶ್ಚಿಮಾತ್ಯ ಕಲ್ಪನೆಗಳು ನಮಗೆ ಪರ್ಯಾಪ್ತವಾಗಲಾರವು. ಭಾರತೀಯ ಸಂಸ್ಕೃತಿಯಲ್ಲಿ ಪ್ರಾಚೀನ ಕಾಲದಿಂದಲೂ ಕಥನ ಸಾಹಿತ್ಯಕ್ಕೆ ಬೇರೆ ಯಾವ ಸಂಸ್ಕೃತಿಯಲ್ಲೂ ಕಾಣದ ಪ್ರಾಶಸ್ತ್ಯ ದೊರಕಿದೆ. ಇಲ್ಲಿ ದೊರಕಿರುವ ಪ್ರಮಾಣದಷ್ಟು ಕಥನ ಸಾಹಿತ್ಯದ ಪ್ರಕಾರಗಳು ಬೇರೆಯಲ್ಲಿಯೂ ದೊರೆಯಲಾರವು ಈ ಪ್ರಕಾರವು ಭಾರತದಲ್ಲಿ ಪುರಾತನ ಕಾಲದಿಂದ ಬೆಳೆದುಬಂದಿದೆ.

ಪ್ರಾಚೀನ ಕಾಲದಿಂದಲೂ ಪುರಾಣ ಮತ್ತು ಜನಪದದಿಂದ ಪ್ರಾರಂಭವಾದ ಕಥೆಗಳು ಕಾಲಕಾಲಕ್ಕೆ ಅನೇಕ ತಿರುವುಗಳನ್ನು ಪಡೆದುಕೊಂಡು ಇಂದು ಒಂದು ಸಾಹಿತ್ಯ ಪ್ರಕಾರವಾಗಿಯೇ ಸ್ಥಾನ ಗಳಿಸಿಬಿಟ್ಟಿದೆ. ಇಂದು ನಾವು ಉತ್ತಮ ಸಣ್ಣಕಥೆಗಳಿಗೆ ಯಾವ ಯಾವ ವಿಶೇಷಣ ಹಚ್ಚುತ್ತೇವೆಯೋ ಆ ಎಲ್ಲಾ ಗುಣಗಳೂ ಹಿಂದಿನ ಕಥೆಗಳಿಗೆ ಇರಲಿಲ್ಲವಾದರೂ ಅನೇಕ ಕಥಾ ಪ್ರಕಾರಗಳನ್ನು ನಾವು ಜನಪದದಲ್ಲಿ ನೋಡಬಹುದಾಗಿದೆ. ರಮ್ಯ ಕಥೆಗಳು, ಅಸಾಮಾನ್ಯ ಕಥೆಗಳು, ಅತಿಮಾನುಷ ಕಥೆಗಳು, ಮಂತ್ರ-ಮಾಟದ ಕಥೆಗಳು, ಹಾಸ್ಯ ಕಥೆಗಳು, ನೀತಿ ಕಥೆಗಳು, ಪ್ರಾಣಿ ಕಥೆಗಳು, ವೃತ್ತಿ ಕಥೆಗಳು-ಮೊದಲಾದ ರೂಪಗಳಲ್ಲಿ ಕಾಣಿಸಿಕೊಂಡಿವೆ. 'ವೇದ-ಉಪನಿಷತ್ತು'ಗಳಲ್ಲಿ ಬರುವ ಕಥೆಗಳು, ಭಾಗವತ ಮೊದಲಾದ ಪುರಾಣಗಳು ಜನಪದದಲ್ಲಿ ಬೆಳೆದು ಬಂದ ಅಜ್ಜಿಯ ಕಥೆಗಳು, ದಾಸರಕತೆಗಳು, ರಾಮಾಯಣ ಮಹಾಭಾರತ, ರಘುವಂಶ ದಂತಹ ಮಹಾಕಾವ್ಯಗಳು, ಪಂಚತಂತ್ರದ ನೀತಿಕತೆಗಳು ಕಥಾ ಸರಿತ್ಸಾಗರ, ಶುಕ ಸಪ್ತಪದಿಗಳಂತಹ ಪರಿಕತೆಗಳು, ಬುದ್ಧ ಜಾತಕಗಳು, ಜೈನ ಕಥಾ ಸಾಹಿತ್ಯ ಹೀಗೆ ಕಥನ ಪ್ರಪಂಚ ವಿಸ್ತಾರವಾಗಿದೆ.

ದುಡಿದು ಬಂದು ದಣಿವಾದಾಗ ಮಕ್ಕಳನ್ನು ರಮಿಸಲು, ಆಡಿಸಲು, ಮಲಗಿಸಲು ಕಥೆಗಳನ್ನು ಹೇಳುವ ಪರಿಪಾಠ ಬಹು ಹಿಂದಿನಿಂದಲೂ ಬಂದಿದೆ. ಹಿಂದ ರಾಜ-ಮಹಾರಾಜರೂ ಕೂಡ ತಮ್ಮ ಒಲಗದಲ್ಲಿ ಕಥೆ ಹೇಳುವವರನ್ನು ನಿಯಮಿಸಿಕೊಳ್ಳುತ್ತಿದ್ದರು. ತೆನ್ನಾಲಿ ರಾಮಕೃಷ್ಣ ಮತ್ತು ಬೀರಬಲ್ಲರ ಹೆಸರುಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ನಮಗೆ ಕನ್ನಡದಲ್ಲಿ ಸಿಕ್ಕಿರುವ ಮೊದಲ ಕಥಾ ಸಂಗ್ರಹ ಕ್ರಿ.ಶ. 920ರಲ್ಲಿ ರಚಿತವಾದ ಶಿವಕೋಟ್ಯಾ ಚಾರ್ಯರ 'ವಡ್ಡಾರಾಧನೆ' ಯಾಗಿದೆ. ಇದರಲ್ಲಿ 19 ಜೈನ ಕಥೆಗಳಿವೆ. ನಂತರ ಬಂದ ಪಂಪ, ರನ್ನ, ಜನ್ನ, ರತ್ನಾಕರವರ್ಣಿ, ಹರಿಹರ, ಲಕ್ಷ್ಮೀಶ ಮೊದಲಾದ ಕವಿಗಳಲ್ಲಿ ಕಥನ ಕಲಾಪ್ರಿಯತೆಯನ್ನು ನಾವು ಹೇರಳವಾಗಿ ಗುರುತಿಸಬಹುದಾಗಿದೆ.

ಪಾಶ್ಚಾತ್ಯ ಶಿಕ್ಷಣದ ಪ್ರಭಾವದಿಂದಾಗಿ ಸ್ಥಳೀಯ ಸಮಾಜದಲ್ಲಿ ಒಂದು ನೂತನ ವೈಯಕ್ತಿಕ ಪ್ರಜ್ಞೆ ಜಾಗೃತವಾಗಿತ್ತು. ಐರೋಪ್ಯ ಸಾಹಿತ್ಯದ ಅನುಕರಣದಿಂದ ಈ ದೇಶದ ಸಾಹಿತ್ಯದಲ್ಲೂ ಹೊಸ ಆಭಿರುಚಿ ಮತ್ತು ಹೊಸ ಅಭಿವ್ಯಕ್ತಿ ಪ್ರಕಾರಗಳಿಗೆ ತಹತಹಗೋಚರಿಸ ಹತ್ತಿತು. ಪಾಶ್ಚಾತ್ಯ ಸಾಹಿತ್ಯದಲ್ಲಿ ಸಣ್ಣಕಥೆಯ ಮೂಲ ಪುರುಷ ಎಡ್ಗರ್ ಅಲನ್ ಪೋ. ಈತ ಅಮೇರಿಕಾ ದೇಶದ ಸಾಹಿತಿ. ಸಣ್ಣಕಥೆಯ ಸ್ವರೂಪವನ್ನು ಮೊದಲು ಗುರುತಿಸಿದನು. ಸಣ್ಣಕಥೆಗೆ ಒಂದು ಕಲಾ ಸ್ವರೂಪವನ್ನಿತ್ತು ಸಾಹಿತ್ಯದ ಸಿದ್ಧಿ ಕೃತಿಯನ್ನಾಗಿ ಮಾಡಿದ ಕೀರ್ತಿ ಫ್ರೆಂಚ್ ಮತ್ತು ರಷ್ಯಾದ ಲೇಖಕರಿಗೆ ಸಲ್ಲುತ್ತದೆ. ಮೋಪಸಾ ಮತ್ತು ಜೇಕಾಫ್ ಅವರುಗಳ ಸಣ್ಣಕಥೆಗಳು ದೊಡ್ಡ ಕ್ರಾಂತಿಯನ್ನೇ ಎಬ್ಬಿಸಿದವು. ಪಾಶ್ಚಾತ್ಯ ಸಾಹಿತ್ಯ ಸಂಪರ್ಕದಿಂದ ಭಾರತದ ಭಾಷೆಗಳಲ್ಲಿ

ಜಾಗೃತಿ ಮೊದಲು ಕಂಡು ಬಂದದ್ದು ಬಂಗಾಲಿ ಭಾಷೆಯಲ್ಲಿ. ನಂತರ ಕನ್ನಡ ಕಥೆಗಾರರು ಕನ್ನಡಿಗರ ಜೀವನಕ್ಕೆ ಸಂಬಂಧಿಸಿದ ವಸ್ತುಗಳನ್ನು ತೆಗೆದುಕೊಂಡು ಪಾಶ್ಚಾತ್ಯ ಕಥೆಗಳಲ್ಲಿನ ರೂಪವನ್ನು ಅವುಗಳಿಗೆ ಕೊಟ್ಟು ಅದರಲ್ಲಿ ತಮ್ಮ ಸ್ವೋಪಜ್ಞತೆಯನ್ನು ತೋರಿಸಿ ಉತ್ತಮ ಕಥೆಗಳನ್ನು ರಚಿಸುವಲ್ಲಿ ಮುಂದಾದರು. ಆಧುನಿಕ ಪೂರ್ಣ ರೂಪದಲ್ಲಿ ಇಂದಿನ ಜೀವನವನ್ನು ಪ್ರತಿನಿಧಿಸುತ್ತವೆ. ಒಂದು ಕಾಲದ ಈ ಕಥೆಗಳಲ್ಲಿ ರೂಪ ವೈಚಿತ್ರ್ಯ, ಕುತೂಹಲ ಮತ್ತು ಅತೀಂದ್ರಿಯ ಅನುಭೂತಿ ಮುಂತಾದವುಗಳಿಗೆ ಮಾತ್ರ ಸ್ಥಾನವಿತ್ತು. ಆದರೆ ಆಧುನಿಕ ಕಥೆಗಳಲ್ಲಿ ಜೀವನದ ಸಮಸ್ಯೆಗಳು, ಮಾನಸಿಕ ರಹಸ್ಯ ಮತ್ತು ಬಹುಮುಖದ ಅನುಭವಗಳು ದಟ್ಟವಾಗಿ ಕಂಡು ಬರುತ್ತವೆ. ಕಥನ ಸಾಹಿತ್ಯದ ಉದ್ದೇಶ ಕೇವಲ ಮನೋರಂಜನೆಯಾಗದೆ "ಇತಿಹಾಸ ಪುರಾಣಾಭ್ಯುಣ ವೇದಂ ಸಮುಪಬ್ರುಂಡಯೇತ್" ಎಂದು ಹೇಳಿರುವ ವೇದವ್ಯಾಸರು ಧರ್ಮ, ಲೌಕಿಕ ವಿವೇಕವನ್ನೂ ತಿಳಿಸುವುದಾಗಿದೆ ಎಂದು ಹೇಳಿದ್ದಾರೆ.

ಗ್ರೀಕರೂ, ರೋಮನ್ನರು ಬಹಳ ಪ್ರಾಚೀನ ಕಾಲದಿಂದಲೇ ತಮ್ಮ ಪುರಾಣಕತೆಗಳನ್ನು ಬರೆದಿಟ್ಟಿದ್ದಾರೆ. ಈಸೋಫನ ಕತೆಗಳು, ಏಸುವಿನ ಕತೆಗಳು ಇವು ಜಗತ್ತಿನ ಮೂಲೆ–ಮೂಲೆಗೂ ಪರಿಚಿತವಾಗಿವೆ. ಇನ್ನು ಕನ್ನಡದ ಸಂದರ್ಭಕ್ಕೆ ಬಂದರೆ ನಾಗವರ್ಮನ 'ಕಾದಂಬರಿ' ದುರ್ಗಸಿಂಹನ 'ಪಂಚತಂತ್ರ', ಮುದ್ದಣನ 'ರಾಮಾಶ್ವಮೇಧ', ಕೆಂಪುನಾರಾಯಣನ 'ಮುದ್ರಾಮಂಜೂಷ' ಇವುಗಳು ಸೊಗಸಾಗಿ ಮೂಡಿ ಬಂದು ಸಣ್ಣಕತೆಯ ಬೆಳವಣಿಗೆಗೆ ನಾಂದಿಯಾದವು.

ಕಥನ ಸಾಹಿತ್ಯವು ಹತ್ತೊಂಬತ್ತನೇ ಶತಮಾನದಲ್ಲಿ 'ಸಣ್ಣಕತೆ' ಎಂಬ ಪಾರಿಭಾಷಿಕ ಶಬ್ಧದಿಂದ ನಿರ್ದೇಶಿಸುವುದು ವಾಡಿಕೆಯಾಯಿತು. ಸಣ್ಣಕತೆ ಎಂಬ ಪದಪ್ರಯೋಗ ಇಂಗ್ಲೀಷಿನ 'ShortStory' ಇಂದ ಬಂದುದಾಗಿದೆ, 'Short' ಎಂಬ ಪದಕ್ಕೆ ಕೊಡುವ ಪ್ರಧಾನ ಅರ್ಥ ಹೀಗಿದೆ.

- ಸಣ್ಣಕತೆ ಸ್ಥಳ, ಕಾಲಗಳನ್ನು ತೀರ ಚಿಕ್ಕ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳುತ್ತದೆ.
- ಅದು ಅಪೇಕ್ಷಿತ ಅಥವಾ ನಿರೀಕ್ಷಿತ ಮಿತಿಗಳನ್ನು ತಲುಪುವುದಿಲ್ಲ
- ಅದು ಹೇಳುವುದು ಬಹಳ ಕಡಿಮೆ ಅಥವಾ ಸ್ವಲ್ಪದರಲ್ಲಿಯೇ ಅದು ಬಹಳಷ್ಟನ್ನು ಹೇಳುತ್ತದೆ.

ಈ ಸಣ್ಣಕತೆಯ ಪ್ರಕಾರವು ಅಪಾರವಾದ ಪ್ರಾಶಸ್ತ್ಯಯ ಪಡೆಯಲು ಮುಖ್ಯ ಕಾರಣ ಕಾಲದ ಅಭಾವ. ನಮ್ಮದು ಒಂದು ಯಂತ್ರಯುಗ, ಜೀವನ ಹೊರೆಯುವುದಕ್ಕೆ ಸಂಘರ್ಷ ಮಾಡುತ್ತಿರುವ ಮಾನವನಿಗೆ ಕಾಲಕ್ಕೆ ಮೌಲ್ಯ ಮಿತಿಮೀರಿ ಬೆಳೆದಿದೆ ಇಂತಹ ಒತ್ತಡದಿಂದಾಗಿ ಕಲಾಭಿರುಚಿಯೇ ಸತ್ತು ಹೋಗುವ ಸಾಧ್ಯತೆ ಸಂಭವಿಸಬಹುದು. ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಂಡಿರುವುದರಿಂದ ಸಣ್ಣಕತೆ, ಹೆಚ್ಚು ಹೆಚ್ಚು ಜನರನ್ನು ಮುಟ್ಟುತ್ತಿವೆ.

ನಾರ್ಮನ್ ಫ್ರೀಡ್‌ಮನ್ 'What Makes a Short Story Short' ಎಂಬ ಲೇಖನದಲ್ಲಿ Short Story ಯ ಮೀಮಾಂಸೆಯಲ್ಲಿ 'ಸಣ್ಣ' ತನವೇ ಮೂಲ ಸಮಸ್ಯೆ ಎಂದು ವಾದಿಸಿದ್ದಾನೆ. ಸುಜಾನ್ ಫರ್ಗುಸನ್‌ರವರು "ಯಾವುದೇ ಒಂದು ಲಕ್ಷಣವಾಗಲಿ ಅಥವಾ ಲಕ್ಷಣ ಸಮೂಹವಾಗಲಿ ಸಣ್ಣಕತೆಯನ್ನು ಉಳಿದ ಕಥನ ಪ್ರಕಾರಗಳಿಂದ ವಿಶಿಷ್ಟವಾದುದೆಂದು ತೋರಿಸಲಾರವು ಎಂದು ಹೇಳಿದರೆ ವ್ಯಾಲೆರಿ ಶಾಳ ಪ್ರಕಾರ ಅದೊಂದು 'ಬೆರಿಕೆಯ ಸಾಹಿತ್ಯ' ವಾಗಿದೆ. ಕಾದಂಬರಿಯು ಎಲ್ಲವನ್ನೂ ಹೇಳುತ್ತದೆ ಆದರೆ ಸಣ್ಣಕತೆ ಒಂದನ್ನು ಮಾತ್ರ ಹೇಳುತ್ತದೆ ಆದರೆ ಅಲ್ಲಿ ತೀವ್ರತೆ ಇರುತ್ತವೆ"[2] ಎಂದು ವಿ.ಎಸ್. ಪ್ರಿಚೆಟ್ ವಿವರಿಸಿದ್ದಾರೆ.

ಸಣ್ಣಕತೆಗೆ ಒಂದು ಹಾದಿಯನ್ನು ಹಾಕಿ ಅದರ ಸ್ವರೂಪವನ್ನು ವಿವರಿಸಿದ ಕೀರ್ತಿ ಬಹುಪಾಲು 'ಎಡ್ಗರ್ ಏಲನ್ ಪೊ' ಎಂಬ ಅಮೇರಿಕನಿಗೆ ಸಲ್ಲಬೇಕು. 1833ರಲ್ಲಿ ಬರೆದ "A Manuscript found in a Bottle" ಹೀಗೆ ಏಲನ್ ಪೊ ನಿಂದ ಪ್ರಾರಂಭಗೊಂಡು ಬ್ರೆಟ್‌ಹಾಟ್, ಹೆನ್ರಿಜೇಮ್ಸ್, ಓ ಹೆನ್ರಿ ಮುಂತಾದವರು ಅಮೇರಿಕಾದಲ್ಲಿ ಕಂಡು ಬಂದರೆ, ಇಂಗ್ಲೆಂಡಿನಲ್ಲಿ ರಾಬರ್ಟ್‌ಲೂಯಿಯ 'ನ್ಯೂ ಅರೇಬಿಯನ್ ನೈಲ್ಸ್', ರೆಡ್‌ಯಾರ್ಡ್ ಕಿಪ್ಲಿಂಗ್‌ನ 'ಪ್ಲೈನ್ ಟೇಲ್ಸ್ ಪ್ರಮ್ ಹಿಲ್ಸ್' ಎಂಬ ಕಥೆಗಳಿವೆ, ಮುಂದೆ ಇಂಗ್ಲೀಷಿನಲ್ಲಿ ಈ ಸಾಹಿತ್ಯ ಪ್ರಕಾರ ಮುಂದುವರೆದು ಅಲ್ಲಿ 'ಸ್ಟೀವನ್‌ಸನ್' ಪ್ರಮುಖವಾಗಿ ಕಂಡು ಬರುತ್ತಾನೆ.

ಈ ರೀತಿಯಾಗಿ ಹುಟ್ಟಿ ಬೆಳೆದ ಸಣ್ಣಕತೆ ಸಾಹಿತ್ಯ ಪ್ರಕಾರವು ಭಾರತದ ಮೂಲೆ ಮೂಲೆಗೂ ಹಬ್ಬಿ ಎಲ್ಲರ ಹೃದಯವನ್ನು ಗೆದ್ದು ವಿಶಿಷ್ಟ ಸ್ಥಾನವನ್ನು ಪಡೆದಿದೆ ಹಾಗೂ ಪಡೆಯುತ್ತಲೇ ಇದೆ.

ಸಣ್ಣ ಕಥೆಯ ಪ್ರಾರಂಭ ಮತ್ತು ಬೆಳವಣಿಗೆ

ಚಾರಿತ್ರಿಕವಾಗಿ ಹೇಳುವುದಾದರೆ ಇಪ್ಪತ್ತನೇ ಶತಮಾನದ ಪ್ರಾರಂಭವನ್ನು ಆಧುನಿಕ ಕನ್ನಡ ಸಾಹಿತ್ಯದ ಆರುಣೋದಯವೆನ್ನಬಹುದು. ಸಣ್ಣಕಥೆ ಎಂಬ ಸಾಹಿತ್ಯದ ವಿಶಿಷ್ಟ ಪ್ರಕಾರವು ಕನ್ನಡದಲ್ಲಿ ಆರಂಭವಾದುದು 1900ರಿಂದ ಈಚೆಗೆ, ಈ ಪ್ರಕಾರವನ್ನು ಆರಂಭಿಸಿದವರು ಪಂಜೆ ಮಂಗೇಶರಾಯರು. ಈ ವಿಚಾರದಲ್ಲಿ ವಿಮರ್ಶಕರಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಕನ್ನಡದಲ್ಲಿ ಸಣ್ಣಕಥೆಯ ಸ್ವರೂಪವನ್ನು ಚಿತ್ರಿಸಿ ಓದುಗರಿಗೆ ಕೊಟ್ಟವರು ಪಂಜೆಯವರೇ ಆಗಿದ್ದಾರೆ. 1900ರ ಆರಂಭದಿಂದಲೇ ಪಂಜೆಯವರು ಸಣ್ಣಕಥೆಗಳನ್ನು ಬರೆಯುತ್ತಿದ್ದು, ಅವು 'ಸುವಾಸಿನಿ' ಪತ್ರಿಕೆಯ ಸಂಚಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. 1900ರಲ್ಲಿ ಪಂಜೆಯವರು ರಚಿಸಿದ 'ನನ್ನ ಚಿಕ್ಕ ತಾಯಿ' ಯು ಹೊಸಗನ್ನಡದ ಮೊದಲ ಸಣ್ಣ ಕಥೆಯಾಗಿದೆ. ಇದು ಸಾಮಾಜಿಕ ವಿಷಯವನ್ನು

ಒಳಗೊಂಡಿದ್ದು ಇಲ್ಲಿ ಕುತೂಹಲಕರವಾದ ಕಥಾನಕವನ್ನು ಕಾಣಬಹುದಾಗಿದೆ. ಇಂದಿನ ಕನ್ನಡ ಸಾಹಿತ್ಯದ ಹರಟೆಯೆಂಬ ಪ್ರಕಾರದಲ್ಲಿ ಕಂಡು ಬರುವ ಲಕ್ಷಣಗಳೂ, ಸಣ್ಣ ಕಥೆಯ ಲಕ್ಷಣಗಳೂ ಇದರಲ್ಲಿ ಕಂಡು ಬರುತ್ತವೆ. ಯಾವುದೇ ಸಾಹಿತ್ಯದಲ್ಲಿ ಹೊಸ ಪ್ರಭೇದವೊಂದು ತಲೆ ಹಾಕಲು ಹವಣಿಸುತ್ತಿರುವಾಗ ಪೂರ್ತಿ ಸಮರ್ಪಕವಾಗಿ ಹಾಗೂ ಸುಧಾರಿತವಾಗಿ ಪ್ರಕಟಗೊಳ್ಳುತ್ತದೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಸಾಹಿತ್ಯವು ಬೆಳೆಯುತ್ತಲೇ ಇರುವುದರಿಂದ ಬೆಳವಣಿಗೆಯ ಹಂತಗಳನ್ನು ಗಮನಿಸಬೇಕಾಗುತ್ತದೆ. ಈ ಹಿನ್ನಲೆಯಿಂದ ಇದು ಆರಂಭದ ಸಣ್ಣಕಥೆ ಎಂದು ಹೇಳಬಹುದು. ಕಥೆಗಾರಿಕೆಯ ಜಾಣ್ಮೆ, ವಿಡಂಬನೆ, ಹಾಸ್ಯ, ವ್ಯಂಗ್ಯ, ಪಾತ್ರ ಚಿತ್ರಣ, ಕಥೆಯ ಬೆಳವಣಿಗೆ ಮುಂತಾದ ಘಟಕಗಳನ್ನೂ ಇದರಲ್ಲಿ ಗಮನಿಸಬಹುದು. ಇವರ ಅನೇಕ ಕಥೆಗಳಲ್ಲಿ ಆಕರ್ಷಕ ಕಥನ ಶೈಲಿ, ಸರಳವಾದ ಗದ್ಯ ಕಥಾ ನಿರೂಪಣೆಗಳನ್ನು ಕಾಣುತ್ತೇವೆ.

ಪಂಜೆಯವರ ನಂತರ ಕಾಲಕ್ರಮದಲ್ಲಿ ಬರುವ ಕಥೆಗಾರರೆಂದರೆ ಎಂ.ಎನ್. ಕಾಮತ್, ಕೆರೂರು ವಾಸುದೇವಾಚಾರ್ಯ, ಎಸ್.ಜಿ. ಶಾಸ್ತ್ರಿ, ಮೊದಲಾದವರು, ಪಾಶ್ಚಾತ್ಯ ಕಥೆಗಳ ತೀವ್ರ ಪ್ರಭಾವದಿಂದ ಹೊಸಗನ್ನಡ ಸಾಹಿತ್ಯ ಆಗ ತಾನೇ ಆರಂಭವಾಗುತ್ತಿರುವ ಸಂದರ್ಭದಲ್ಲಿ ಈ ಮೇಲಿನ ಕಥೆಗಾರರದು "ಸಂಪೂರ್ಣವಾಗಿ ಸಾಹಿತ್ಯದ ವ್ಯಕ್ತಿತ್ವವಾಗಿರದೆ, ಭಾಷಾಭಿಮಾನ ದೇಶಪ್ರೇಮ, ಸಾಮಾಜಿಕ ಸುಧಾರಣೆ, ಪತ್ರಿಕಾ ವ್ಯವಸಾಯ ಮುಂತಾದ ಇತರ ಹವ್ಯಾಸಗಳ ನಡುವೆ ಹಂಚಿ ಹೋಗುತ್ತಿತ್ತು. ಹಾಗಾಗಿ ಅವರಾರು ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನು ಕಂಡುಕೊಳ್ಳಲು ಕಲಾನಿಷ್ಠ ಹೋರಾಟ ನಡೆಸಿದ್ದು ಕಾಣಬರುವುದಿಲ್ಲ. ಈ ಮಾತಿಗೆ ಪಂಜೆಯವರೊಬ್ಬರು ಅಪವಾದವಾಗಿದ್ದಾರೆ"[3] ಆದರೆ ಇವರ ಕಥನ ಕ್ರಮ, ಆಯ್ದ ವಸ್ತು ಇವುಗಳಲ್ಲಿ ಪರಂಪರೆಗಿಂತ ಭಿನ್ನವಾದ ಹೊಸತನವನ್ನು ಕಾಣಬಹುದಾಗಿದೆ.

ಎಸ್.ಜಿ. ಶಾಸ್ತ್ರಿ ಹಾಗೂ ಎಂ.ಎನ್. ಕಾಮತರ ಕಥೆಗಳಲ್ಲಿ ಸಮಾಜ ಸುಧಾರಣೆಗಳು ಮುಖ್ಯವಾಗಿ ಕಂಡು ಬರುವ ವಿಚಾರ. ಇವರಲ್ಲಿ ಕಾಮತರ ಕಥೆಗಳು, ಪಂಜೆಯವರ ಕಥೆಗಳಲ್ಲಿ ಕಂಡು ಬರುವಂತೆ ಸಹಜತೆ ಹಾಗೂ ತಿಳಿಹಾಸ್ಯದಿಂದ ಕೂಡಿದೆ. ಕಾಮತರದ್ದು ಪ್ರಬಂಧದ ಧಾಟಿಯ ಕಥೆಗಾರಿಕೆ. ಎಸ್.ಜಿ.ಶಾಸ್ತ್ರಿಗಳು ಆಯ್ದುಕೊಳ್ಳುವ ವಸ್ತು ಶ್ರೀಮಂತ ವರ್ಗದ ಸಮಸ್ಯೆಗಳು ಇವರ ಕಥೆಗಳು ಸರಳವಾದ ಹಾಗೂ ಸ್ಪಷ್ಟವಾದ ನಿರೂಪಣೆಯಿಂದ ಕೂಡಿವೆ. ಎಂ.ಎನ್. ಕಾಮತರ 'ಅಂದಿನ ಆಲೂರು', ಕೆರೂರು ವಾಸುದೇವಾಚಾರ್ಯರ 'ತೊಳೆದ ಮುತ್ತು', 'ಪ್ರೇಮ ವಿಜಯ', ಬೆಳಗಿದ ದೀಪಗಳು'– ಕಥಾ ಸಂಕಲನಗಳು ಪ್ರಕಟವಾದವು. ಎಸ್.ಜಿ.ಶಾಸ್ತ್ರಿಗಳ ಕಿಟ್ಟು ಮತ್ತು ಲೀಲ', 'ಹಾಗಲಕಾಯಿ ಮತ್ತು ಮಳೆ ಹೂವು' ಕಥೆಗಳೂ ಪ್ರಕಟವಾದವು. ನಂತರ 1914ಕ್ಕೆ ಬಂದರೆ ಕನ್ನಡ ಸಣ್ಣಕಥೆಯ ವಿಪುಲ ರಚನೆಗಳು ಕಂಡು ಬರುತ್ತವೆ. ಒಟ್ಟಿನಲ್ಲಿ

"ಪಂಜೆ, ಕಾಮತ, ಹಾಗೂ ಕೆರೂರರ ಬರವಣಿಗೆಯಿಂದಲೇ ಸಣ್ಣಕತೆಗೆ ಬೇಕಾದ ವಸ್ತು ಸಾಮಗ್ರಿ ಹಾಗೂ ಭಾಷಾ ರೂಪ ಕನ್ನಡಕ್ಕೆ ದೊರೆತವು ಎಂದು ಹೇಳಬಹುದು."[4] ಹೀಗೆ ಪಂಜೆ ಮಂಗೇಶರಾಯರು, ಕಾಮತರು, ಕೆರೂರರು ಹಾಗೂ ಶಾಸ್ತ್ರೀಗಳ ಕಥೆಗಳು ಕನ್ನಡ ಸಣ್ಣ ಕಥೆಯ ಮೊದಲ ದಿನಗಳಾಗಿ ನಿಲ್ಲುತ್ತವೆ.

ಕನ್ನಡಸಣ್ಣ ಕಥೆಗಳ ಕ್ಷೇತ್ರದಲ್ಲಿ ಮಾಸ್ತಿಯವರದು ಬಹು ದೊಡ್ಡ ಹೆಸರಾಗಿದೆ. ಇದರ 'ರಂಗಪ್ಪನ ದೀಪಾವಳಿ' ಕನ್ನಡ ಸಣ್ಣ ಕಥಾ ಕ್ಷೇತ್ರದಲ್ಲಿ ಹೊಸ ಸಾಹಿತ್ಯ ಲೋಕವೊಂದನ್ನು ನಿರ್ಮಿಸಿತು. ಅಲ್ಲದೆ ಮಾಸ್ತಿಯವರು ಸಣ್ಣ ಕಥೆಯನ್ನು ತಮ್ಮ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮವನ್ನಾಗಿ ಮಾಡಿಕೊಂಡರು. ಸಣ್ಣಕಥೆಗಳ ಬಗೆಗೆ, ಮುಂದಿನ ಲೇಖಕರುಗಳ ಬಗೆಗೆ ಹಾಗೂ ಸಣ್ಣಕಥೆಗಳ ಭವಿಷ್ಯದ ಬಗೆಗೆ ಮಾಸ್ತಿಯವರು ಚಿಂತಿಸಿದರು ಮತ್ತು ಅಭಿಮಾನ ಆಸಕ್ತಿಗಳಿಂದ ನವ ಕಥೆಗಾರರನ್ನು ಕುರಿತು ಪ್ರೋತ್ಸಾಹಕರ ಮಾತುಗಳನ್ನಾಡಿದರು. ಸಣ್ಣ ಕಥೆಗೆ ನಿಜವಾದ ಸಾಹಿತ್ಯಕ ಸ್ವರೂಪ ಬಂದಿದ್ದು ಮಾಸ್ತಿಯವರಿಂದಲೇ ಎನ್ನಬಹುದು. 1920ರಲ್ಲಿ ಪ್ರಕಟವಾದ ಮಾಸ್ತಿಯವರ 'ಕೆಲವು ಸಣ್ಣಕಥೆಗಳಯ' ಎಂಬ ಸಂಕಲನದಲ್ಲಿ ಹತ್ತು ಸಣ್ಣಕಥೆಗಳಿವೆ. ಇವರ ಕಥನ ಶೈಲಿ ಸರಳ ಹಾಗೂ ಆತ್ಮೀಯವಾಗಿರುವುದನ್ನು ಇದರಲ್ಲಿ ನೋಡಬಹುದು. ಕೆಲವು ಕಥೆಗಳಂತೂ ತಿಳಿಹಾಸ್ಯದಿಂದ, ವರ್ಣನೆಯ ಶೈಲಿಯಿಂದ ರಂಜಿಸುತ್ತವೆ. ಇಂದು ನಾವು ಅನೇಕ ಹೊಸ ಹೊಸ ತಂತ್ರಗಳಿಂದ ಕೂಡಿದ ಕಥೆಗಳನ್ನು ಓದುತ್ತಿದ್ದರೂ ಮಾಸ್ತಿಯವರ 'ರಂಗಪ್ಪನ ದೀಪಾವಳಿ' ಯನ್ನಂತೂ ಮರೆಯುವಂತಿಲ್ಲ. ಮಾಸ್ತಿಯವರ ಲಲಿತ ಶೃಂಗಾರ ಹಾಸ್ಯಮಯವಾದ ಕಥಾವಸ್ತು. ಜೀವನವನ್ನು ನೋಡುವ ಅಶಾಮಯ ದೃಷ್ಟಿ, ಗಂಭೀರ ಶೈಲಿ ಹೊಸ ಸಾಹಿತ್ಯ ಯುಗವನ್ನೇ ಆರಂಭಿಸಿ ಸಣ್ಣಕಥೆಯ ಪ್ರಕಾರಕ್ಕೆ ವಿಶಿಷ್ಟವಾದ ಸ್ಥಾನವನ್ನು ದೊರಕಿಸಿ ಕೊಟ್ಟವು. ಜೀವನವನ್ನು ಅದರ ವಾಸ್ತವದ ನೆಲೆಯಲ್ಲಿಯೇ ಕಂಡು, ಅರ್ಥ ಮಾಡಿಕೊಂಡು ಚಿತ್ರಿಸುವ ಮತ್ತು ತಿಳಿಸುವ ರೀತಿ ಮಾಸ್ತಿಯವರ ಕಥೆಗಳಲ್ಲಿ ಕಂಡು ಬರುತ್ತದೆ. ಅವರ ಕಥೆಗಳಲ್ಲಿ ಬದುಕಿನ ದಾರಿಯನ್ನು ತಿಳಿಯುವ ಕಾಳಜಿಗಿಂತ, ಬದುಕಿನ ದಾರಿಯನ್ನು ನಿರ್ದೇಶಿಸುವ ಆತ್ಮವಿಶ್ವಾಸ ವಿಶೇಷವಾಗಿದೆ. "ಪಂಪ ಹಾಗೂ ಕುಮಾರವ್ಯಾಸರಂತಹ ನಮ್ಮ ಪ್ರಾಚೀನ ಕವಿಗಳಲ್ಲಿಯ ಪರಿಪೂರ್ಣತೆಯೇ ಶ್ರೀನಿವಾಸರ ಕಥೆಗಾರಿಕೆಯಲ್ಲಿಯೂ ಕಾಣುತ್ತದೆ. ಕನ್ನಡ ನಾಡಿನ ಸಮಕಾಲೀನ ಜೀವನದ ಸಮಗ್ರ ಚಿತ್ರಣ ಅಲ್ಲಿ ದೊರೆಯುತ್ತದೆ. ಅದರೊಂದಿಗೆ ನಾಡಿನ ಹೊಸ ಸಂಸ್ಕೃತಿ ಪಾಕಗೊಳ್ಳುತ್ತಿದೆ."[5] ಆದ್ದರಿಂದಲೇ ಇವರನ್ನು 'ಸಣ್ಣಕಥೆಯ ಜನಕ' ಎಂದು ಕರೆದಿರುವುದು. ಹೀಗೆ ಈ ಮೇಲೆ ನೋಡಿದ ಎಲ್ಲಾ ಅಂಶಗಳು ಕನ್ನಡದಲ್ಲಿ ಸಣ್ಣಕಥೆಯ ಸಾಹಿತ್ಯದ ಪ್ರಾರಂಭವಾಗುವಾಗ ಒಂದಲ್ಲ ಒಂದು ರೀತಿಯಲ್ಲಿ ಸಹಾಯಕವಾಗಿ ಸಣ್ಣಕಥೆಯ ವಿಕಾಸದ ದೃಷ್ಟಿಯಿಂದ ಮಹತ್ತರವಾದುದಾಗಿದೆ.

ನವೋದಯ:

ಕನ್ನಡದಲ್ಲಿ ನವೋದಯ ಯುಗ ನಮ್ಮ ದೇಶದ ಇತಿಹಾಸದಲ್ಲಿಯ ಒಂದು ಮಹತ್ವದ ಕಾಲಾವಧಿಗೆ ಹೊಂದಿಕೊಂಡಿದೆ. ಇದು ಭಾರತ ಒಂದು ದೇಶವಾಗಿ ತನ್ನನ್ನು ತನ್ನ ಸಂಸ್ಕೃತಿಯನ್ನು ಹೊಸದಾಗಿ ಗುರುತಿಸಿಕೊಂಡ ಅವಧಿ ಇದೇ ಕಾಲದಲ್ಲಿ ಇಂಡಿಯಾ ದೇಶ ಸ್ವಾತಂತ್ರ್ಯದ ಕನಸು ಕಂಡು ಹೋರಾಟದಲ್ಲಿ ತೊಡಗಿತ್ತು. ಆ ಕಾಲದಲ್ಲಿ ಸ್ವಾತಂತ್ರ್ಯ ಸುವರ್ಣಯುಗವೊಂದರ ಆಗಮನದ ಸೂಚನೆಯನ್ನು ನೀಡಿತ್ತು. ಸಹಜವಾಗಿಯೇ ಆ ಕಾಲದ ಬರವಣಿಗೆ ಆಶಾವಾದಿಯಾಗಿತ್ತು. ಆದರ್ಶೀಕರಣ ಅದರ ಅಂಕಿತವಾಗಿತ್ತು. ಮನುಷ್ಯ ಚೇತನ ಮೂಲಭೂತವಾಗಿ ಉದಾತ್ತವಾದದ್ದು ಎಂಬ ರಮ್ಯ(ರೊಮ್ಯಾಂಟಿಸಂ) ಕಲ್ಪನೆ ಸಾಮಾನ್ಯರ ಬದುಕಿನತ್ತ ಗಮನ ಸೆಳೆಯುವಂತೆ ಮಾಡಿತು. ಸಮಾಜದ ಕೆಳವರ್ಗದ ಜನರ ಸುಖ-ದುಃಖಗಳು ಈ ಕಾಲದ ಸಣ್ಣ ಕಥೆಗಳಿಗೆ ವಿಶೇಷವಾದ ವಸ್ತುಗಳಾದವು. ಜೊತೆಗೆ ಮಾನವೀಯ ಮೌಲ್ಯಗಳು, ಗಂಡು-ಹೆಣ್ಣಿನ ಸಂಬಂಧ, ಭಾರತೀಯ ಸಂಸ್ಕೃತಿ, ಕಟ್ಟುಪಾಡುಗಳ ಚಿಂತನೆ, ತ್ಯಾಗ ಇವು ನವೋದಯ ಕತೆಗಳ ಮುಖ್ಯ ಧೋರಣೆಯಾಗಿದೆ.

1920ರವರೆಗೆ ನವೋದಯ ಸಾಹಿತ್ಯವು ಹೆಚ್ಚು ಪ್ರಸಿದ್ಧಿಯಾಗಿತ್ತು ಆಗ ಅಲ್ಲಿ ಕಥಾಕ್ಷೇತ್ರದಲ್ಲಿ ಹೆಸರು ಮಾಡಿದವರು ಮಾಸ್ತಿಯವರು ಇವರ ಪ್ರಭಾವದಲ್ಲಿ ಬೆಳೆದು ಬಂದ ಆನಂದರೂ ಕೂಡ ಉತ್ತಮ ಕಥೆಗಳನ್ನು ಬರೆದರು. 'ಭವತಿ ಭಿಕ್ಷಾಂದೇಹಿ', 'ಹೆಂಡತಿಯ ಕಾಗದ', 'ನಾನು ಕೊಂದ ಹುಡುಗಿ', 'ಪದ್ಮಪಾಕ', 'ರಾಧೆಯ ಕ್ಷಮೆ', 'ಬೇವು ಬೆಲ್ಲ' – ಮುಂತಾದ ಅನೇಕ ಕಥೆಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. "ಆನಂದರು ಕಥೆಗಾರರೆಂದು ಹೆಸರು ಪಡೆದಿದ್ದು ತಮ್ಮ ಪ್ರಣಯ ಕಥೆಗಳಿಂದ ಮುಂದೆ ಕೂಡ ಅವರ ಹೆಸರು ನಿಲ್ಲುವುದು ಈ ಕಥೆಗಳಿಂದಲೆ, ಕೆ.ಎಸ್. ನರಸಿಂಹಸ್ವಾಮಿಯವರ 'ಮೈಸೂರು ಮಲ್ಲಿಗೆ'ಯ ಕವನಗಳಂತೆ ಈ ಕಥೆಗಳ ಸೌರಭ ಬಹುಕಾಲ ಬಾಳಬಲ್ಲದಾಗಿದೆ."[6] ಈ ವೇಳೆಗಾಗಲೇ ಸಾಕಷ್ಟು ಲೇಖಕರು ಸಣ್ಣ ಕಥಾ ಕ್ಷೇತ್ರದಲ್ಲಿ ಕೃಷಿ ಮಾಡತೊಡಗಿದರು. ಅವರಲ್ಲಿ ಶ್ರೀ ಸ್ವಾಮಿ, ಕೆ. ಗೋಪಾಲಕೃಷ್ಣರಾವ್, ಆನಂದ ಕಂದ (ಬೆಟಗೇರಿ ಕೃಷ್ಣಶರ್ಮ), ದೇವುಡು, ಕೃಷ್ಣಕುಮಾರ ಕಲ್ಲೂರ್, ರಾಜರತ್ನಂ, ಭಾರದ್ವಜ, ರಂ.ಶ್ರೀ ಮುಗಳಿ, ಗೂರೂರು ರಾಮಸ್ವಾಮಿ ಅಯ್ಯಂಗಾರ್, ಪಡುಕೋಣೆ ರಮಾನಂದರಾಯರು, ಕೊಡಗಿನ ಗೌರಮ್ಮ, ಕೆ. ಶಿವರಾಮಕಾರಂತರು, ದ.ರಾ.ಬೇಂದ್ರೆ, ಪು.ತಿ.ನ, ಕುವೆಂಪು, ಮುಂತಾದ ಅನೇಕ ಲೇಖಕರು ಕೆಲವು ಕಥೆಗಳನ್ನು ಬರೆದರು ಮತ್ತು ಕಥಾ ಸಂಕಲನಗಳನ್ನು ಪ್ರಕಟಿಸಿದರು. ಈ ತಲೆಮಾರಿನಲ್ಲಿ ಬಂಗಾಲಿ, ಗುಜರಾತಿ, ಮರಾಠಿ, ಹಿಂದಿ, ತೆಲುಗು, ತಮಿಳು ಮುಂತಾದ ಅನ್ಯ ಸಾಹಿತ್ಯದ ಕಥೆಗಳು ಹೇರಳವಾಗಿ ಕನ್ನಡಕ್ಕೆ ಅನುವಾದಗೊಂಡವು ಜಲಧರ, ಕ್ಷೀರಸಾಗರ,

ಎಂ.ವಿ.ಸೀ, ಕೆ.ಶಂಕರಭಟ್ಟ, ಜಡಭರತ, ಸೇಡಿಯಾಪು ಕೃಷ್ಣಭಟ್ಟ, ಭಾರತೀಪ್ರಿಯ, ಎ.ಆರ್.ಕೃಷ್ಣಶಾಸ್ತ್ರಿ (ಶ್ರೀಪತಿ) ಮೊದಲಾದವರೂ, ಕೂಡ ಸಣ್ಣ ಕಥಾ ಕ್ಷೇತ್ರದಲ್ಲಿ ಕೆಲವು ಪ್ರಯೋಗಗಳನ್ನು ಮಾಡಿದ್ದಾರೆ.

ಈ ತಲೆಮಾರಿನಲ್ಲಿ ಕಥಾಸಾಹಿತ್ಯವು ಸಮೃದ್ಧವಾಗಿ ಬೆಳವಣಿಗೆಯನ್ನು ಪಡೆದುಕೊಂಡಿತು. ಹಳ್ಳಿಯಿಂದ ದಿಲ್ಲಿಯವರೆಗೂ ಒಂದಲ್ಲ ಒಂದು ವಿಧದಲ್ಲಿ ಮೈಚಾಚಿಕೊಂಡಿದ್ದ ಸಮಸ್ಯೆಗಳ ಸುರುಳಿಯನ್ನು ಬಿಚ್ಚಲಾಗಿದೆ. ಮಾನವನ ಸಮಗ್ರ ಬದುಕಿನಲ್ಲಿ ಅಡಗಿಕೊಂಡಿದ್ದ ಅನೇಕ ಒಳಮುಖಗಳನ್ನು ತಾಯ್ನಾಡಿನ ಪ್ರೇಮಕ್ಕಾಗಿ ತಹತಹಿಸುತ್ತಿದ್ದ ಧ್ವನಿಗಳಿಗೆ ಕೊರಳನ್ನು ಅನೇಕ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿದ್ದ ಮುಗ್ಧರಿಗೆ ಧಾರ್ಮಿಕ, ಆಧ್ಯಾತ್ಮಿಕ, ವೈಚಾರಿಕ ವಿಚಾರಗಳನ್ನು ತಿಳಿಸುವಲ್ಲಿ ಮತ್ತು ಅದರ ಒಳನೋಟಗಳನ್ನು ತೆರೆದಿಡುವಲ್ಲಿ ಆಯ್ದುಕೊಳ್ಳುವ ವಸ್ತುವಿನ ಮೂಲಕ ಚಿತ್ರಿಸಲಾಗಿದೆ. ಈ ಸಂದರ್ಭದಲ್ಲಿ ಸಣ್ಣ ಕಥಾ ರಚನೆಗೆ ವಿಶಾಲವಾದ ಹೆದ್ದಾರಿಯೇ ನಿರ್ಮಾಣವಾಯಿತು.

ದೇವುಡು ಅವರ 'ವೈಣಿಕ', 'ಸೋಲೋ ಗೆಲುವೋ' ಸಂಗ್ರಹಗಳು ನೀಳ್ಗತೆಗಳಿಂದ ಕೂಡಿವೆ. ಇವರ ಕಥೆಗಳಲ್ಲಿ ಉತ್ತಮ ಕಲೆಗಾರಿಕೆಯಿದ್ದು ವಿಷಮ ದಾಂಪತ್ಯದ ಸಮಸ್ಯೆಗಳು ಚಿತ್ರಿತವಾಗಿವೆ. ಕೃಷ್ಣಕುಮಾರ ಕಲ್ಲೂರರು ಕೂಡ 'ಬಿಸಿಲುಗುದುರೆ' ಎಂಬ ಕಥಾಸಂಗ್ರಹವನ್ನು ಪ್ರಕಟಿಸಿದ್ದಾರೆ. ಗೆಳತನ ಹಾಗೂ ಆದರ್ಶ ಪ್ರಿಯತೆಗಳು ಈ ಕಥೆಗಳಲ್ಲಿಯ ವೈಚಾರಿಕತೆಯ ಅಂಶಗಳಾಗಿವೆ. ರಂ.ಶ್ರೀ. ಮುಗಳಿಯವರ 'ಕನಸಿನ ಕೆಳದಿ' ಸಂಗ್ರಹದಲ್ಲಿರುವ 'ವಿತಂತು ವೇಶ್ಯೆ', 'ನೀರಿನ ನಾರಪ್ಪ', 'ಕೂಟಪ್ರಶ್ನೆ' ಉತ್ತಮ ಕಥೆಗಳಾಗಿವೆ. ಇವರ ಕಥೆಗಳು ಮಧ್ಯಮ ವರ್ಗದ ಜನರ ನೋವು, ಬಡತನ, ನಿರುದ್ಯೋಗ, ಮುಂತಾದ ಸಮಸ್ಯೆಗಳನ್ನು ಚಿತ್ರಿಸುತ್ತವೆ. ಅಷ್ಟೇ ಅಲ್ಲದೆ ವಾಸ್ತವತೆಯನ್ನು ದಾಖಲಿಸುತ್ತವೆ. ವಿನೋದ ಮತ್ತು ಹಾಸ್ಯಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಿದ ಗೊರೂರು ರಾಮಸ್ವಾಮಿ ಅಯ್ಯಂಗಾರರು ಜಾನಪದ ಜೀವನದ ಹಿನ್ನಲೆಯಿಂದ ಅನೇಕ ಉತ್ತಮ ಕಥೆಗಳನ್ನು ಬರೆದಿದ್ದಾರೆ. ಗೊರೂರರ 'ಹಳ್ಳಿಯ ಚಿತ್ರ', 'ಗರುಡಗಂಬದ ದಾಸಯ್ಯ', ಬೆಸ್ತರ ಕರಿಯ', 'ಪ್ರಾಯಶ್ಚಿತ್ತ', 'ಕೋರ್ಟಿನಲ್ಲಿ ಗೆದ್ದ ಎತ್ತು', 'ಹಾರುವಯ್ಯ ಹಜಾಮನಾದದ್ದು', 'ಡೊಂಕಬಾಲ' ಮುಂತಾದ ಕಥೆಗಳು ಜನಪದದ ಬದುಕನ್ನು ದಾಖಲಿಸುತ್ತವೆ. ಗೊರೂರರಲ್ಲಿ ಗ್ರಾಮಜೀವನ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿದೆ. ಇವರ ಕಥೆಗಳು ನೀಳ್ಗತೆಗಳಾದರೂ ತಂತ್ರದ ಇಕ್ಕಟ್ಟಿನಿಂದ ನರಳದೆ ಸುಗಮವಾದ ಕಥನ ಶೈಲಿಯಿಂದ ಸಾಗುತ್ತವೆ. ಜೀವನದ ಸರಳ ಸೌಂದರ್ಯವನ್ನು ಯಥಾವತ್ತಾಗಿ ದಾಖಲಿಸುವ ಕಲೆಗಾರಿಕೆ ಗೂರೂರರಿಗೆ ಸಿದ್ಧಿಸಿದೆ ಎನ್ನಬಹುದು. ಪಡುಕೋಣೆ ರಮಾನಂದರಾಯರೂ ಕೂಡ ಗೊರೂರರಂತೆ ಹಾಸ್ಯ ಪ್ರವೃತ್ತಿಯ ನಗೆ ಬರಹಗಾರರು ರಮಾನಂದರಾಯರು 'ವಿಮೋಚನೆ', 'ನನ್ನ ಭಾವ', 'ನಾನು ನಾಗಣ್ಣ'

ಮುಂತಾದ ಉತ್ತಮ ಕಥೆಗಳನ್ನು ಬರೆದಿದ್ದಾರೆ. ಇದೇ ಸಂದರ್ಭದಲ್ಲಿ ಉತ್ತಮ ಸಣ್ಣಕಥೆಗಳನ್ನು ಬರೆದ ಕೊಡಗಿನ ಗೌರಮ್ಮ ಹಣ್ಣಿನ ಅನೇಕ ಸಮಸ್ಯೆಗಳನ್ನು ಚಿತ್ರಿಸಿದ್ದಾರೆ. ವಸ್ತುವಿನ ಆಯ್ಕೆ ಮತ್ತು ನಿರ್ವಹಣೆಯಿಂದ ಉತ್ತಮ ಬರವಸೆಯನ್ನು ಹುಟ್ಟಿಸಿದ ಈ ಕಥೆಗಾರ್ತಿ 'ಕಂಬನಿ', 'ಮರದ ಬೊಂಬೆ' ಮುಂತಾದ ಕಥೆಗಳನ್ನು ರಚಿಸಿದ್ದರೆ. ನವೋದಯ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಲ್ಲಿ ಹೆಸರುಗಳಿಸಿರುವ ಕೆ. ಶಿವರಾಮಕಾರಂತ, ದ.ರಾ.ಬೇಂದ್ರೆ, ಪು.ತಿ. ನರಸಿಂಹಾಚಾರ್, ಕುವೆಂಪು ಮುಂತಾದ ಲೇಖಕರು ಕೆಲವು ಸಣ್ಣಕಥೆಗಳನ್ನು ಬರೆದಿರುವವರಾದೂ ಈ ಕ್ಷೇತ್ರದಲ್ಲಿ ಹೆಚ್ಚು ಕೃಷಿ ಮಾಡಿಲ್ಲ. ಜಲಧರರ ಭಾಷಾಬಳಕೆ ಸಮರ್ಥ ರೀತಿಯಲ್ಲಿರುವುದನ್ನು 'ಜಾಬಾಲಿ', 'ತಿರುವು ಮುರುವು' ಕಥೆಗಳು ದಾಖಲಿಸುತ್ತವೆ. ಕ್ಷೀರಸಾಗರರ 'ನಮ್ಮೂರಿನ ಪಶ್ಚಿಮಕ್ಕೆ' ಮತ್ತು ಎಂ.ವಿ.ಸೀ ಅವರ 'ಹುಚ್ಚನ ಹಂಬಲ' ಉತ್ತಮ ಕಥೆಗಳಾಗಿವೆ. ಕೆ. ಶಂಕರಭಟ್ಟರ 'ಅದ್ದಿಟ್ಟು', ಜಡಭರತದ 'ಡೊಗಜ್ಜನ ಬಹಿಷ್ಕಾರ' ಉತ್ತಮ ರಚನೆಗಳಾಗಿವೆ. ಈ ವೇಳೆಗಾಗಲೇ ಪ್ರಗತಿಶೀಲದ ವಾತಾವರಣ ನಿರ್ಮಾಣವಾಗುತ್ತಿತ್ತು. ಇದೇ ಅವಧಿಯಲ್ಲಿ ನವೋದಯ ಮಾರ್ಗದಲ್ಲೆ ಅಶ್ವತ್ಥ, ಎಸ್.ಅನಂತ ನಾರಾಯಣ, ದ.ಬಾ. ಕುಲಕರ್ಣಿ, ರಾಮಚಂದ್ರ ಕೊಟ್ಟಲಗಿ, ವರದರಾಜ ಹುಯಿಲಗೋಳ ಮುಂತಾದವರು ಕಥಾಕ್ಷೇತ್ರದಲ್ಲಿ ಕೃಷಿ ಮಾಡಿದ್ದಾರೆ. ಇಷ್ಟೇ ಅಲ್ಲದೆ ಅನೇಕ ಲೇಖಕಿಯರಾದ ವಾಣಿ, ಜಯಲಕ್ಷ್ಮಿ ಕಾತ್ಯಾಯಿನಿ, ಎಂ.ಸೀತಾರತ್ನ, ಸಾವಿತ್ರಮ್ಮ ಉಷಾದೇವಿ ಮೊದಲಾದವರು ಕಥಾಕ್ಷೇತ್ರಕ್ಕೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ.

ಪ್ರಗತಿಶೀಲ

ಕನ್ನಡದಲ್ಲಿ ಪ್ರಗತಿಶೀಲಸಾಹಿತ್ಯವು ಸಣ್ಣ ಕಥೆಗಳಿಂದಲೇ ಆರಂಭವಾದುದನ್ನು ಕಾಣಬಹುದಾಗಿದೆ. 1936 ರಿಂದ 1942 ರವರೆಗೆ ನಡೆದ ರಾಜಕೀಯದ ಆಂದೋಲನಗಳು ಪ್ರಗತಿಶೀಲತೆಯ ವಾತಾವರಣವನ್ನು ನಿರ್ಮಾಣ ಮಾಡಿದವು. ಪ್ರಗತಿಶೀಲರ ಕಥೆಗಳಲ್ಲಿ ಮಾನವ ಸಮಾಜದ ಬಗ್ಗೆ ಸಂವೇದನೆ ವ್ಯಕ್ತಿಯ ಬಗ್ಗೆ ಸಂವೇದನ ಶೀಲತೆ, ಸಮಸ್ಯೆ ತುಂಬಿದ ಸಂಘರ್ಷಣಾ ಪೂರ್ಣ ಜೀವನದ ವರ್ಣನೆ ಮುಂತಾದ ವಿಷಯಗಳು ಮೂಡಿಬಂದಿವೆ. ಈ ಕಾಲದ ಕಥೆಗಳು ವೈಶಿಷ್ಟ್ಯದಿಂದ ಕೂಡಿದ್ದುದಲ್ಲದೆ ವಿಚಾರಣಾತ್ಮಕವಾಗಿಯೂ ಇದ್ದವು. ಈ ಕಥೆಗಾರರು ಗಾಂಧೀಯುಗದ ಸಾಮಾಜಿಕ ಆಂದೋಲನದಿಂದಲೂ ಸಾಕಷ್ಟು ಪ್ರಭಾವಿತರಾಗಿದ್ದರು. ಬಡವರ ಬಗ್ಗೆ ಸಹಾನುಭೂತಿ, ಶೋಷಣೆಯ ವಿರುದ್ಧ ವಿರೋಧ, ದೀನದಲಿತರ ಕಲಾಪೂರ್ಣ ಜೀವನ ದರ್ಶನ, ಸಾಮಾಜಿಕ ವೈಷಮ್ಯ ಮುಂತಾದವುಗಳ ವಿರುದ್ಧ ಈ ಕಥೆಗಾರರ ಲಕ್ಷ್ಯ ನೆಟ್ಟಿತ್ತು. ಈ ಕಾಲದ ಅನೇಕ ಕಥೆಗಾರರು ಗ್ರಾಮೀಣ ಸಮಾಜದ ರೀತಿ ನೀತಿಗಳನ್ನು ಯಥಾವತ್ತಾಗಿ ಚಿತ್ರಿಸಲು ಬಹಳ ಆಸಕ್ತಿ ತೋರಿಸಿದ್ದಾರೆ. ಸ್ವಾತಂತ್ರ್ಯದ ನಂತರ ಸಾಮಾಜಿಕ, ಸಾಂಸ್ಕೃತಿಕ

ಮತ್ತು ರಾಜಕೀಯ ಜೀವನದಲ್ಲಿ ಕ್ರಾಂತಿಕಾರಿ ಬದಲಾವಣೆಗಳು ಗೋಚರಿಸತೊಡಗಿದವು. ಅನೇಕ ಪ್ರತಿಭಾವಂತ ಲೇಖಕ ಲೇಖಕಿಯರು ಕಥಾ ರಚನೆಯಲ್ಲಿ ಹೊಸ ಪ್ರಯೋಗಗಳನ್ನು ಮಾಡುವುದರಲ್ಲಿ ಆಸಕ್ತರಾದರು ವಿಭಿನ್ನ ಪತ್ರಿಕೆಗಳೂ ಸಹ ಕಥಾ ವಿಭಾಗಕ್ಕೆ ಮಹತ್ವದ ಸ್ಥಾನಕೊಟ್ಟವು.

ಕನ್ನಡ ನವೋದಯ ಸಾಹಿತ್ಯದ ವಿರುದ್ಧ ತೀವ್ರ ಅಸಹನೆಯನ್ನು ವ್ಯಕ್ತಪಡಿಸುತ್ತಾ ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯ ಸೃಷ್ಟಿಯಾಗತೊಡಗಿತು. ಅ.ನ. ಕೃಷ್ಣರಾಯರ ಮುಂದಾಳುತನದಲ್ಲಿ 1943ರಲ್ಲಿ 'ಪ್ರಗತಿಶೀಲ ಲೇಖಕರ ಸಂಘ' ಸ್ಥಾಪನೆಗೊಂಡಿತು. ಪ್ರಗತಿಶೀಲ ಸಾಹಿತ್ಯ ಚಳುವಳಿಯಲ್ಲಿ ಪ್ರಮುಖವಾಗಿ ಅ.ನ.ಕೃ., ನಿರಂಜನ, ಬಸವರಾಜ ಕಟ್ಟೀಮನಿ, ಚದುರಂಗ, ತ.ರಾ.ಸು. ತ್ರಿವೇಣಿ, ಅನುಪಮಾ ನಿರಂಜನ, ಭಾರತೀಪ್ರಿಯ, ವ್ಯಾಸರಾಯ ಬಲ್ಲಾಳ, ಪಾಟೀಲ ಪುಟ್ಟಪ್ಪ, ಹಿರೇಮಲ್ಲೂರ್ ಈಶ್ವರನ್ ಮುಂತಾದ ಲೇಖಕರು ಕೃಷಿ ಮಾಡತೊಡಗಿದರು. ಸಾಮಾಜಿಕ ವಿಷಮತೆ, ಶೋಷಣೆಗಳ ವಿರುದ್ಧ ಕುರಿತು ಅಸಮಾಧಾನದಿಂದ ಬರೆಯಬೇಕೆಂಬುದರ ಜೊತೆಗೆ, ಸಮಾಜದ ಪರಂಪರಾಗತ ಮೌಲ್ಯಗಳನ್ನು ತೀವ್ರವಾಗಿ ಪ್ರಶ್ನಿಸಬೇಕೆಂಬುದು ಪ್ರಗತಿಶೀಲ ಲೇಖಕರ ವಾದವಾಗಿತ್ತು. ನವೋದಯ ಸಾಹಿತ್ಯ ಮುಖ್ಯವಾಗಿ ಮಧ್ಯಮ ವರ್ಗದ ಹಗಲುಗನಸಿನ ಕಲಾತ್ಮಕ ಅಭಿವ್ಯಕ್ತಿಗೆ ಸಿಕ್ಕಿ ಅದು ಬದುಕಿನ ಕಟು ವಾಸ್ತವತೆಯ ಸ್ಪರ್ಶವನ್ನು ಕಳೆದುಕೊಂಡಿದೆ. ಎಂಬುದು ಈ ಪ್ರಗತಿಶೀಲ ಲೇಖಕರ ಮುಖ್ಯ ಆಪಾದನೆಯಾಗಿದೆ. ಲೇಖಕನಾದವನು ತನ್ನ ಸಾಮಾಜಿಕ ಜವಾಬ್ದಾರಿಯನ್ನು ಅರಿತುಕೊಂಡು ನಮ್ಮ ಸಂಸ್ಕೃತಿಯಲ್ಲಿನ ದೋಷ, ಕ್ರೌರ್ಯ, ಶೋಷಣೆಗಳನ್ನು ಬಯಲಿಗೆಳೆಯಬೇಕು ಎಂದು ಇವರು ಪ್ರತಿಪಾದಿಸಿದರು. ಇದರ ಜೊತೆಗೆ ಸಹಜವಾಗಿಯೇ ರಷ್ಯಾದ ಕ್ರಾಂತಿಕಾಲದ ಕಮ್ಯೂನಿಷ್ಟ್ ಸಾಹಿತ್ಯ ಬೇರೆ ಸ್ಫೂರ್ತಿಯ ಸೆಲೆಯಾಗಿ ಪರಿಣಮಿಸಿತು. ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯ ಚಳುವಳಿಯ ತೀವ್ರತೆ ಒಂದು ರೂಪ ಪಡೆಯುವುದಕ್ಕೆ ಮೊದಲೇ ನವೋದಯದ ಹಿನ್ನಲೆಯಲ್ಲಿ ಪ್ರಕಟವಾದ ಆನಂದಕಂದರ 'ಮಾಲ್ಕಿಹಕ್ಕು', ಭಾರತೀಪ್ರಿಯರ 'ಮೋಚಿ' ಮುಂತಾದವರ ಕಥೆಗಳು ಪ್ರಗತಿಪರ ವಸ್ತುಗಳನ್ನು ಒಳಗೊಂಡಿದ್ದು ಗಮನಾರ್ಹವಾದ ಕಥೆಗಳಾಗಿರುವುದನ್ನು ನೋಡಿದರೆ ಸಾಹಿತ್ಯ ಕೃತಿಗೆ ಕಾಲವನ್ನು ಮೀರುವ ಸಾಧ್ಯತೆ ಇದೆ. ಆದ್ದರಿಂದ ಸಾಹಿತ್ಯ ಚಳುವಳಿಯ ಅವಧಿಯನ್ನು ಇಷ್ಟೇ ಎಂದು ಗೆರೆ ಎಳೆದು ಅಧ್ಯಯನ ಮಾಡುವುದು ತುಂಬಾ ಪ್ರಯಾಸದ ಕೆಲಸವಾಗುತ್ತದೆ. ಪ್ರಗತಿಶೀಲ ಲೇಖಕರು ಬರೆದ ಕಥೆಗಳಲ್ಲಿ ಮುಖ್ಯವಾಗಿ ಸಾಮಾಜಿಕ ಸುಧಾರಣೆ ಹಾಗೂ ಸಾಮಾಜಿಕ ನ್ಯಾಯ ಪ್ರತಿಪಾದನೆ ಮುಖ್ಯ ಕಾಳಜಿಯಾಗಿ ಕಂಡು ಬರುತ್ತದೆ. ಪ್ರಗತಿಶೀಲ ಚಳುವಳಿಯ ಪ್ರಮುಖರಾದ ಅ.ನ.ಕೃಷ್ಣರಾಯರ ವೈಚಾರಿಕ ಲೇಖನಗಳಲ್ಲಿ ಕಾಣುವ ಗಟ್ಟಿಯಾದ ಪ್ರಗತಿಶೀಲ ನಿಲುವು

ಅವರ ಕಥೆಗಳಲ್ಲಿ ಅಷ್ಟಾಗಿ ಕಂಡು ಬರುವುದಿಲ್ಲ. ವೇಶ್ಯಾಸಮಸ್ಯೆ, ಹಸಿವು, ಶೋಷಣೆ, ಕೋಮುವಾದ ಮುಂತಾದ ವಸ್ತುಗಳ ಆಯ್ಕೆಯ ದೃಷ್ಟಿಯಿಂದ ಅ.ನ.ಕೃ ಉತ್ತಮ ಲೇಖಕರಾಗಿದ್ದಾರೆ. ಅ.ನ.ಕೃ. ಅವರ 'ಅನ್ನದ ಕೂಗು' ಕಥೆ ಹಸಿವಿನ ಉತ್ಕಟ ಸ್ಥಿತಿಯನ್ನು ಬಣ್ಣಿಸಿದರೆ 'ಮಣ್ಣಿನ ಮಗ' ಕಥೆ ಶೋಷಣೆಯ ಮುಖವನ್ನು ಚಿತ್ರಿಸುತ್ತದೆ. ಇವರ 'ಅಗ್ನಿಕನ್ಯೆ' ಕಥೆ ಸಂಕಲನದಲ್ಲಿ ಉತ್ತಮ ಪ್ರಗತಿಶೀಲ ಕಥೆಗಳಿರುವುದನ್ನು ಕಾಣಬಹುದಾಗಿದೆ. ಅ.ನ.ಕೃ. ಅವರ ಕಥೆಗಳಿಗಿಂತ ಅವರ ವಾದ ಉಳಿದವರ ಮೇಲೆ ಹೆಚ್ಚು ಪ್ರಭಾವವನ್ನು ಬೀರಿತು.

ಚದುರಂಗರು ಪ್ರಗತಿಶೀಲ ಕಥೆಗಾರರಲ್ಲಿ ಅತ್ಯಂತ ಹೆಚ್ಚಿನ ಸ್ವಸ್ಥತೆಯಿಂದ ಕಥೆಗಳನ್ನು ಬರೆದ ಲೇಖಕರಾಗಿದ್ದಾರೆ ಇವರ 'ನಾಲ್ಕು ಮಳ ಭೂಮಿ', 'ತುಜೀಫ್', 'ತುದಾಂಡ್', 'ತುಬದ್‌ರೆಡೀ' ಮುಂತಾದ ಕಥೆಗಳು ಪ್ರಗತಿಶೀಲ ಮಾರ್ಗದ ಅತ್ಯುತ್ತಕ ಕಥೆಗಳಾಗಿವೆ. ಇದೇ ಮಾರ್ಗದ ಮತ್ತೋರ್ವ ಪ್ರಮುಖ ಕಥೆಗಾರ ತ.ರಾ. ಸುಬ್ಬರಾವ್. ಇವರ '0–0=0', 'ಗಿರಿಮಲ್ಲಿಗೆಯ ನಂದನದಲ್ಲಿ', 'ರಾಜಾಸಾಹೇಬ', 'ಎಕ್ಸ್' ಮುಂತಾದ ಕಥೆಗಳಲ್ಲಿ ಪ್ರಗತಿಶೀಲ ಧೋರಣೆಯನ್ನು ಕಾಣಬಹುದಾಗಿದೆ. ಈ ಸಾಹಿತ್ಯ ಪ್ರಕಾರದಲ್ಲಿ ಕಂಡುಬರುವ ಜನಪ್ರಿಯ ಕಥೆಗಾರ ಬಸವರಾಜ ಕಟ್ಟೀಮನಿ, ಇವರ 'ಗಿರಿಜಾ ಕಂಡ ಸಿನಿಮಾ', 'ಜೀವನ ಕಲೆ', 'ಬೂಟ್ ಪಾಲೀಷ್', 'ನೆರೆಯಿಂದ ಹೊರಗೆ', 'ಅಜ್ಞಾತವಾಸಿ' ಇತ್ಯಾದಿ ಕಥೆಯಲ್ಲಿ ಹೊಸತನವನ್ನು ತರುವಂತಹ ನಿರಂಜನರ 'ಕೊನೆಯ ಗಿರಾಕಿ', 'ಎಣ್ಣೆ–ಚಿಮಣಿ ಎಣ್ಣೆ', 'ವಾರದ ಹುಡುಗ', 'ಕಾತ್ಯಾಯಿನಿ', 'ರಕ್ತ ಸರೋವರ', 'ಅನ್ನಪೂರ್ಣ', ಮತ್ತಿತರ ಕಥೆಗಳು ಉತ್ತಮ ರಚನೆಗಲಾಗಿವೆ. ಈ ಮಾರ್ಗದಲ್ಲಿ ಕಥಗಾರ್ತಿ ಅನುಪಮಾ ನಿರಂಜನರ 'ಕಣ್ಮಣಿ', 'ರೂವಾರಿ ಲಕ್ಷ್ಮಿ', 'ಹೃದಯ ಸಮುದ್ರ' ಕಥೆಗಳನ್ನು ಪ್ರಕಟಿಸಿದ್ದಾರೆ. ಹೀಗೆ ಇನ್ನೂ ಅನೇಕ ಕಥೆಗಳು ಈ ಹಂತದಲ್ಲಿ ಪ್ರಮುಖವಾಗಿವೆ.

ನವ್ಯ:

1950ರ ನಂತರ ನವ್ಯಕಾಲದ ಜೊತೆಜೊತೆಯಲ್ಲಿಯೇ ಕನ್ನಡ ಸಣ್ಣಕತೆಗೆ ಸಂವೇದನೆ ಯೊಂದು ಬೆಳೆದು ಬಂದಿತು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ತೀವ್ರವಾಗಿ ಕಾಣಿಸಿಕೊಂಡ ಕೆಲವು ಸಾಮಾಜಿಕ ಬದಲಾವಣೆಗಳು ಹಲವಾರು ತರುಣ ಕಥೆಗಾರರು ಹೊಸ ಹಾದಿಯನ್ನು ಪ್ರವೇಶಿಸುವಂತೆ ಮಾಡಿದವು. ನಮ್ಮ ಕಥೆಗಾರರ ದೃಷ್ಟಿಯಲ್ಲಿ ಅಂದಿನ ಸಮಾಜದ ನೈತಿಕ, ಧಾರ್ಮಿಕ, ಆಧ್ಯಾತ್ಮಿಕ ನಂಬಿಕೆ ಹಾಗೂ ಮೌಲ್ಯಗಳು ಶೋಧನೆಗೆ ಗುರಿಯಾದವು. ನವ್ಯ ಕಾಲದ ಕತೆಗಳಲ್ಲಿ ವ್ಯಕ್ತಿಯನ್ನು ಕೇಂದ್ರವಾಗಿಟ್ಟುಕೊಂಡು ತಾತ್ವಿಕತೆಯ ಅಂತರ್ಮುಖಿಯತೆಗೆ ಮಾನ್ಯ ನೀಡಲಾಗಿತ್ತು. ಇಲ್ಲಿ ಧಾರ್ಮಿಕ ಸಂಪ್ರದಾಯಗಳ ಶೋಧನೆ ಮುಖ್ಯವಾಗಿತ್ತು. ನವ್ಯ

ಕಥೆಗಾರರು ತಮ್ಮ ಕಥೆಗಳಲ್ಲಿ ಪ್ರತಿಮೆ–ಸಂಕೇತಗಳನ್ನು ತೋರಿಸುವ ಮೂಲಕ ಕತೆಗಳ ನಿರ್ಮಾಣ ಮಾಡುತ್ತಿದ್ದರು. ಇಲ್ಲಿ ಕಾಮವನ್ನು ಸಂಕೇತಗಳ ಮೂಲಕ ಧಾರ್ಮಿಕ ಕೌಟುಂಬಿಕ ಕಟ್ಟಳೆಗಳಿಂದ ಮುಂದುವರೆದು ವಿವೇಚಿಸುವುದು ಹಾಗೂ ಇಂತಹ ಸಂದರ್ಭದಲ್ಲಿ ವ್ಯಕ್ತಿಯ ದೇಹ ಮತ್ತು ಮನಸ್ಸಿನಲ್ಲಿ ಉಂಟಾದ ವ್ಯತ್ಯಾಸ, ಇಲ್ಲಿ ಹಸಿವಿಗಿಂತ ಕಾಮವನ್ನು ಹೆಚ್ಚಾಗಿ ವರ್ಣಿಸಲಾಗಿದೆ.

ಮಾನವನ ಬದುಕಿನ ಹಾಗೂ ಚಿಂತನೆಯ ರೀತಿ ನೀತಿಗಳು ಕಾಲಕಾಲಕ್ಕೆ ಬದಲಾಗುವಂತೆ ಸಾಹಿತ್ಯದ ರೂಪವೂ ಬದಲಾಗುತ್ತದೆ. ಬದಲಾದ ಸ್ವರೂಪ ಕ್ರಮೇಣ ಸಂಪ್ರದಾಯವಾಗುತ್ತದೆ, ಜಡವಾಗುತ್ತದೆ. ಇಂಥ ಜಡ ಸಂಪ್ರದಾಯದಲ್ಲಿ ಭಾಷೆ ತನ್ನ ತೀವ್ರತೆಯನ್ನು ಕಳೆದುಕೊಂಡು ಸವಕಲಾಗುತ್ತದೆ. ಹೀಗೆ ತನ್ನ ತೀವ್ರತೆಯ ಕಾವು ಕಳೆದುಕೊಂಡ ಮೇಲೆ ಹೊಸ ಸಾಹಿತ್ಯಕ್ಕೆ ಹಾದಿ ಮಾಡಿಕೊಡುತ್ತದೆ. ಈ ಹಿನ್ನಲೆಯಲ್ಲೇ ಪ್ರಗತಿಶೀಲ ಕಥೆಗಳ ರಚನೆಯನ್ನು ಹಿಂದೆ ಸರಿಸಿ ನವ್ಯ ಕಥಾ ಸಾಹಿತ್ಯ ಸೃಷ್ಟಿಯಾಯಿತು. ನವ್ಯ ಸಾಹಿತ್ಯ ಮೊದಲು ಕಾಣಿಸಿಕೊಂಡದ್ದು ಕಾವ್ಯದಲ್ಲಿಯಾದರೂ, ಸಣ್ಣಕಥೆಯೂ ಕೂಡ ಅದರ ಗಾಢವಾದ ಪ್ರಭಾವಕ್ಕೆ ಒಳಗಾಯಿತು. ಸಮಾಜ ನಂಬಿದ್ದ ಮೌಲ್ಯಗಳಲ್ಲಿ ವ್ಯಕ್ತಿ ತನ್ನ ನಂಬಿಕೆ ಕಳೆದುಕೊಂಡಾಗ ಅವನು ಮಾನಸಿಕವಾಗಿ ಅನುಭವಿಸುವ ಏಕಾಕಿತನ, ಜೀವನದ ಯಾಂತ್ರಿಕತೆ, ನಡೆನುಡಿಗಳಲ್ಲಿನ ಅರ್ಥಹೀನತೆಗಳನ್ನು ನವ್ಯ ಕಥೆಗಾರರು ಚಿತ್ರಿಸಿದ್ದಾರೆ. ಮನುಷ್ಯನ ಒಂಟಿತನವನ್ನು ಗುರುತಿಸಿದರು. ಭೂತ ಭವಿಷ್ಯತ್ತುಗಳನ್ನು ಒಪ್ಪದ ವರ್ತಮಾನವೇ ಮುಖ್ಯ ಎಂಬುದು ನವ್ಯದವರ ನಿಲುವು. ನವ್ಯದ ಕಥೆಗಾರರು ತಮ್ಮ ಅನುಭವವನ್ನು ಶೋಧಿಸಿಕೊಳ್ಳುತ್ತಾ ತಮ್ಮನ್ನು ತಾವೇ ಹುಡುಕಿಕೊಳ್ಳುವ ಆತ್ಮಾನ್ವೇಷಣೆಯನ್ನು ಮಾಡತೊಡಗಿದರು. ಸಂಕೇತ ಮತ್ತು ಪ್ರತಿಮೆಗಳನ್ನು ಹೇರಳವಾಗಿ ಬಳಸಿದರು. ಈಗಾಗಲೇ ಭಾಷೆ ಜಡವಾಗಿ ಹಳೆಜಾಡು ಹಿಡಿದಿತ್ತು. ನವ್ಯದಲ್ಲಿ ಹೊಸ ಹುಡುಕಾಟದೊಂದಿಗೆ ಭಾಷೆ ಕೂಡ ಹೊಸ ಹೊಸ ದಾರಿಗಳನ್ನು ಕಂಡುಕೊಂಡಿತು. ತನ್ನ ರಚನಾ ವಿಧಾನದಲ್ಲಿ ಬೇರೆ ಬೇರೆ ತಂತ್ರಗಳನ್ನು ಬಳಸಿ ಆಡುಭಾಷೆಯನ್ನು ಸೊಗಸಾಗಿ ರೂಢಿಸಿಕೊಂಡರು. ಜಿ.ಎಚ್.ನಾಯಕರು ಹೇಳುವಂತೆ "ಪ್ರಗತಿಶೀಲರ ಕೆಲವು ಕಥೆಗಳಲ್ಲಿ ನವ್ಯತೆ ಮುಖ್ಯವಾಗಿ ತಂತ್ರ ವಿಧಾನದಲ್ಲಿ ಹೊಳಹು ಹಾಕಿತ್ತಾದರೂ ಕಥಾವಸ್ತು, ತಂತ್ರವಿಧಾನ ಮತ್ತು ಸಾಹಿತ್ಯ ಧೋರಣೆಗೆ ಸಂಬಂಧಿಸಿದಂತೆ ಒಟ್ಟಿನಲ್ಲಿ ನವ್ಯತೆ, ಮೊಟ್ಟಮೊದಲು ಕಂಡುಬಂದುದು ಬಿ.ಸಿ.ರಾಮಚಂದ್ರರ ಕಥೆಗಳಲ್ಲಿ, ಪ್ರಗತಿಶೀಲ ಕಥೆಗಳಲ್ಲಿಯಂತೆ ಸಾಮಾಜಿಕ ಸುಧಾರಣೆ ಮತ್ತು ಸಾಮಾಜಿಕ ನ್ಯಾಯ ಪ್ರತಿಪಾದನೆ ಇವುಗಳಿಂದ ಕಥೆಗಳ ದೃಷ್ಟಿಕೇಂದ್ರವನ್ನು ತಪ್ಪಿಸಿ ಮನುಷ್ಯನ ಮನಸ್ಸು ಮತ್ತು ಮೂಲ ಪ್ರವೃತ್ತಿಗಳ ಕಡೆ ತಿರುಗಿಸಿದ್ದು ಚಾರಿತ್ರಿಕವಾಗಿ ಮಹತ್ವದ ಸಂಗತಿಯಾಗಿದೆ."[7] ಬಿ.ಸಿ.ರಾಮಚಂದ್ರಶರ್ಮರ 'ಮಂದಾರ ಕುಸುಮ' (1953) ಕನ್ನಡ ನವ್ಯ ಕಥೆಗಳ ಮೊದಲ ಸಂಗ್ರಹ ಎಂದು ಪರಿಗಣಿಸಿ ಶರ್ಮರನ್ನು

ಆರಂಭದ ಪ್ರಾತಿನಿಧಿಕ ನವ್ಯ ಕಥೆಗಾರರು ಎನ್ನಬಹುದಾಗಿದೆ. ಇವರು 'ಏಳನೆಯ ಜೀವ', 'ಬೆಳಗಾಯಿತು', 'ಕತೆಗಾರನ ಕತೆ', ಮುಂತಾದ ಕಥಾ ಸಂಗ್ರಹಗಳನ್ನು ಹೊರ ತಂದಿದ್ದಾರೆ. ಕಾಮ ಮತ್ತು ಬದುಕನ್ನು ಕುರಿತಂತೆ ಮನುಷ್ಯನ ಮೂಲ ಪ್ರವೃತ್ತಿಗಳನ್ನು ತಮ್ಮ ಕಥೆಗಳಲ್ಲಿ ಸಮರ್ಥವಾಗಿ ವಿಶ್ಲೇಷಿಸಿದ್ದಾರೆ. ಮತ್ತೊಬ್ಬ ಕಥೆಗಾರರಾದ ಯಶವಂತ ಚಿತ್ತಾಲರು ಶ್ರೇಷ್ಠ ನವ್ಯ ಕಥೆಗಾರರಾಗಿದ್ದಾರೆ. ಇವರು 'ಸಂದರ್ಶನ', 'ಅಬೋಲೀನ', 'ಆಟ', 'ಕತೆಯಾದಳು ಹುಡುಗಿ', 'ಬೇನ್ಯಾ' ಮುಂತಾದ ಕಥಾಸಂಗ್ರಹಗಳನ್ನು ಹೊರತಂದಿದ್ದಾರೆ. ಇವರ ಸಂವೇದನೆ ಗತಿಶೀಲವಾದದ್ದು, ಸಾವು ಮತ್ತು ನಿರಪರಾಧಿಯ ಯಾತನೆ ಇವರ ಕಥೆಗಳ ಮುಖ್ಯವಸ್ತುವಾಗಿದೆ. ಇವರ ಬರವಣಿಗೆಯಲ್ಲಿ ಎದ್ದು ಕಾಣುವ ಕಲಾತ್ಮಕ ಅಚ್ಚುಕಟ್ಟು, ಅನುಭಾವವನ್ನು ಶೋಧಿಸುವ ರೀತಿ, ತಮ್ಮ ಹಳ್ಳಿಯ ಪ್ರಾದೇಶಿಕ ಹಿನ್ನಲೆಯಲ್ಲಿ ಬರುವ ಪರಿಸರದ ಪ್ರಭಾವ, ಇವೆಲ್ಲವೂ ಚಿತ್ತಾಲರ ಅಭಿವ್ಯಕ್ತಿಯ ಕ್ರಮವನ್ನು ಅನಾವರಣಗೊಳಿಸುತ್ತವೆ.

ನವ್ಯ ಸಾಹಿತ್ಯದ ಪ್ರಮುಖ ಕಥೆಗಾರರಾದ ಯು.ಆರ್.ಅನಂತಮೂರ್ತಿಯವರು 'ಎಂದೆಂದೂ ಮುಗಿಯದ ಕಥೆ', 'ಪ್ರಶ್ನೆ', 'ಮೌನಿ', 'ಆಕಾಶ ಮತ್ತು ಬೆಕ್ಕು', ಮೊದಲಾದ ಕಥೆಗಳನ್ನು ಪ್ರಕಟಿಸಿದ್ದಾರೆ. "ಬ್ರಾಹ್ಮಣ ಸಮುದಾಯದ ಪ್ರಜ್ಞೆ", ಬ್ರಾಹ್ಮಣ ಶೂದ್ರ ಪಾತ್ರಗಳ ಶೋಧನೆ ಇವು ಇವರ ಕಥೆಗಳ ಕೇಂದ್ರ, ಬಾಳನ್ನು ನಿಷ್ಠೂರವಾಗಿ ಚಿತ್ರಿಸುವ ಕಥನಕ್ರಮ ಮತ್ತು ಸಮಗ್ರತೆಯನ್ನು ಒಟ್ಟಿಗೆ ಬೆಸೆಯುವ ಅನುಭವ ಸಮಗ್ರತೆಯನ್ನು ಸಾವಯವವಾಗಿ ಕಟ್ಟುವ ಕ್ರಮ ಇವೆಲ್ಲಾ ಇವರ ಕಥೆಗಳಲ್ಲಿ ಕಂಡುಬರುವ ಪ್ರಧಾನ ಅಂಶಗಳಾಗಿವೆ. ಭಾಷೆ ಮತ್ತು ಅನುಭವದ ಜೊತೆ ನಡೆಸುವ ಹೋರಾಟ, ವಿಸ್ಮಯ, ಜೀವನಾನುಭವದ ಸಂಪೂರ್ಣ ಆಘಾತವನ್ನು ಕಥೆಯಲ್ಲಿ ಎಳೆದುಕೊಳ್ಳುವ, ಆದರಲ್ಲಿ ಹೊಸದನ್ನು ಹುಡುಕುವ, ಅನಂತತೆಯನ್ನು ಕಾಣುವ ಪ್ರವೃತ್ತಿ ಇವರ ಕಥೆಗಳಿಂದ ವ್ಯಕ್ತವಾಗುತ್ತದೆ. ಇವರ ಭಾಷಾ ಬಳಕೆ ಪ್ರಭಾವಶಾಲಿಯಾಗಿದ್ದು ನವ್ಯ ಸಾಹಿತ್ಯದ ಉತ್ತಮ ಕಥೆಗಾರನೆನೆಸಿಕೊಂಡಿದ್ದಾರೆ. ನವ್ಯ ಪಂಥದ ಮತ್ತೋರ್ವ ಕಥೆಗಾರರಾದ ಶಾಂತಿನಾಥ ದೇಸಾಯಿಯವರು 'ಮಂಜುಗಡ್ಡೆ', 'ಕ್ಷಿತಿಜ', 'ದಂಡೆ', 'ರಾಕ್ಷಸ', 'ಪರಿವರ್ತನೆ' ಕಥಾಸಂಗ್ರಹಗಳನ್ನು ಕಲಾತ್ಮಕವಾಗಿ ಪ್ರಕಟಿಸಿದ್ದಾರೆ. ಈ ಸಾಹಿತ್ಯದಲ್ಲಿ ತುಂಬಾ ಹೆಸರು ಗಳಿಸಿದ್ದ ಕೆ. ಸದಾಶಿವರು 'ನಲ್ಲಿಯಲ್ಲಿ ನೀರು ಬಂತು', 'ಅಪರಿಚಿತರು' ಕಥಾಸಂಗ್ರಹವನ್ನು ಬರೆದಿದ್ದಾರೆ. "ಕೆ. ಸದಾಶಿವರ ಕಥೆಯ ಪ್ರತಿಯೊಂದು ವಿವರವು ಅನಿವಾರ್ಯವೆಂಬಂತೆ ಅದರ ಕೊನೆಯ ಕಡೆಗೆ ವೇಗವಾಗಿ ಧಾವಿಸಿ ಕೊನೆಗೆ ಫಳಕ್ಕನೆ ಅನಿರೀಕ್ಷಿತವಾದ ತಿರುವು ಪಡೆದು ಮುಕ್ತಾಯವಾಗುದು ಇವರ ಕಥೆಗಳ ವೈಶಿಷ್ಟ್ಯವಾಗಿದೆ."[3] ಹೀಗೆ ಸದಾಶಿವರ ಕಥೆಗಳ ರಚನೆ ವಿಶಿಷ್ಟ ಪ್ರತಿಭೆಯಿಂದ ಕೂಡಿದುದಾಗಿದೆ. ನವ್ಯ ಸಣ್ಣ ಕಥಾ ಕ್ಷೇತ್ರದಲ್ಲಿ ಮತೊಂದು ಪ್ರಮುಖ ಹೆಸರು ಪಿ.ಲಂಕೇಶ್‌ರವರದು ಇವರ 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ, 'ನಾನಲ್ಲ', 'ಉಮಾಪತಿಯ ಸ್ಕಾಲರ್‌ಶಿಪ್ ಮಾತ್ರ',

'ಕಲ್ಲು ಕರಗುವ ಸಮಯ', ಮತ್ತು ಇತರ ಕಥೆಗಳು ಎಂಬ ಕಥಾಸಂಕಲನಗಳನ್ನು ಪ್ರಕಟಿಸಿ ಉತ್ತಮ ಕಥೆಗಾರರೆನಿಸಿಕೊಂಡಿದ್ದಾರೆ. ಪಿ.ಲಂಕೇಶರು "ಪೀಡನೆ, ಹಿಂಸೆಗಳನ್ನು ನಿಕಷವಾಗಿ ಹಾಗೂ ತಂತ್ರವಿಧಾನವಾಗಿ ಬಳಸಿ ವ್ಯಕ್ತಿಯ ಗೋಸುಂಬೆತನವನ್ನು ಅಥವಾ ಪ್ರಜ್ಞಾಸ್ತರದಲ್ಲಿ ಆ ವ್ಯಕ್ತಿಯೂ ಗುರುತಿಸಿಕೊಂಡಿದ್ದಿರಲಾರದ ಅನುಭವದ ಬಿರುಕನ್ನು ಅಲ್ಪತನವನ್ನು ಒಂದೊಂದೇ ಪದರ ಪದರದಲ್ಲಿ ಬಿಚ್ಚುತ್ತ ಒಳಗಿನ ಸತ್ಯವನ್ನು ಅದರ ನಗ್ನತೆಯಲ್ಲಿ ಅಥವಾ ಮೇಲಿನ ತೋರಿಕೆಯ ವ್ಯಕ್ತಿತ್ವವನ್ನು ಅದರ ಮೃತ್ ಸ್ಥಿತಿಯಲ್ಲಿ ತೋರಿಸಿ ದಿಗಿಲುಗೊಳಿಸಲು, 'ಶಾಕ್' ಕೊಡಲು ಹವಣಿಸುತ್ತಾರೆ." ಎಂದಿರುವ ಜಿ.ಎಚ್.ನಾಯಕರ ಮಾತುಗಳು ಅರ್ಥಪೂರ್ಣವಾಗಿವೆ. ಮತ್ತು ಮಹತ್ವವನ್ನು ಪಡೆದಿವೆ.

ದಲಿತ–ಬಂಡಾಯ:

ಎಪ್ಪತ್ತರ ದಶಕದಲ್ಲಿ ನವ್ಯಕ್ಕಿಂತ ಭಿನ್ನವಾದ ಬರವಣಿಗೆಯೊಂದು ಬರತೊಡಗಿತು. ಅದೇ ದಲಿತ ಸಾಹಿತ್ಯ. ಈ ಹೊತ್ತಿಗೆ ದೇಶದ ರಾಜಕೀಯದಲ್ಲಿ ನಡೆದ ಬದಲಾವಣೆಗಳು ಹೊಸ ಶಕ್ತಿಯಾಗಿ ದಲಿತವರ್ಗದ ಬೆಳವಣಿಗೆಗೆ ತರುಣರಲ್ಲಿ ವಿಶೇಷವಾಗಿ ಆಸಕ್ತಿ ಮೂಡಿಸಿದ ಸಮಾಜವಾದಿ ಸಿದ್ಧಾಂತಗಳು ಹೊಸದೊಂದು ದೃಷ್ಟಿಕೋನದ ಉದಯಕ್ಕೆ ಕಾರಣವಾದವು. ಅಂಬೇಡ್ಕರ್ ಬದುಕು–ಬರಹ–ಹೋರಾಟ, ಬಿ. ಬಸವಲಿಂಗಪ್ಪನವರ ಭೂಸಾಪ್ರಕರಣ, ಇದರ ಅಂಗವಾಗಿ ಹುಟ್ಟಿಕೊಂಡ 'ದಲಿತ ಸಂಘರ್ಷಸಮಿತಿ'ಯ ಚಟುವಟಿಕೆಗಳು ಹಾಗೂ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಕಂಡುಬಂದ ಮಹತ್ವದ ಭೂಸುಧಾರಣೆ, ಜೀತ ವಿಮೋಚನೆ, ಗೇಣಿದಾರರ ಬಿಡುಗಡೆ ಮುಂತಾದ ಕಾನೂನುಗಳು ತರುಣ ವಿದ್ಯಾವಂತರಲ್ಲಿ ದಲಿತ ಪ್ರಜ್ಞೆ ಬೆಳೆಸಿ ಅವರಲ್ಲಿ ಸ್ವಾಭಿಮಾನ ಹುಟ್ಟಿಹಾಕಲು ಕಾರಣವಾಯಿತು. ಇದಕ್ಕೆ ಪೂರಕವಾಗಿ ಜಾಗತಿಕ ಮಟ್ಟದಲ್ಲಿ ನಡೆಯುತ್ತಿದ್ದ ಬಿಳಿಯರ ವಿರುದ್ದದ 'ಕಪ್ಪು ಸಾಹಿತ್ಯ'ದ ಅಭಿವ್ಯಕ್ತ ಸ್ವರೂಪದ ಹೋರಾಟ ಮತ್ತು ಮಹಾರಾಷ್ಟ್ರದಲ್ಲಿ ಅಂಬೇಡ್ಕರ್‌ರ ಹೋರಾಟ ಸ್ಫೂರ್ತಿಯಿಂದ ಹುಟ್ಟಿಕೊಂಡ 'ದಲಿತ ಪ್ಯಾಂಥರ್ಸ್ ಸಾಹಿತ್ಯ' ಚಳುವಳಿಯ ಪ್ರೇರಣೆ, ಪ್ರಭಾವಗಳು ಮತ್ತಷ್ಟು ಪುಷ್ಟಿ ನೀಡಿದವು. ಇದರಿಂದಾಗಿ ತಮ್ಮ ಅವಮಾನಿತ ಬದುಕಿನ ವಿಮೋಚನೆಗಾಗಿ ದಲಿತ ಲೇಖಕರನ್ನು ಗಾಢವಾಗಿ ಚಿಂತಿಸುವಂತೆ ಪ್ರಚೋದಿಸಿದವು. ಇದುವರೆವಿಗೂ ಅಸ್ಪೃಶ್ಯತೆಯ ನೋವಿನಿಂದ ಬಳಲುತ್ತಿದ್ದ ದಲಿತ ಲೇಖಕರು ತಮ್ಮ ಹೀನಾಯ ಬದುಕಿನ ಹಸಿವು, ಬಡತನ, ದಾರಿದ್ರ್ಯ, ನೋವು, ಶೋಷಣೆಗಳಿಗೆ ಸಾಹಿತ್ಯ, ಸಾಂಸ್ಕೃತಿಕ ಕಲಾಸ್ಪರ್ಶ ನೀಡಿ, ಅಕ್ಷರಗಳ ಮೂಲಕ ತಮ್ಮ ಅಭಿವ್ಯಕ್ತಿಯ ಸಂವೇದನೆಯನ್ನು ತೋಡಿಕೊಂಡಿದ್ದಾರೆ. ಆ ಮೂಲಕ ಬದುಕನ್ನು ಶೋಷಣೆ ಮಾಡುವ ಶೋಷಕರಿಗೆ ಮೂಲಭೂತವಾದಿಗಳಿಗೆ ಪಾಪಪ್ರಜ್ಞೆಯನ್ನು ಸಮಾನತೆಯ ಬದುಕಿಗಾಗಿ ಪ್ರತಿಭಟಿಸುವ ಸ್ವರೂಪದ ಎಚ್ಚರಿಕೆಯ ಮಾಧ್ಯಮವಾಗಿಯೂ ಸೃಷ್ಟಿಗೊಂಡವು.

"ದಲಿತ ಎಂದರೆ ಹಿಂಸೆಗೆ ಒಳಗಾದ, ಸೋಲಿಸಲಾಗದ ಎಂಬ ಸಾಮಾನ್ಯ ಶಬ್ದಕೋಶದ ಪದಗಳ ಅರ್ಥವನ್ನು ಇಟ್ಟುಕೊಂಡು ಅತ್ಯಂತ ಮೇಲುಸ್ಥಾನದಲ್ಲಿರುವ ಪುರೋಹಿತ ವರ್ಗ ಮತ್ತು ಅದರ ನಂತರ ವರ್ಗಗಳಿಂದ ತುಳಿತಕ್ಕೆ ಒಳಗಾದ. ಅಸ್ಪೃಶ್ಯರನ್ನು ಐತಿಹಾಸಿಕ ಆಧಾರದಿಂದಲೇ ಅಸ್ಪೃಶ್ಯರನ್ನು ಮಾತ್ರ ದಲಿತರೆನ್ನುತ್ತಾರೆ. ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯವಾಗಿ ಯಾರನ್ನೂ ಕಡೆಗಣಿಸಲಾಗಿದೆಯೋ ಅಂಥವರನ್ನು ಮಾತ್ರ ದಲಿತರೆಂದು ಕರೆಯಬಹುದಾಗಿದೆ. ಈ ದಲಿತರ ಬದುಕನ್ನು ವಸ್ತುವಾಗಿಟ್ಟು ಕೊಂಡು ಕಥೆಗಳನ್ನು ರಚಿಸಲಾಗಿದೆ. "ದಲಿತ ಸಾಹಿತ್ಯದಲ್ಲಿ ಮನುಷ್ಯ ಮತ್ತು ಆತನ ನೋವುಗಳು ಕೇಂದ್ರವಾಗುತ್ತವೆ. ಮನುಷ್ಯನ ನೋವು ಇವರ ಸಂಕೋಲೆಯ ಘಟನೆಗಳು, ಜಾತೀಯತೆಯಿಂದ ಉಂಟಾಗುವ ಸಮಸ್ಯೆಗಳು ಈ ಕಾರಣಕ್ಕಾಗಿ ಪಡುವ ಯಾತನೆ, ಮನುಷ್ಯ ಮನುಷ್ಯರ ನಡುವಿನ ಅಡ್ಡಗೋಡೆಗಳು ಮತ್ತು ಅವುಗಳ ಹಿನ್ನಲೆಯಲ್ಲಿ ಅವುಗಳೆಲ್ಲದರ ಇತಿಹಾಸದ ಮೂಲಗಳನ್ನು ಅತ್ಯಂತ ಯಶಸ್ವಿಯಾಗಿ ಜನಪದ ಮಾಧ್ಯಮ ಮತ್ತು ಭಾಷೆಯ ಮುಖಾಂತರ ಸೃಷ್ಟಿ ಮಾಡುತ್ತಾನೆ. ಈ ರೀತಿ ಸಾಹಿತ್ಯದ ಮುಖೇನ ಎಲ್ಲಾ ನೋವಿನ ಚಿತ್ರಣವನ್ನು ದಲಿತರ ಮುಂದಿಡುತ್ತಾ ತಮ್ಮ ಬದುಕಿನ ಹಿನ್ನಲೆಯಲ್ಲಿ ಅರಿತುಕೊಂಡ ಹೊಸ ಸಮಾಜದ ಮನುಷ್ಯನ ಜೊತೆಯಲ್ಲಿ ಹೆಜ್ಜೆಗಳನ್ನಿಡುವಂತೆ ಮಾಡುವುದು ಒಂದು ಕಡೆಯಾದರೆ ಸವರ್ಣಿಯ ಹಿಂದೂಗಳಿಗೆ ಇಂಥ ಚಿತ್ರಣವನ್ನು ಕೊಡುವುದರ ಮುಖೇನ ತಾವು ಮಾಡಿದ ತಪ್ಪಿನ ಅರಿವು ಮೂಡಿಸುವುದು ಹಾಗೂ ಶೋಷಿತ ಜನತೆಯ ಜೀವನದ ಬಗ್ಗೆ ಭಯ ಅನುಕಂಪವನ್ನು ಹುಟ್ಟಿಸುವುದು ಮತ್ತೊಂದು ಮಹತ್ವದ ಉದ್ದೇಶ. ಇಂತ ಸಾಹಿತ್ಯ ಐತಿಹಾಸಿಕ ಪ್ರಜ್ಞೆಯುಳ್ಳ ದಲಿತ ಜನಾಂಗದ ವಿವರವನ್ನು ಅನುಭವಿಸುತ್ತಿರುವ ದಲಿತನಿಂದ ಮಾತ್ರ ಸೃಷ್ಟಿಯಾಗುತ್ತದೆ. ಇಂಥ ಸಾಹಿತ್ಯ ಸೃಷ್ಟಿಯ ಸಂದರ್ಭದಲ್ಲಿ ರಾಗ ರಂಜನೆಗಿಂತ ಹೆಚ್ಚಾಗಿ ಜನಾಂಗದ ಒಟ್ಟು ಬದುಕನ್ನು ಅರ್ಥೈಸುವ ಪರಿಜ್ಞಾನ ಇದ್ದಾಗ ಮಾತ್ರ ಉದ್ದೇಶಿತ ಪರಿಣಾಮ ಉಂಟಾಗುತ್ತದೆ"[10] ಎಂದು ಆರಂಭದ ದಲಿತ ಲೇಖಕರಾದ ದೇವಯ್ಯ ಹರವೆ ಹೇಳಿದ್ದಾರೆ.

ದೇವನೂರು ಮಹಾದೇವರ 'ದ್ಯಾವನೂರು', 'ಮಾರಿಕೊಂಡವರು', 'ಮೂಡಲ ಸೀಮೆಯಲ್ಲಿ ಕೊಲೆಗಿಲೆ ಮುಂತಾಗಿ', 'ಒಡಲಾಳ' ಕಥೆಗಳು ದಲಿತರ ಬದುಕಿನ ಮೂಲ ಸಮಸ್ಯೆಗಳ ದಾರಿದ್ರ್ಯ ಬದುಕನ್ನು ಮನುಷ್ಯ ಲೋಕದಿಂದ ಹೊರಚೆಲ್ಲಿವೆ. 'ಅಮಾಸ', 'ಗ್ರಸ್ತರು', 'ಒಂದು ದಹನದ ಕಥೆ', 'ದತ್ತು' ಮೊದಲಾದ ಕಥೆಗಳಲ್ಲಿ ದಲಿತ ಬದುಕಿನ ವಿವರಗಳನ್ನು ಹೇಳುವಾಗ ತಂತ್ರಗಾರಿಕೆ ಕುಶಲತೆಯನ್ನು ಎತ್ತಿ ಹಿಡಿದ್ದಿದ್ದಾರೆ. ಮ.ನ. ಜವರಯ್ಯರವರು ವಿಚಾರ-ವಿಮರ್ಶೆಯಲ್ಲಿ ಖ್ಯಾತರಾದಂತೆ ಸಣ್ಣಕಥೆಯ ರಚನೆಯಲ್ಲೂ ತಮ್ಮ ಛಾಪನ್ನು ಉಳಿಸಿಕೊಂಡಿರುವ ಕಥೆಗಾರರಾಗಿದ್ದರೆ.

ಇವರ 'ಬುರುಡೆಗೆ ಸ್ವರ್ಗ, 'ಎಡೆ ಅನ್ನ', 'ಗುರ್ತಿಲ್ಲದವರ ಗುರ್ತಿನ ಕಥೆ' 'ಸ್ಫೋಟ' ಹೀಗೆ ದಲಿತರ ವಿವಿಧ ಮುಖಗಳನ್ನು ತೆರೆದಿಡುವಲ್ಲಿ ಇವರು ಗಮನ ಸೆಳೆದಿದ್ದಾರೆ. ಎಂಭತ್ತರ ದಶಕದಲ್ಲಿ ದಲಿತ ಸಂವೇದನೆಯನ್ನು ಕುರಿತು ಮಾಲಗತ್ತಿಯವರು ಬಿಡಿ ಕಥೆಗಳನ್ನು ಸೇರಿಸಿ 'ಮುಗಿಯದ ಕಥೆಗಳು' ಎಂಬ ಕಥಾಸಂಕಲನವನ್ನು ಪ್ರಕಟಿಸಿದ್ದಾರೆ. ಇವರು ದಲಿತರನ್ನು ಶತಶತಮಾನಗಳಿಂದ ಕಾಡುತ್ತಿರುವ ಜಾತಿಸಮಸ್ಯೆ, ಅಸ್ಪೃಶ್ಯತೆಯ ಸಮಸ್ಯೆ, ಧಾರ್ಮಿಕ ಸಮಸ್ಯೆಗಳನ್ನು ಪ್ರಧಾನ ನೆಲೆಯಲ್ಲಿ ಕಥಾವಸ್ತುವನ್ನಾಗಿ ಮಾಡಿಕೊಂಡು 'ತೊತ್ತಿನ ದುಡ್ಡು', 'ನೀರು', 'ಬಹಿಷ್ಕಾರ', 'ಮುಂಡನ' ಕಥೆಗಳನ್ನು ಬರೆದಿದ್ದಾರೆ. ಮೊಗಳ್ಳಿ ಗಣೇಶ್‌ರವರು ದಲಿತ ಕಥೆಗಾರರಾಗಿದ್ದು, ಅವರು ಬರದ ಕಥೆಗಳ ಸಂಖ್ಯೆ ಮತ್ತು ಅವುಗಳ ಕಲಾತ್ಮಕತೆಯ ಅಭಿವ್ಯಕ್ತಿ ಸಂವೇದನೆಯ ದೃಷ್ಟಿಯಿಂದ ಮುಖ್ಯರಾಗಿದ್ದಾರೆ. ಅವರ 'ಬುಗರಿ', 'ಅತ್ತ', 'ಒಂದು ಹಳೇ ಚಡ್ಡಿ', ಹೇಲುಗುಂಡಿ', 'ಮಿಂಚುಳ', ಮುಂತಾದ ಕಥೆಗಳು ಗಮನ ಸೆಳೆದಿವೆ.

ಆರ್ಥಿಕ ರಾಜಕೀಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಈ ಎಲ್ಲಾ ನೆಲೆಗಳಲ್ಲಿಯೂ ನಡೆದ ಶೋಷಣೆಯ ವಿರುದ್ಧದ ಪ್ರತಿಭಟನೆಯೇ ಬಂಡಾಯ ಸಾಹಿತ್ಯವಾಗಿದೆ. "ಶೋಷಿತ ಪರವಾದ ನಿಲುವುಗಳನ್ನು ಸಾಂಸ್ಕೃತಿಕ ಕ್ಷೇತ್ರದಲ್ಲಿ ಭದ್ರವಾಗಿ ನೆಲೆಗೊಳಿಸುವುದು ನಮ್ಮ ಮುಖ್ಯಗುರಿಗಳಲ್ಲೊಂದಾಗಬೇಕು ಎಂದು ಬಂಡಾಯ ಚಳುವಳಿಯ ವಕ್ತಾರರಾದ ಬರಗೂರು ರಾಮಚಂದ್ರಪ್ಪ ಹೇಳಿರುವುದನ್ನು ಗಮನಿಸಬಹುದು. 'ಬಂಡಾಯ'ದ ನಿಲುವಿಗೂ, 'ದಲಿತದ' ನಿಲುವಿಗೂ ಮೂಲಭೂತವಾದ ಅಂತರವಿದ್ದಂತಿಲ್ಲ ಸಾಮಾಜಿಕ ಸುಧಾರಣೆ, ಸಾಮಾಜಿಕ ಅಸಮಾನತೆ, ಲಿಂಗಭೇದವನ್ನು ಕುರಿತ ಹೋರಾಟವೇ ದಲಿತ-ಬಂಡಾಯದ ಮುಖ್ಯ ಗುರಿಯಾಗಿತ್ತು."[11]

ರಾಮಣ್ಣನವರು ಬಂಡಾಯ ಸಾಹಿತ್ಯ ಚಳುವಳಿ ಹುಟ್ಟುವ ಮೊದಲೇ ಅರವತ್ತರ ದಶಕದಲ್ಲೇ ಬಂಡಾಯದ ಆಶಯ, ಅಭಿವ್ಯಕ್ತಿಗಳನ್ನು ತಮ್ಮ ಕಥೆಗಳಲ್ಲಿ ಅಳವಡಿಸಿಕೊಂಡು ಬರೆಯುತ್ತಿದ್ದ ಮೊದಲ ಬಂಡಾಯ ಕಥೆಗಾರರು, ಆ ಮೂಲಕ ಅವರ ಕಥೆಗಳು ನವ್ಯಕಥೆಗಳಿಗಿಂತ ಭಿನ್ನವಾಗಿವೆ. ಇವರ 'ಜೀತ', 'ಗರ್ಜನೆ', 'ಕಂಕನ ಯುಗಾದಿ', 'ಸಂತೆಯೊಳಗೊಂದು ಮನೆಯ ಮಾಡಿ,' 'ಜಾಡ ಮಾಲಿ', 'ಹಾಳುಮಗ', ಮುಂತಾದ ಕಥೆಗಳು ಕಲಾತ್ಮಕವಾಗಿ ಚಿತ್ರಿತವಾಗಿವೆ. ಬಂಡಾಯ ಸಾಹಿತ್ಯ ಸಂಘಟನೆಯ ಸ್ಥಾಪಕರಲ್ಲೊಬ್ಬರಾದ ಬರಗೂರು ರಾಮಚಂದ್ರಪ್ಪನವರ 'ಕ್ಷಾಮ', 'ಎದುರಾಳಿ', 'ಕಪ್ಪು ನೆಲದ ಕಪ್ಪು ಕಾಲು' ಮುಂತಾದ ಕಥೆಗಳಲ್ಲಿ ಸಾಮಾಜಿಕ ಬದ್ಧತೆಯನ್ನು ವಿಶ್ಲೇಷಿಸುವಲ್ಲಿ ಇವರು ಅತ್ಯಂತ ಪ್ರಮುಖರಾಗಿದ್ದಾರೆ. ಬದುಕಿನ ಗಂಡು-ಹೆಣ್ಣಿನ ಪ್ರೀತಿ, ಸ್ನೇಹ, ಸಂಬಂಧ, ಮಾನವೀಯತೆಗಳನ್ನು ತಮ್ಮ ಕಥೆಗಳಲ್ಲಿ ಅಸ್ತ್ರಗಳಾಗಿ ಬಳಸಿಕೊಂಡ ಕಾಳೇಗೌಡ

ನಾಗವಾರರು 'ಅಲೆಗಳು', 'ಮೀನುಗಳು', 'ಬೆಟ್ಟಸಾಲು ಮಳೆ' ಇತ್ಯಾದಿ ಕಥೆಗಳಲ್ಲಿ ಬಂಡಾಯದ ನೆಲೆ ಕಂಡುಬರುತ್ತದೆ. ಬರಗೂರರ ಬರವಣಿಗೆಯ ತಾತ್ವಿಕತೆಯನ್ನು ಹೋಲುವ ವಾಲೀಕಾರರ ಕಥೆಗಳ ಕೇಂದ್ರ ಪ್ರಜ್ಞೆ ಸಂಘಟನೆ ಮತ್ತು ಸಮಾನತೆ ಬದುಕನ್ನು ಶೋಷಣೆ ಮಾಡುವ ಶಕ್ತಿಗಳ ವಿರುದ್ಧ ಹೋರಾಟ ಮಾಡಿ ಸಮಾಜಿಕ ನ್ಯಾಯ ಪಡೆಯಬೇಕಾದರೆ, ತುಳಿತಕ್ಕೆ ಒಳಪಟ್ಟ ಸಮುದಾಯಗಳೇ ಜಾಗೃತಗೊಂಡು ತಮ್ಮಲ್ಲಿನ ಭಿನ್ನಾಭಿಪ್ರಾಯಗಳನ್ನು ಮರೆತು, ಒಗ್ಗೂಡಿ ನ್ಯಾಯವನ್ನು ದೊರಕಿಸಿಕೊಳ್ಳುವುದರ ಕಡೆಗೆ ವಾಲೀಕಾರರ ಕಥೆಗಳ ತುಡಿತವಿರುವುದ್ನು ಅವರ 'ಕಪ್ಪು ಕಥೆಗಳು', 'ಕುತ್ತರಲ್ಲಿ ಕುದ್ದವರು', 'ಅಮ್ಮಕ್ಕಾಯಿ', 'ಹೊಲಗೇರಿ' ಮುಂತಾದ ಕಥೆಗಳಲ್ಲಿ ವ್ಯಕ್ತವಾಗಿವೆ.

* * * * *

ಅಡಿ ಟಿಪ್ಪಣಿಗಳು

1. ಅ.ನ. ಕೃಷ್ಣರಾಯ – ಸಾಹಿತ್ಯ ಮತ್ತು ಜೀವನ, ಪುಟ ಸಂ. 84
2. ಜಿ.ಎಸ್. ಅಮೂರ – ಕನ್ನಡ ಕಥನ ಸಾಹಿತ್ಯ : ಸಣ್ಣಕಥೆ, ಪುಟ ಸಂ. 109
3. ಆರ್.ಸಿ. ಕುಲಕರ್ಣಿ – ಕನ್ನಡ ಸಣ್ಣ ಕಥೆಯ ಮೊದಲ ದಿನಗಳು, ಪುಟ ಸಂ. 89
4. ಆರ್.ಸಿ. ಕುಲಕರ್ಣಿ – ಕನ್ನಡ ಸಣ್ಣ ಕಥೆಯ ಮೊದಲ ದಿನಗಳು, ಪುಟ ಸಂ. 90
5. ಕೀರ್ತಿನಾಥ ಕುರ್ತುಕೋಟಿ – ಯುಗಧರ್ಮ ಮತ್ತು ಸಾಹಿತ್ಯ ದರ್ಶನ, ಪುಟ ಸಂ. 200
6. ಕೀರ್ತಿನಾಥ ಕುರ್ತುಕೋಟಿ – ಯುಗಧರ್ಮ ಮತ್ತು ಸಾಹಿತ್ಯ ದರ್ಶನ, ಪುಟ ಸಂ. 202
7. ಗಿರಡ್ಡಿ ಗೋವಿಂದರಾಜ್ – ಸಣ್ಣ ಕಥೆಯ ಹೊಸ ಒಲವುಗಳು, ಪುಟ ಸಂ. 53
8. ಜಿ.ಹೆಚ್.ನಾಯಕ – ಅನಿವಾರ್ಯ, ಪುಟ ಸಂ. 65
9. ಜಿ.ಹೆಚ್.ನಾಯಕ – ಅನಿವಾರ್ಯ, ಪುಟ ಸಂ. 57
10. ಡಿ. ಎಸ್.ವೀರಯ್ಯ – ದಲಿತ ಚಿಂತನ, ಪುಟ ಸಂ. 42
11. ಡಾ॥ ಸಿ.ಬಿ. ಹೊನ್ನಯ್ಯ – ಕನ್ನಡ ಸಣ್ಣ ಕಥೆಗಳಲ್ಲಿ ದಲಿತ ಸಂಸ್ಕೃತಿ, ಪುಟ ಸಂ. 75

ಅಧ್ಯಾಯ – ೩

ಶೋಷಣೆಯ ಹಿನ್ನೆಲೆ

೧) ಸ್ವಾತಂತ್ರ ಪೂರ್ವದಲ್ಲಿ ಶೋಷಣೆಯ ಪರಿಸ್ಥಿತಿ

೨) ಸ್ವಾತಂತ್ರ್ಯ ನಂತರದ ಶೋಷಣೆಯ ಪರಿಸ್ಥಿತಿ

ಅಧ್ಯಾಯ – 3

ಶೋಷಣೆಯ ಹಿನ್ನಲೆ

೧) ಸ್ವಾತಂತ್ರ್ಯ ಪೂರ್ವದಲ್ಲಿ ಶೋಷಣೆಯ ಪರಿಸ್ಥಿತಿ

ಭಾರತವು ಒಂದು ಸಂಪ್ರದಾಯಬದ್ಧ ರಾಷ್ಟ್ರ. ಇದು ಬಹಳ ಹಿಂದಿನ ಕಾಲದಿಂದಲೂ ತನ್ನದೇ ಆದ ಆಚಾರ–ವಿಚಾರ, ಧರ್ಮ, ಜಾತಿ–ಮತ, ಮೂಡನಂಬಿಕೆಗಳಿಂದ ಕೂಡಿದ್ದು ಬಹಳ ಕಟ್ಟುನಿಟ್ಟಾದ ಹಲವು ಕಟ್ಟುಕಟ್ಟಳೆಗಳನ್ನೊಳಗೊಂಡಂತಹ ಸಮಾಜವನ್ನು ಹೊಂದಿತ್ತು. ಇಂತಹ ಸಮಾಜದಲ್ಲಿ ಜಾತಿ ಪದ್ದತಿ, ವರ್ಣ ವರ್ಗ, ಬಾಲ್ಯ ವಿವಾಹ, ಸತೀ ಪದ್ಧತಿ, ಜೀತ ಪದ್ಧತಿ, ದೇವದಾಸಿ ಪದ್ಧತಿ, ಜಮೀನ್ದಾರಿ ಪದ್ಧತಿ, ಕಂದಾಯ, ತೆರಿಗೆ ಹೀಗೆ ಹತ್ತು ಹಲವು ಅನಿಷ್ಟ ಪದ್ಧತಿಗಳು ಅಸ್ತಿತ್ವದಲ್ಲಿದ್ದವು. ಇಂತಹ ಸನ್ನಿವೇಶದಲ್ಲಿ ಅಂದಿನ ಸಮಾಜದ ಮೇಲ್ವರ್ಗದವರು, ಉನ್ನತ ಹುದ್ದೆಯಲ್ಲಿರುವವರು, ಶ್ರೀಮಂತರು, ಜಮೀನ್ದಾರರು ಅದೇ ಸಮಾಜದಲ್ಲಿದ್ದಂತಹ ಕೆಳಜಾತಿಯವರು, ಬಡವರು, ಅಸ್ಪೃಶ್ಯರು, ದಲಿತ ಜನಾಂಗಗಳ ಮೇಲೆ ದೌರ್ಜನ್ಯ, ತಾರತಮ್ಯ, ಅಸಮಾನತೆ ದಬ್ಬಾಳಿಕೆಗಳನ್ನು ಮಾಡುವುದರ ಮೂಲಕ ಶೋಷಣೆ ಮಾಡುವ ಪರಿಸ್ಥಿತಿ ಅಂದಿನ ಸಮಾಜದಲ್ಲಿ ಹೆಚ್ಚಾಗಿತ್ತು. ಒಟ್ಟಾರೆಯಾಗಿ ಹೇಳುವುದಾದರೆ ಸ್ವಾತಂತ್ರ್ಯ ಪೂರ್ವದ ಸಮಾಜವು ಶೋಷಣೆಯ ಪರಮಾವಧಿಯನ್ನು ತಲುಪಿತ್ತು ಎಂದು ಪರಿಗಣಿಸಬಹುದಾಗಿದೆ.

ಇಂತಹ ಸಮಾಜದಲ್ಲಿ ಚಾತುರ್ವರ್ಣಗಳು ಇದ್ದು, ಇಲ್ಲಿ ನಾಲ್ಕು ವರ್ಗದವರನ್ನು ಗುರುತಿಸಬಹುದು. "ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಎಂಬುದಾಗಿದ್ದು ಬ್ರಾಹ್ಮಣ, ಕ್ಷತ್ರೀಯರನ್ನು ಮೇಲ್ಜಾತಿಗೆ ಸೇರಿದವರು, ವೈಶ್ಯರನ್ನು ಮಧ್ಯಂತರ ಜಾತಿಗೆ ಸೇರಿದವರು, ಶೂದ್ರರನ್ನು ಕೆಳಜಾತಿಗೆ ಸೇರಿದವರೆಂದು ವಿಭಾಗಿಸಲಾಗಿತ್ತು. ಮೇಲ್ಜಾತಿಗೆ ಸೇರಿದವರಿಗೆ ವೇದೋಪನಿಷತ್ತುಗಳು, ಧರ್ಮ ಶಾಸ್ತ್ರಗಳು ಮತ್ತು ಭೂಮಿಯ ಒಡೆತನ, ರಾಜಕೀಯ ಪ್ರಾಬಲ್ಯದಂತಹ ಸಾಮಾಜಿಕ ಸ್ಥಾನಮಾನಗಳನ್ನು ನೀಡಲಾಗಿತ್ತು. ವೈಶ್ಯರಾದ ಕೊಮ್ಮಟಿಗರು, ಬಣಜಿಗರು, ನೇಕಾರರು ಮುಂದಾದ ವರ್ಗದವರನ್ನು ವ್ಯಾಪಾರ ವಹಿವಾಟಿಗೆ ಸಂಬಂಧಿತದವರೆಂದು ಪರಿಗಣಿಸಲಾಗಿತ್ತು. ಕೊನೆಯಲ್ಲಿ ಬರುವ ಕೆಳಜಾತಿಯವರು ಅಂದರೆ ಶೂದ್ರರು, ಬಡವರು, ದಲಿತರು, ಮುಂತಾದವರು ಸೇರುತ್ತಾರೆ"[1] ಈ ಕೆಳಜಾತಿಗೆ ಸೇರಿದವರನ್ನು ಅತ್ಯಂತ ನಿಕೃಷ್ಟವಾಗಿ, ತುಚ್ಛವಾಗಿ ಕಂಡು ಯಾವುದೇ ರೀತಿಯಲ್ಲಿ ಅವರಿಗೆ ಸಾಮಾಜಿಕ ಸ್ಥಾನ ಮಾನವನ್ನು ನೀಡಿರಲಿಲ್ಲ. ಇಂತಹ ಜನಾಂಗವನ್ನು ಮೇಲ್ವರ್ಗದವರು ಶೋಷಣೆಗಯ್ಯುತ್ತಿದ್ದರು. ಕೆಳವರ್ಗಕ್ಕೆ ಸೇರಿದವರನ್ನು ಸಮಾಜದಲ್ಲಿ ರಾಜಕೀಯವಾಗಿ,

ಧಾರ್ಮಿಕವಾಗಿ ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಸರಿಯಾದ ಸ್ಥಾನಮಾನ, ಹಕ್ಕುಗಳಿಂದ ವಂಚಿತರನ್ನಾಗಿ ಮಾಡಲಾಗಿತ್ತು.

ಕೆಳವರ್ಗಕ್ಕೆ ಸೇರಿದವರನ್ನು ಧಾರ್ಮಿಕ ವ್ಯವಹಾರಗಳಾದ ಪೂಜೆಪುರಸ್ಕಾರ, ದೇವಸ್ಥಾನ, ಯಜ್ಞಯಾಗಾದಿ, ವಿವಾಹಗಳಂತಹ ಶುಭ ಸಮಾರಂಭಗಳಿಗೆ, ಸೈನ್ಯ ಹಾಗೂ ರಾಜಕಾರಣಗಳಲ್ಲಿ ಅವಕಾಶವನ್ನು ನೀಡಿರಲಿಲ್ಲ. ಇವರುಗಳನ್ನು ಊರಿನ ಬೀದಿಗಳ ಕಸ ಗುಡಿಸಲು, ಚರಂಡಿ ಬಳಿಯಲು, ಶೌಚಾಲಯಗಳನ್ನು ಶುಚಿ ಮಾಡಲು, ಸತ್ತ ಪ್ರಾಣಿಗಳನ್ನು ಊರಿಂದ ಹೊರಕ್ಕೆ ಸಾಗಿಸಲು, ಚರ್ಮ ಸುಲಿದು ಹದ ಮಾಡುವ, ಚಪ್ಪಲಿ ಮಾಡುವ ಇವೇ ಮೊದಲಾದ ಕನಿಷ್ಟವಾದ ಕೆಲಸಗಳಿಗೆ ನೇಮಕ ಮಾಡಲಾಗಿತ್ತು. ಮೈ ಕೈ ಕೊಳಕಾಗುವಂತಹ ದುರ್ಗಂಧ ಬೀರುವ ವೃತ್ತಿಗಳನ್ನು ಮಾಡಲಾರಂಭಿಸಿದ ಇವರನ್ನು ಮುಟ್ಟುವುದು, ಮನೆಯ ಒಳಗೆ ಕರೆಯುವುದು ಕಡಿಮೆಯಾಗಿ ಕೊನೆಗೆ ಅವರನ್ನು ಮುಟ್ಟಲು ಅನರ್ಹರು, ಅಸ್ಪೃಶ್ಯರು ಎಂಬ ಭಾವನೆ ಬೆಳೆದು ಅವರು ಮುಟ್ಟಿದರೆ ನುಡಿ ಹಾಳಾಗುತ್ತದೆ, ನೆರಳು ಬಿದ್ದರೆ ಮೈಲಿಗೆಯಾಗುತ್ತದೆ ಎಂಬ ಧೃಡವಾದ ಭಾವನೆ ಬೆಳೆಯಿತು ಹೀಗಾಗಿ ಇವರನ್ನು ಸವರ್ಣೀಯರು ವಾಸಿಸುವ ಸ್ಥಳಗಳಿಗೆ ಪ್ರವೇಶ ನೀಡದೆ ಊರಿಂದ ಹೊರಗೆ ಇಡಲಾಗುತ್ತಿತ್ತು. ಊರೊಳಗೆ ಕೆಳವರ್ಗದವರು ಬರುವಾಗ ತಲೆಯ ಮೇಲೆ ಕೊಂಬು ಧರಿಸಿ, ಡಬ್ಬವನ್ನು ಬಡಿಯುತ್ತ ಶಬ್ಧ ಮಾಡಿಕೊಂಡು ಬರಬೇಕಿತ್ತು. ಹಾಗೂ ಬೀದಿಯಲ್ಲಿ ನಡೆಯುವಾಗ ತಮ್ಮ ಹೆಜ್ಜೆಗುರುತುಗಳು ಅಳಿಸಿಕೊಂಡು ಬರುವಂತೆ ಸೊಂಟಕ್ಕೆ ಪೊರಕೆಯನ್ನು ಕಟ್ಟಿಕೊಂಡು ನಡೆಯಬೇಕಿತ್ತು. ಚಪ್ಪಲಿಯನ್ನು ತಯಾರಿಸುವ ಅವರೇ ಬರಿಗಾಲಿನಲ್ಲಿ ನಡೆಯುವ ಪರಿಸ್ಥಿತಿ ಇತ್ತು. ಇವರು ಆಕಳ ಹಾಲನ್ನು ಹಿಂಡಬಾರದು, ಒಡವೆಗಳನ್ನು ಧರಿಸಬಾರದು, ಸಾರ್ವಜನಿಕ ಕರೆ, ಭಾವಿ, ಕೊಳ ಮುಂತಾದವನ್ನು ಬಳಸಬಾರದೆಂದು ನಿಷೇದ ಏರಲಾಗಿತ್ತು.

ಅಂದಿನ ಸಮಾಜದಲ್ಲಿ "ಶಿಕ್ಷಣವು ಸಾರ್ವತ್ರಿಕವಾಗಿರದೆ ಕೆಲವೊಂದು ವರ್ಗಗಳಿಗೆ ಮಾತ್ರ ಅಂದರೆ ಶ್ರೀಮಂತ, ಬ್ರಾಹ್ಮಣ, ಕ್ಷತ್ರೀಯರಿಗೆ ಮಾತ್ರ ಸೀಮಿತವಾಗಿತ್ತು. ಶಿಕ್ಷಣ ಎಂಬುದು ಕೆಳವರ್ಗದವರಿಗೆ ಕೈಗೆಟುಕಲಾರದ ತುತ್ತಾಗಿತ್ತು."[2] ಇದಕ್ಕೂ ಮೀರಿ ಶಿಕ್ಷಣವನ್ನು ಬಯಸಿದ್ದೇ ಆದರೆ ಹಲವಾರು ದೌರ್ಜನ್ಯ, ಕ್ರೌರ್ಯಕ್ಕೆ ಒಳಗಾಗಬೇಕಿತ್ತು. ಮೇಲ್ಜಾತಿಯ ಹುಡುಗರೊಂದಿಗೆ ಪಾಠ ಕೇಳದೆ ಯಾವುದೋ ಮೂಲೆಯಲ್ಲಿ ಕುಳಿತುಕೊಳ್ಳಬೇಕಿತ್ತು. ಉಪಾಧ್ಯಾಯರು ಮೇಲ್ವರ್ಗಕ್ಕೆ ಸೇರಿದವರಾದ್ದರಿಂದ ಅವರ ಕಡೆಗೆ ತಿರುಗಿ ಆತ್ಮೀಯತೆಯಿಂದ ವ್ಯವಹರಿಸುತ್ತಿರಲಿಲ್ಲ. ಅವರಿಗೆ ಶಿಕ್ಷೆ ನೀಡಬೇಕಾದಾಗಲೂ ಕೈಯಿಂದ ಹೊಡೆಯದೆ ದೂರದಲ್ಲಿ ನಿಂತು ಕೋಲಿನಿಂದ ಹೊಡೆಯುತ್ತಿದ್ದರು. ಕೆಳಜಾತಿಯವರು ಆರ್ಥಿಕವಾಗಿ ಹಿಂದುಳಿದ್ದುದರಿಂದ ಅವರು ಮಕ್ಕಳನ್ನು

ಶಾಲೆಗೆ ಕಳುಹಿಸದೆ ಕೂಲಿಗೆ ಕಳುಹಿಸುತ್ತಿದ್ದರು. ಹೀಗಾಗಿ ಕೆಳವರ್ಗದವರು ಶಿಕ್ಷಣವನ್ನು ಪಡೆಯುವ ಕನಸು ಕನಸಾಗೇ ಉಳಿಯಿತು. ಒಟ್ಟಾರೆ ಇವರು ಶಿಕ್ಷಣದಿಂದ ವಂಚಿತರಾಗಿ ಸಮಾಜದ ಹೀನಾಯ ಸ್ಥಿತಿಯಲ್ಲೇ ಉಳಿಯುವಂತಾಯಿತು.

ಸ್ವಾತಂತ್ರ್ಯಪೂರ್ವದಲ್ಲಿ ದಲಿತರು ಧಾರ್ಮಿಕವಾಗಿಯೂ ಕೆಲವೊಂದು ಶೋಷಣೆಗೆ ಒಳಗಾಗಿದ್ದರು. "ದಲಿತರಿಗೆ ಯಾವುದೇ ದೇವಾಲಯಗಳಿಗೆ ಪ್ರವೇಶಿಸಲು ಅವಕಾಶವನ್ನು ನೀಡಿರಲಿಲ್ಲ ದೇವರ ದರ್ಶನಕ್ಕೆ ಅಪ್ಪಣೆ ಕೊಡುತ್ತಿರಲಿಲ್ಲ, ಯಜ್ಞ ಯಾಗಾದಿಗಳಿಗೆ ಭಾಗವಹಿಸುವಂತಿರಲಿಲ್ಲ. ಅಸ್ಪೃಶ್ಯ ಜನರಿಗೆ ಕೆಲವೊಂದು ಉಗ್ರ ದೇವತೆಗಳನ್ನು ಮಾತ್ರ ಆರಾಧಿಸುವಂತೆ ಮಾಡಲಾಗಿತ್ತು. ಇವರು ವೇದ ಮಂತ್ರಗಳನ್ನು ಕಲಿಯುವಂತಿರಲಿಲ್ಲ ಹಾಗೂ ಹೇಳುವಂತಿರಲಿಲ್ಲ. ಹಾಗೇನಾದರೂ ಮಂತ್ರವನ್ನು ಜಪಿಸಿದ್ದೇ ಆದರೆ ಅವರಿಗೆ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು."[3] ಊರಿನ ಹಬ್ಬ-ಹರಿದಿನ, ಜಾತ್ರೆ ಸಮಾರಂಭಗಳಿಗೆ ದಲಿತರನ್ನು ನಿಷೇದಿಸಲಾಗಿತ್ತು. ಮೇಲ್ಜಾತಿಯವರ ಶುಭ ಸಮಾರಂಭಗಳಾದ ವಿವಾಹ, ನಾಮಕರಣ, ಶ್ರಾದ್ಧ ಮೊದಲಾದ ಕಾರ್ಯಗಳಿಂದ ದೂರಉಳಿಯಬೇಕಾಗಿದ್ದಂತಹ ಪರಿಸ್ಥಿತಿಯು ಮೂಡಿ ಮೇಲ್ಜಾತಿಯವರು ಕೆಳಜಾತಿಯವರನ್ನು ಶೋಷಣೆ ಮಾಡಿದಂತಹ ಸಮಾಜವನ್ನು ಕಾಣಬಹುದು.

ಅಸ್ಪೃಶ್ಯರು ಕೆಳಮಟ್ಟದ ಜೀವನವನ್ನು ನಡೆಸುತ್ತಿದ್ದರಿಂದ ಅವರು ಆರ್ಥಿಕವಾಗಿ ಶೈಕ್ಷಣಿಕವಾಗಿ ಹಿಂದುಳಿದ್ದುದರಿಂದ ಆಡಳಿತ ಮಾಡುವ ಕನಸು ಕಾಣುವಂತಿರಲಿಲ್ಲ. ಇವರು ಬೀದಿ ಗುಡಿಸುವುದು, ಸತ್ತ ಪ್ರಾಣಿಗಳನ್ನು ಎಸೆಯುವುದು, ಚಪ್ಪಲಿ ಮಾಡುವ ಉದ್ಯೋಗಗಳಿಗೆ ಮಾತ್ರ ಸೀಮಿತರಾಗಿ ಉಳಿದರು. ಹಾಗೂ ಮಾಡಿದ ಕೆಲಸಗಳಿಗೆ ಸರಿಯಾದ ವೇತನ ಸಿಗುತ್ತಿರಲಿಲ್ಲ ಉನ್ನತ ಹುದ್ದೆಗಳು ಅವರ ಪಾಲಿಗಿರದೆ ಕೇವಲ ಶ್ರೀಮಂತರು, ಬ್ರಾಹ್ಮಣರಿಗೆ ಮಾತ್ರ ಮುಡಿಪಾಗಿದ್ದವು. ಇವರು ಊರಿನ ಕೆಲಸಗಳಾದ ವಿಷಯವನ್ನು ಮುಟ್ಟಿಸುವ ಅಂದರೆ ತಮಟೆ, ಅರೆ ಬಡಿಯುತ್ತಾ ಸುದ್ದಿ ಮುಟ್ಟಿಸುವ ತೋಟಿ ಕೆಲಸಗಳು, ಮೈಲಿಗೆ ಬಟ್ಟೆಗಳನ್ನು ತೊಳೆಯುವುದು, ಮಲವನ್ನು ಎತ್ತುವಂತಹ ಅತ್ಯಂತ ತುಚ್ಛಕರವಾದ ಉದ್ಯೋಗಗಳಲ್ಲಿ ಮಾತ್ರ ಅಲಂಕೃತರಾಗಿರುತ್ತಿದ್ದರು. ಒಂದು ವೇಳೆ ಬ್ರಿಟೀಷ್ ಸೈನ್ಯಕ್ಕೆ ಸೇರಿದ್ದೇ ಆದರೆ ಅವರನ್ನು ಉನ್ನತ ಹುದ್ದೆಗೆ ಆಯ್ಕೆ ಮಾಡಿಕೊಳ್ಳದೆ ಕೆಳವರ್ಗದ ಸಿಪಾಯಿಯಾಗಿ ನೇಮಿಸಲಾಗುತ್ತಿತ್ತು. ಜೊತೆಗೆ ಅವರ ಉದ್ಯೋಗವು ತಾತ್ಕಾಲಿಕವಾಗಿತ್ತು. ಹೀಗೆ ಉದ್ಯೋಗ ಹಿನ್ನಲೆಯಲ್ಲಿ ಅನೇಕ ಶೋಷಣೆಗಳು ಅಂದಿನ ಸಮಾಜದಲ್ಲಿ ರೂಢಿಯಲ್ಲಿದ್ದವು.

ಸ್ವಾತಂತ್ರ ಪೂರ್ವದ ಕಾಲದಲ್ಲಿ ಸಮಾಜದಲ್ಲಿದ್ದಂತಹ ಮತ್ತೊಂದು ಅಮಾನುಷ ಪದ್ಧತಿ ಎಂದರೆ ಅಧಿಕಾರಶಾಹಿವರ್ಗದವರು ತಮ್ಮ ಸ್ವಾರ್ಥಕ್ಕಾಗಿ ಲಾಭಕ್ಕಾಗಿ ಇತರರನ್ನು

ಶೋಷಣೆಗಯ್ಯುವುದಾಗಿದೆ. 1857ರ ಸಿಪಾಯ ದಂಗೆಗೆ ತತ್‌ಕ್ಷಣ ಕಾರಣವಾದ ಅಂಶವನ್ನು ಗಮನಿಸಿದರೆ ಅಲ್ಲಿದಂತಹ ಅಧಿಕಾರಿಗಳ ದೌರ್ಜನ್ಯ ತಿಳಿಯುತ್ತದೆ. ಹಿಂದೂ ಹಾಗೂ ಮುಸ್ಲಿಮರಿಗೆ ಪವಿತ್ರವೆನಿಸಿದ ದನದ ಮತ್ತು ಹಂದಿ ಮಾಂಸದ ಕೊಬ್ಬನ್ನು ಬಂದೂಕುಗಳಿಗೆ ಸವರಿ ಅದನ್ನು ಅವರು ಬಾಯಿಂದ ಕಚ್ಚಿ ತೆಗೆಯಬೇಕಾಗಿತ್ತು. ಹೀಗೆ ಅವರ ಮೇಲೆ ದಬ್ಬಾಳಿಕೆಯನ್ನು ನಡೆಸಲಾಗುತ್ತಿತ್ತು. ಅದು ಮುಂದುವರೆದು ಸಮಾಜದಲ್ಲಿ ಅಧಿಕಾರಿಗಳು ಹಣದ ಆಸೆಗೆ ನ್ಯಾಯವನ್ನು ಸದಾ ಶ್ರೀಮಂತ ವರ್ಗದವರ ಕಡೆ ಮಾಡಿ ಬಡವರಿಗೆ ಅನ್ಯಾಯವನ್ನು ಮಾಡುತ್ತಿದ್ದರು. ಲಂಚವನ್ನು ಪಡೆದು ತಮ್ಮ ತನವನ್ನು ಕಳೆದುಕೊಂಡು ಶ್ರೀಮಂತರು ಹೇಳಿದಂತೆ ಕೇಳುವ ಅಧಿಕಾರಿಗಳಾಗಿದ್ದರು. ಹೀಗೆ ಆಡಳಿತವು ಸದಾ ಉಳ್ಳವರ ಪರವಾಗಿದ್ದು ದಲಿತರ ವಿರೋಧವಾಗಿರುವ ಸಮಾಜವು ಅಸ್ತಿತ್ವದಲ್ಲಿತ್ತು. ಅಂದಿನ ಸಮಾಜದಲ್ಲಿ ಕಂದಾಯ ಹಾಗೂ ತೆರಿಗೆಗಳು ದುಬಾರಿಯಾಗಿದ್ದು ಬಡವರ ಮೇಲೆ ಹೆಚ್ಚಿನ ರೀತಿಯಲ್ಲಿ ದೌರ್ಜನ್ಯ ನಡೆಯುತ್ತಿತ್ತು. ರೈತಾಪಿ ವರ್ಗದವರಿಗೆ ತಾವು ಬೆಳೆದ ಬೆಳೆಯ ಇಂತಿಷ್ಟು ಭಾಗವನ್ನು ಕಡ್ಡಾಯವಾಗಿ ನೀಡಬೇಕೆಂದು ನಿಗದಿಪಡಿಸಲಾಗಿತ್ತು. ಆದರೆ ಬ್ರಾಹ್ಮಣ, ಶ್ರೀಮಂತ ವರ್ಗದವರಿಗೆ ಕಂದಾಯ ನೀಡುವಲ್ಲಿ ಮಾನ್ಯ ನೀಡಲಾಗಿತ್ತು. ಕಂದಾಯ ನಿಗದಿ ಮಾಡುವಾಗ ಅವರ ಸಾಮಾರ್ಥ್ಯನುಸಾರ ಕಂದಾಯ ನಗದಿಯಾಗದೆ ಅವರ ಸಾಮರ್ಥ್ಯಕ್ಕಿಂತ ಹೆಚ್ಚು ಕಂದಾಯ ವಿಧಿಸುವ ಮೂಲಕ ರೈತಾಪಿ ವರ್ಗದವರ ಮೇಲೆ ಶೋಷಣೆ ನಡೆಯುತ್ತಿತ್ತು. ಜೊತೆಗೆ ಭಾರತೀಯ ವೈಶ್ಯರ ಮೇಲೆ ಅತಿಯಾದ ವ್ಯಾಪಾರ ತೆರಿಗೆಯನ್ನು ವಿಧಿಸಲಾಗುತ್ತಿತ್ತು. ಆದರೆ ಆಂಗ್ಲ ವ್ಯಾಪಾರಿಗಳಿಗೆ ಕಡಿಮೆ ತೆರಿಗೆ ಅಥವಾ ತೆರಿಗೆ ರಹಿತ ವ್ಯಾಪರಕ್ಕೆ ಆದ್ಯತೆ ನೀಡಲಾಗಿತ್ತು.

ಬಡವ ಶ್ರೀಮಂತ ಎಂಬ ಎರಡು ಪಂಗಡಗಳು ಅಂದಿನ ಸಮಾಜದಲ್ಲಿದ್ದು, ಆರ್ಥಿಕವಾಗಿ ಉನ್ನತಮಟ್ಟದಲ್ಲಿರುವವರನ್ನು ಶ್ರೀಮಂತರೆಂದೂ ಹಾಗೂ ಆರ್ಥಿಕವಾಗಿ ಹಿಂದುಳಿದ ಅಂದರೆ ತಿನ್ನಲು ಅನ್ನವಿಲ್ಲದ, ಹೊದೆಯಲು ಬಟ್ಟೆ ಇಲ್ಲದವರನ್ನು ದರಿದ್ರರು, ಬಡವರು ಎಂದು ಪರಿಗಣಿಸಲಾಗಿದೆ. ಸಾಮಾನ್ಯವಾಗಿ ಶ್ರೀಮಂತರೆಲ್ಲರೂ ಜಮೀನ್ದಾರರಾಗಿದ್ದರು. ಬಡವರು ಕೆಲಸ ಮಾಡಲು ಜಮೀನು ಇಲ್ಲದೆ ಜಮೀನ್ದಾರರ ಜಮೀನನ್ನು ಗೇಣಿಗೆ ಮಾಡಿ ಭೂ ಬಾಡಿಗೆಯಾಗಿ ಅವರು ಬೆಳೆದ ಅರ್ಧಕ್ಕಿಂತ ಹೆಚ್ಚಿನ ಬೆಳೆಯನ್ನು ನೀಡಬೇಕಾಗಿತ್ತು. ಕಷ್ಟ ಪಡುವವರು ಬಡವರಾದರೆ ಅದರ ಫಲವನ್ನು ಅನುಭವಿಸುವವರು ಶ್ರೀಮಂತರಾಗಿದ್ದರು. ಶ್ರೀಮಂತರು ಬಡವರನ್ನು ಜಮೀನ್ದಾರಿ ಪದ್ಧತಿಯ ಮೂಲಕ ದೌರ್ಜನ್ಯ ಮಾಡುತ್ತಿದ್ದರು. ಇದರ ಜೊತೆಗೆ ಶ್ರೀಮಂತರು ಬಡವರಿಗೆ ಕಷ್ಟಕಾಲದಲ್ಲಿ ಹಣವನ್ನು ನೀಡಿ ಅದಕ್ಕೆ ಹೆಚ್ಚಿನ ದರದ ಬಡ್ಡಿ, ಚಕ್ರಬಡ್ಡಿ ಹಾಕಿ ಹಣದ ಮೊತ್ತ ಜಾಸ್ತಿಯಾಗಿ ಅವರು ತೀರಿಸದಾದಾಗ ಅವರಿಂದ ಅಡಮಾನವಿಟ್ಟು ಕೊಂಡಿದ್ದ ಮನೆ ಅಥವಾ ಜಮೀನನ್ನು ಮುಟ್ಟುಗೋಲು ಹಾಕಿಕೊಂಡು ಅವರ ಮೇಲೆ ಶೋಷಣೆಯನ್ನು ನಡೆಸಲಾಗುತ್ತಿತ್ತು.

ಶ್ರೀಮಂತರು ಬಡವರಿಗೆ ಇಂತಿಷ್ಟು ದುಡ್ಡಿಗೆ ಇಷ್ಟು ವರ್ಷಗಳ ಕಾಲದ ಇಲ್ಲವೆ ಜೀವನವಿಡೀ ತಮ್ಮ ಮನೆಯಲ್ಲಿ ಕೆಲಸದಾಳುಗಳಾಗಿರುವಂತೆ ಮಾಡಿ ಕೊಳ್ಳುವಂತಹ ಜೀತ ಪದ್ಧತಿಯು ಅಂದಿನ ಸಮಾಜದಲ್ಲಿ ಹೆಚ್ಚಾಗಿತ್ತು. ದಲಿತರನ್ನು ಜೀತಕ್ಕಿರಿಸಿಕೊಂಡು ಅವರಿಗೆ ಸರಿಯಾದ ಊಟ, ಬಟ್ಟೆ ನೀಡದೆ ಅವರಿಂದ ಹೆಚ್ಚಿನ ಶ್ರಮದಾಯಕ ಕೆಲಸಗಳನ್ನು ತುಚ್ಚ ಕೆಲಸಗಳನ್ನು ಮಾಡಿಸಲಾಗುತ್ತಿತ್ತು ಹೀಗೆ ಅಂದಿನ ಸಮಾಜವು ಶೋಷಣೆಯಿಂದ ಕೂಡಿದುದು ಕಂಡು ಬರುತ್ತದೆ.

ಹಿಂದೆ ಅಂದರೆ ಸ್ವಾತಂತ್ರ ಪೂರ್ವದಲ್ಲಿ ಪುರುಷ ಪ್ರಧಾನ ಸಮಾಜ ಅಸ್ತಿತ್ವದಲ್ಲಿದ್ದು ಸ್ತ್ರೀಗೆ ಯಾವುದೇ ರೀತಿಯ ಸ್ಥಾನಮಾನವನ್ನು ನೀಡದೆ ಕೇವಲ ಅಡುಗೆ ಮನೆಯ ಕೆಲಸ, ಗಂಡನ ಸೇವೆ ಮಾಡುವ, ಮತ್ತು ಮಕ್ಕಳನ್ನು ಹೆರುವ ಯಂತ್ರವಾಗಿ ಮಾತ್ರ ಅವರನ್ನು ಸೀಮಿತರನ್ನಾಗಿಸಲಾಗಿತ್ತು. ಮನು ಧರ್ಮಶಾಸ್ತ್ರದ ಪ್ರಕಾರ "ಮಹಿಳೆಯು ಬಾಲ್ಯದಲ್ಲಿ ತಂದೆಯ ಆಶ್ರಯದಲ್ಲೂ, ಪ್ರಾಯದಲ್ಲಿ ಗಂಡನ ಆಶ್ರಯದಲ್ಲೂ, ವೃದ್ಧಾಪ್ಯದಲ್ಲಿ ಮಕ್ಕಳ ಆಶ್ರಯದಲ್ಲಿ ಇರಬೇಕೆಂದು ಒಂದು ವೇಳೆ ಅವರ್‍ಯಾರೂ ಇಲ್ಲದಿದ್ದರೆ ಬಂಧುಗಳ ಆಶ್ರಯದಲ್ಲಿ ಇರತಕ್ಕದೆಂದು ಸ್ವಾತಂತ್ರವಾಗಿರಲು ಮಹಿಳೆ ಅನರ್ಹಳು ಅವಳಿಗೆ ಇತರರ ರಕ್ಷಣೆ ಅತ್ಯವಶ್ಯ"[4] ಎಂದು ಹೇಳಿದ್ದಾರೆ.

ಸ್ತ್ರೀಯರು ಸಾಂಪ್ರದಾಯದ ಹೆಸರಿನಲ್ಲಿ ಹಲವಾರು ಸಾಮಾಜಿಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಅಂದಿನ ಸಮಾಜದಲ್ಲಿ ಬಾಲ್ಯವಿವಾಹ, ಪರದಾ ಪದ್ಧತಿ, ಸತಿಸಹಗಮನ ಪದ್ಧತಿ, ವಿಧವಾ ಪುನರ್‌ವಿವಾಹದ ನಿಷೇದ, ದೇವದಾಸಿ ಪದ್ಧತಿಯಂತಹ ಅನಿಷ್ಟ ಪದ್ಧತಿಗಳು ಹೆಚ್ಚು ಅಸ್ಥಿತ್ವದಲ್ಲಿದ್ದವು. ಸ್ತ್ರೀ ಶಿಕ್ಷಣದಿಂದ ವಂಚಿತಳಾಗಿದ್ದಳು. ಅವಳಿಗೆ ಸಮಾಜದಲ್ಲಿ ಉತ್ತಮ ಸ್ಥಾನ ಮಾನವನ್ನು ನೀಡದೆ ಪುರುಷರ ಅಧೀನರನ್ನಾಗಿ ಮಾಡಲಾಗಿತ್ತು. ಯಜ್ಞ ಯಾಗಾದಿಗಳಂತಹ ಧಾರ್ಮಿಕ ವಿದಿವಿಧಾನಗಳಲ್ಲಿ ಸ್ತ್ರೀಯು ಭಾಗವಹಿಸುವಂತಿರಲಿಲ್ಲ, ತೀರ್ಮಾನ ಮಾಡುವಾಗ ಮಧ್ಯ ಪ್ರವೇಶಿಸುವಂತಿರಲಿಲ್ಲ, ಆಕೆಗೆ ಯಾವುದೇ ರೀತಿಯ ನ್ಯಾಯ ಆಸ್ತಿ, ಸಂಪತ್ತನ್ನು ಹೊಂದುವಂತಿರಲಿಲ್ಲ, ಮಹಿಳೆಯು ಯಾವುದೇ ವಿಷಯದಲ್ಲೂ ನಾಯಕತ್ವವನ್ನು ಪ್ರತಿನಿಧಿಸುವಂತಿರಲಿಲ್ಲ. ಸ್ತ್ರೀಗಿಂತ ಪಾಪದ ವಸ್ತು ಇನ್ನೊಂದಿಲ್ಲವೆಂದು ಪರಿಗಣಿಸಿ ಸಮಾಜದಲ್ಲಿ ಹೆಣ್ಣು ಮಗುವಿನ ಜನನವಾದರೆ ಅದು ಶಾಪವೆಂದೂ, ಆಕೆ ಎಲ್ಲ ಅನಿಷ್ಟದ ಬೇರು ಎಂದು ಪರಿಭಾವಿಸಲಾಗುತ್ತದೆ. ಈ ರೀತಿಯಾಗಿ ಮಹಿಳೆಗೆ ಆರ್ಥಿಕವಾಗಿ ಸಾಮಾಜಿಕವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹಕ್ಕು ಮತ್ತು ಸ್ವಾತಂತ್ರ್ಯವನ್ನು ನಿರಾಕರಿಸಿ ಅವರನ್ನು ಅಂದಿನ ಸಮಾಜದಲ್ಲಿ ಶೋಷಣೆಗೆ ಒಳಪಡಿಸಿದ್ದರು.

ಸ್ವಾತಂತ್ರ್ಯ ಪೂರ್ವದ ಎಲ್ಲ ರಂಗಗಳಲ್ಲಿಯೂ ಶೋಷಣೆ ಎಂಬುದು ಹೆಚ್ಚಾಗಿದ್ದು ಅಂದಿನ ಸಮಾಜದಲ್ಲಿ ಅನೇಕ ಸಂಪ್ರದಾಯ ಹಾಗೂ ಮೂಡ ನಂಬಿಕೆಗಳಿಂದ ಕೂಡಿದ್ದ

ದುಷ್ಟ ಆಚರಣೆಗಳು ಅಸ್ತಿತ್ವದಲ್ಲಿದ್ದವು. ಸಮಾಜದ ಶ್ರೀಮಂತ ವರ್ಗ, ಅಧಿಕಾರಿವರ್ಗ, ಬ್ರಾಹ್ಮಣರಂತಹ ಮೇಲ್ವರ್ಗಕ್ಕೆ ಸೇರಿದಂತಹ ಜನಾಂಗದವರು ಅಲ್ಲಿದ್ದಂತಹ ಕೆಳಸ್ತರದ ಜೀವನವನ್ನು ನೆಡೆಸುತ್ತಿದ್ದಂತಹ ದಲಿತರು, ಬಡವರು, ಅಸ್ಪೃಶ್ಯರು ಮುಂತಾದವರನ್ನು ದೌರ್ಜನ್ಯ, ದಬ್ಬಾಳಿಕೆಗೆ ಒಳಪಡಿಸಿ ವಿವಿಧ ನೆಲೆಗಳಲ್ಲಿ ಶೋಷಣೆಗಯ್ಯುತ್ತಿದ್ದರು. ಈ ರೀತಿಯಾಗಿ ಅಂದಿನ ಸಮಾಜದಲ್ಲಿ ಶೋಷಣೆ ಎಂಬುದು ಅಧಿಕ ಪ್ರಮಾಣದಲ್ಲಿ ಅಸ್ತಿತ್ವದಲ್ಲಿತ್ತು ಎಂಬುದನ್ನು ಮನಗಾಣಬಹುದಾಗಿದೆ.

೨) ಸ್ವಾತಂತ್ರ್ಯಾ ನಂತರದಲ್ಲಿ ಶೋಷಣೆಯ ಪರಿಸ್ಥಿತಿ

ಸ್ವಾತಂತ್ರ್ಯಾ ನಂತರದ ಸಮಾಜದಲ್ಲಿಯೂ ಶೋಷಣೆ ಎಂಬುದು ಇದ್ದು ಅದನ್ನು ಸ್ವಾತಂತ್ರ್ಯ ಪೂರ್ವಕ್ಕೆ ಹೊಲಿಸಿದರೆ ಸ್ವಲ್ಪ ಮಟ್ಟಿಗೆ ಮಾತ್ರ ಸುಧಾರಣೆಗೊಂಡಿರುವುದು ಕಂಡುಬರುತ್ತದೆ. 1960–70ರ ದಶಕದ ಗ್ರಾಮೀಣ ಸಮಾಜಗಳಲ್ಲಿ ಮೂಢನಂಬಿಕೆ, ಸಂಪ್ರದಾಯ, ಆಚಾರ ವಿಚಾರ, ಜಾತಿ ಪದ್ಧತಿ ಇಂತಹ ಹಲವು ಕಟ್ಟುಪಾಡುಗಳು ರೂಢಿಯಲ್ಲಿದ್ದವು. ಇಂತಹ ಸಮಾಜವನ್ನು ಒಳಗೊಂಡಂತಹ ಪ್ರದೇಶಗಳಲ್ಲಿ ಶೋಷಣೆಯು ಸಂಪೂರ್ಣವಾಗಿ ನಾಶವಾಗದೆ ಇನ್ನೂ ಉಳಿದಿರುವುದು ಕಂಡುಬರುತ್ತದೆ. ಶ್ರೀಮಂತ ವರ್ಗದವರು, ಜಮೀನ್ದಾರರು, ಅಧಿಕಾರಶಾಹಿಗಳು, ಮುಂತಾದವರು ಬಡವರ ಮೇಲೆ ದಬ್ಬಾಳಿಕೆಯನ್ನು ಮಾಡುವುದರ ಮುಖಾಂತರ ಶೋಷಣೆಯನ್ನು ಮಾಡುತ್ತಿದ್ದರು. ಈ ರೀತಿ ಶೋಷಣೆಗೆ ಒಳಗಾದವರಲ್ಲಿ ಕೆಲವರು ತಮ್ಮ ಮೇಲೆ ಆದ ದೌರ್ಜನ್ಯವನ್ನು ಸಹಿಸಿಕೊಂಡರೆ ಮತ್ತೆ ಕೆಲವರು ಅದರ ವಿರುದ್ಧ ಪ್ರತಿಭಟನೆ ಮಾಡಿದ್ದನ್ನು ಕಾಣಬಹುದಾಗಿದೆ.

ಕೆಳಜಾತಿಗೆ ಸೇರಿದವರು ಮೊದಲು ಧಾರ್ಮಿಕ ವ್ಯವಹಾರಗಳಿಗೆ ಭಾಗವಹಿಸುವಂತಿರಲಿಲ್ಲ. ಅವರನ್ನು ಕೇವಲ ಬೀದಿಯ ಕಸ ಗುಡಿಸುವ, ಚರಂಡಿ ಸ್ವಚ್ಛಗೊಳಿಸುವ, ಮಲ ಮೂತ್ರಗಳನ್ನು ಹೊರುವಂತಹ ತುಚ್ಛ ಕೆಲಸಗಳಿಗೆ ಮಾತ್ರ ಬಳಸುತ್ತಿದ್ದರು. ಇಂತಹ ವ್ಯವಸ್ಥೆಯು ದಿನೇ ದಿನೆ ಕಡಿಮೆಯಾಗುತ್ತಾ ಬರುವುದನ್ನು ಕಾಣಬಹುದು. "ಶಿಕ್ಷಣವು ಜಾತಿ ಪದ್ಧತಿಯ ಕಪಿಮುಷ್ಟಿಯನ್ನು ಸಡಿಲಗೊಳಿಸುವಲ್ಲಿ ಹಾಗೂ ಅದರ ಬಿಗಿಯನ್ನು ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿತ್ತು. ಶಿಕ್ಷಣವು ಧರ್ಮದ ವಿಷಯದಲ್ಲಿ ನಕಾರಾತ್ಮಕವಾದುದಾಗಿದೆ. ಅದು ಸ್ವಾತಂತ್ರ್ಯ, ಸಮಾನತೆ, ಸಮಾನ ಅವಕಾಶಗಳು ಮೊದಲಾದ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಬಿತ್ತಿ ಬೆಳೆಸುತ್ತದೆ"[5] ಇಂತಹ ಶಿಕ್ಷಣ ವ್ಯವಸ್ಥೆಯು ಕೇವಲ ಶ್ರೀಮಂತರ, ಮೇಲ್ವರ್ಗದವರ ಸ್ವತ್ತಾಗದೆ ಕೆಳವರ್ಗದ ಕೆಲವರಿಗೆ ಶಿಕ್ಷಣ ದೊರಕುವಂತಾಯಿತು. ಇಂತಹ ಸಮಾಜದಲ್ಲಿ ವಿವಿಧ ಜಾತಿ ಉಪಜಾತಿಗಳ ಮಕ್ಕಳು ಒಂದು ಕಡೆ ಕುಳಿತು ಕಲಿಯಲು, ಎಲ್ಲ ಜಾತಿಯ ಜನರು ಒಂದೇ ಪಂಕ್ತಿಯಲ್ಲಿ ಕುಳಿತು ಬೋಜನ ಮಾಡುವ, ಅಂತರ್ ಜಾತೀಯ ವಿವಾಹ, ಮೇಲು ಕೀಳೆಂಬ ಭಾವನೆ,

ಮಡಿ ಮೈಲಿಗೆಯ ಮನೋಭಾವವನ್ನು ತೊಡೆಯಲು ಸಾಧ್ಯವಾಯಿತಾದರೂ ಸಹ ಅದು ಹೆಚ್ಚು ಮನ್ನಣೆಯನ್ನು ಪಡೆಯಲಿಲ್ಲ ಇಂತಹ ಸನ್ನಿವೇಶದ ಸಮಾಜದಲ್ಲಿ ಶೋಷಣೆ ಎಂಬುದು ಸಂಪೂರ್ಣವಾಗಿ ನಾಶವಾಗದೆ ಅಲ್ಲಿನ ಅಸ್ಪೃಶ್ಯ ವಿದ್ಯಾವಂತರ ಬೌದ್ಧಿಕತೆಯ ಫಲವಾಗಿ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ಸ್ವಲ್ಪಮಟ್ಟಿನ ಬೆಳವಣಿಗೆ ಆಗಿರುವುದು ಕಂಡುಬರುತ್ತದೆ.

ಸ್ವಾತಂತ್ರ್ಯಾ ನಂತರದಲ್ಲಿ ಕೆಳವರ್ಗದವರಿಗೆ ಧಾರ್ಮಿಕ ಕ್ಷೇತ್ರದಲ್ಲಿ ಕೊಂಚ ಮಟ್ಟಿಗೆ ಸ್ಥಾನ ದೊರಕುವಂತಾಯಿತು. ಅವರನ್ನು ಹಿಂದಿನ ರೀತಿಯಲ್ಲಿ ಕಾಣದೆ ಅವರು ದೂರದಿಂದಲೇ ನಿಂತು ದೇವರನ್ನು ನೋಡಬೇಕೆಂಬ ಷರತ್ತುಗಳು ಹೋಗಿ ಕ್ರಮೇಣ ಅವರುಗಳು ದೇವಸ್ಥಾನದ ಒಳಗಡೆಗೆ ಬರುವಂತಾಯಿತು. ಹಾಗೂ ಧಾರ್ಮಿಕ ವಿಧಿ ವಿಧಾನಗಳಾದ ಪೂಜೆ ಪುರಸ್ಕಾರ, ಯಜ್ಞಯಾಗಾದಿಗಳು ಹಾಗೂ ವಿವಾಹ ಮಹೋತ್ಸವಗಳಂತಹ ಶುಭ ಸಮಾರಂಭಗಳಿಗೆ ಹಾಜರಾಗ ಬಹುದಾಗಿತ್ತು. ಊರಿನ ಹಬ್ಬ-ಜಾತ್ರೆಗಳ ಕೆಲಸಗಳಲ್ಲಿ ಕೆಳವರ್ಗದವರೂ ಸಹ ಭಾಗವಹಿಸಬಹುದಾಗಿತ್ತಾದರೂ ಸಹ ಮೊದ-ಮೊದಲು ಈ ಧಾರ್ಮಿಕ ಆಚರಣೆಗಳಲ್ಲಿ ಶೋಷಣೆಯು ಬಹಳ ಹೆಚ್ಚಾಗಿತ್ತು. ಕ್ರಮೇಣ ಹಂತ ಹಂತವಾಗಿ ಕ್ಷೀಣವಾಗುತ್ತಾ ಬಂದಿತು. ಕೆಳವರ್ಗದವರನ್ನು ಸಮಾಜದಿಂದ ಹೊರಗಡೆ ಇಡದೆ ಊರಿನ ಒಳಗೆ ಬಿಟ್ಟುಕೊಳ್ಳಲಾಯಿತು. ಕಾರಣ ಅವರಿಂದ ಹಲವಾರು ಊರಿನ ಕೆಲಸಗಳನ್ನು ಮಾಡಿಸಿಕೊಳ್ಳಬೇಕಾಗಿತ್ತು. ಕೆಳವರ್ಗದವರು ಊರ ಒಳಗೆ ಬಂದ್ದುದರಿಂದ ಬ್ರಾಹ್ಮಣರು ಅಗ್ರಹಾರಗಳಲ್ಲಿ ವಾಸಮಾಡತೊಡಗಿದರು. ಅವರನ್ನು ಮುಟ್ಟಿಸಿಕೊಂಡರೆ ಮೈಲಿಗೆಯಾಗುತ್ತದೆ, ಅವರ ನೆರಳು ಬಿದ್ದರೆ ಮಡಿಯು ಹಾಳಗುತ್ತದೆ ಎಂಬ ಭಾವನೆಗಳು ಬರುಬರುತ್ತ ದೂರವಾಗತೊಡಗಿದವು. ಉದ್ಯೋಗದ ಹಂಚಿಕೆಗಳಲ್ಲೂ ಸಹ ಶ್ರೀಮಂತರು, ಬ್ರಾಹ್ಮಣ ವರ್ಗದವರು ಮೇಲುಗೈ ಸಾಧಿಸಿದ್ದರಾದರೂ ಸಹ ಅಲ್ಲೊಬ್ಬ ಎಂಬಂತೆ ವಿರಳವಾಗಿ ಕೆಳವರ್ಗದವರಿಗೂ ಉದ್ಯೋಗ ದೊರೆಯುವಂತಾಯಿತು. ವಂಶ ಪಾರಂಪರ್ಯವಾಗಿ ಮಾಡುತ್ತಾ ಬಂದ ಕುಲಕಸುಬುಗಳನ್ನು ಬಿಟ್ಟು ಸ್ವತಂತ್ರವಾಗಿ ಬೇರೆ ಬೇರೆ ಉದ್ಯೋಗಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ದೊರೆಯಿತು.

ಭಾರತೀಯ ಸಂವಿದಾನದ ಪ್ರಕಾರ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಹಾಗೂ ಬುಡ್ಡಕಟ್ಟುಗಳ ಜನರಿಗೆ ವಿಶೇಷ ರಕ್ಷಣೆಯನ್ನು ನೀಡಲಾಗುತ್ತಿದ್ದು ಸರ್ಕಾರಿ ಸೇವಾ ಹುದ್ದೆಗಳನ್ನು ಅವರಿಗಾಗಿಯೇ ನಿಗದಿತ ಪ್ರಮಾಣದಲ್ಲಿ ಕಾಯ್ದಿರಿಸಲಾಯಿತು. ಸರ್ಕಾರದ ವತಿಯಿಂದ ಅವರಿಗೆ ವಿಶೇಷ ಸೌಲಭ್ಯ, ಉಚಿತ ವಿದ್ಯಾರ್ಥಿ ನಿಲಯಗಳು, ವಿದ್ಯಾರ್ಥಿ ವೇತನ ಹೀಗೆ ಬಹಳಷ್ಟು ಅವಕಾಶಗಳನ್ನು ಹೊಂದಿದ್ದರೂ ಸಹ ಎಲ್ಲೋ ಒಂದು ಮೂಲೆಯಲ್ಲಿ ಅವರ ಮೇಲಿನ ಶೋಷಣೆಗಳು ಮಾತ್ರ ನಿಲ್ಲದೆ ನಿರಂತರವಾಗಿ ನೆಡೆಯುತ್ತಲೇ ಇದ್ದವು.

ಅಂದಿನ ಗ್ರಾಮ ಸಮಾಜದಲ್ಲಿ ದಲಿತರು, ಕೆಳವರ್ಗದವರು ಬಹಳಷ್ಟು ಬಡತನದಿಂದ ಬಳಸುತ್ತಿದ್ದರು. ಒಂದು ವರ್ಷ ಮಳೆ-ಬೆಳೆಯಾಗಿ ಸುಭೀಕ್ಷ ಸಂಭವಿಸಿದರೆ ಮತ್ತೊಂದು ವರ್ಷ ದುರ್ಬಿಕ್ಷತೆ ತಲೆದೋರುತ್ತಿತ್ತು. ಆಗಾಗ್ಗೆ ಬಂದೊದಗುವ ಕ್ಷಾಮ, ಬರಗಾಲ, ಅತಿವೃಷ್ಟಿ, ಅನಾವೃಷ್ಟಿ, ಪ್ರವಾಹ, ಯುದ್ಧ ಮೊದಲಾದವುಗಳು ಸಂಭವಿಸುತ್ತಿದ್ದುದರಿಂದ ಆರ್ಥಿಕ ಪರಿಸ್ಥಿತಿಯು ಅಷ್ಟೇನು ಚೆನ್ನಾಗಿರದೆ ಅವರ ವರಮಾನವು ಕಡಿಮೆಯಾಗಿದ್ದು ತಮ್ಮ ಜೀವನ ನಿರ್ವಹಣೆ ಮಾಡಲೂ ಸಹ ಆಗದಂತಹ ಪರಿಸ್ಥಿತಿಯನ್ನು ಎದುರಿಸುತ್ತಿದ್ದರು. ಆಗ ತಮ್ಮ ಕುಟುಂಬದ ನಿರ್ವಹಣೆಗಾಗಿ ಅವರು ಶ್ರೀಮಂತರ ಬಳಿ ತಮ್ಮ-ತಮ್ಮ ಮನೆ, ಜಮೀನುಗಳನ್ನು ಅಡಮಾನವಿಟ್ಟು ಸಾಲವನ್ನು ಪಡೆಯುತ್ತಿದ್ದರು. ಹೀಗಾಗಿ ಬಡವ-ಶ್ರೀಮಂತರ ನಡುವಿನ ಲೇವಾದೇವಿ ವ್ಯವಹಾರ ಕಡಿಮೆಯಾಗಲಿಲ್ಲ. ಪಡೆದ ಸಾಲಕ್ಕೆ ಬಡ್ಡಿ-ಚಕ್ರಬಡ್ಡಿ ಸೇರಿಸಿ ಮರುಪಾವತಿ ಮಾಡಬೇಕಾಯಿತು. ಇಲ್ಲವಾದರೆ ಅಡವಿಟ್ಟ ಜಮೀನು, ಮನೆಯನ್ನು ಶ್ರೀಮಂತರು ವಶಪಡಿಸಿಕೊಳ್ಳುತ್ತಿದ್ದರು. ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯ ನಂತರದಲ್ಲೂ ಸಹ ಶ್ರೀಮಂತರು ಹಾಗೂ ಬಡವರ ನಡುವೆ ಶೋಷಣೆ ಎಂಬುದು ಇದ್ದು ಸ್ವಲ್ಪ ಮಾತ್ರ ಕಾಲದಿಂದ ಕಾಲಕ್ಕೆ ಕಡಿಮೆಯಾಗುತ್ತಾ ಬಂದಿರುವುದನ್ನು ಇಂದಿನ ಸಮಾಜದಲ್ಲಿ ಕಾಣಬಹುದು.

ಸ್ವಾತಂತ್ರ್ಯಾ ನಂತರದ ಗ್ರಾಮೀಣ ಸಮಾಜದಲ್ಲಿ 'ಜೀತ' ಪದ್ಧತಿಯು ಇನ್ನೂ ಆಚರಣೆಯಲ್ಲಿದ್ದು ಬಡವರು ಜಮೀನ್ದಾರರ, ಶ್ರೀಮಂತರ ಬಳಿ ಪಡೆದ ಹಣಕ್ಕೆ ಪ್ರತಿಯಾಗಿ ತಮ್ಮ ಕುಟುಂಬದ ವ್ಯಕ್ತಿಯೋರ್ವನನ್ನು ಅವರ ಬಳಿ ಕೆಲಸಕ್ಕೆ ಕಳುಹಿಸಲಾಗುತ್ತಿತ್ತು. ಆಗ ಜೀತಕ್ಕೆ ಬಂದ ವ್ಯಕ್ತಿಯನ್ನು ಹಲವು ಬಗೆಗಳಲ್ಲಿ ಶೋಷಣೆಗಳನ್ನು ಮಾಡಲಾಗತ್ತಿತ್ತು. ಬಹಳ ಕಷ್ಟದ ಹಾಗೂ ತುಚ್ಚ ಕೆಲಸಗಳನ್ನು ಮಾಡಿಸಿಕೊಂಡು ಅವರಿಗೆ ಸರಿಯಾದ ಊಟ-ಬಟ್ಟೆಯನ್ನು ನೀಡುತ್ತಿರಲಿಲ್ಲ ಇಂತಹ ಪರಿಸ್ಥಿತಿಯಲ್ಲಿ 1976ರಲ್ಲಿ ಜೀತ ಪದ್ಧತಿಯ ನಿರ್ಮೂಲನ ಶಾಸನ ಜಾರಿಗೊಂಡಿತ್ತು. ಈ ಶಾಸನ ಜಾರಿಗೊಂಡ ನಂತರವೂ ಸಹ ಸ್ವಲ್ಪ ಮಟ್ಟಿಗೆ ಜೀತವು ರೂಢಿಯಲ್ಲಿತ್ತು. ಇದರ ಜೊತೆಗೆ ಅಂದಿನ ಸಮಾಜದಲ್ಲಿ ಅಧಿಕಾರಿಗಳ ಶೋಷಣೆಯೂ ಮುಂದುವರೆದಿತ್ತು. ಅಧಿಕಾರಿಗಳು ಉದ್ಯೋಗ ನೀಡುವಲ್ಲಿ ತಾರತಮ್ಯ ಮಾಡಿ ಶ್ರೀಮಂತರಿಗೆ ಮಾತ್ರ ಮೀಸಲಿಟ್ಟಿದ್ದರು. ಬರುಬರುತ್ತಾ ಕೆಳವರ್ಗದವರು ಸ್ವಲ್ಪಮಟ್ಟಿಗೆ ಶಿಕ್ಷಣವನ್ನು ಪಡೆದ ನಿಮಿತ್ತ ಹಾಗೂ ಸರ್ಕಾರ ಮಾಡಿದ ಮೀಸಲಾತಿಗಳಿಂದಾಗಿ ಉದ್ಯೋಗದಲ್ಲಿ ನಡೆಯುತ್ತಿದ್ದ ಶೋಷಣೆಗಳು ವಿರಳವಾಗುತ್ತಾ ಬಂದವು ನ್ಯಾಯ ತೀರ್ಮಾನದ ವಿಷಯದಲ್ಲೂ ಸಹ ಅಧಿಕಾರ ವರ್ಗದವರು ಶ್ರೀಮಂತರ ಪರವಾಗಿದ್ದು ಬಡವರ ವಿರೋಧವಾಗಿದ್ದರು. ಲಂಚದ ಆಸೆಗೆ ಒಳಪಟ್ಟು ತಮ್ಮ ಉದ್ಯೋಗಕ್ಕೆ ವಂಚನೆ ಮಾಡುತ್ತಿದ್ದರು ನ್ಯಾಯ, ಸತ್ಯ, ಧರ್ಮ ಎಂಬುದು ಸ್ವಲ್ಪ ಮಾತ್ರ ಅಂದಿನ ಸಮಾಜದಲ್ಲಿ ಅಸ್ತಿತ್ವವನ್ನು ಪಡೆದಿದ್ದವು

ಅಂದಿನ ಗ್ರಾಮಗಳಲ್ಲಿ ಜಮೀನ್ದಾರಿ ಪದ್ದತಿಯು ಹೆಚ್ಚು ಬಳಕೆಯಲ್ಲಿತ್ತು. ಜಮೀನ್ದಾರರು ಭೂ ಒಡೆಯರಾಗಿದ್ದು ಭೂರಹಿತ ರೈತರಿಗೆ ಅವರು ತಮ್ಮ ಜಮೀನನ್ನು ಗೇಣಿ ನೀಡಿ ಹೆಚ್ಚಿನ ಲಾಭವನ್ನು ಬಯಸುತ್ತಿದ್ದರು. ಇದು ಮೊದಲಿನಿಂದಲೂ ನಡೆದುಬಂದ ಪದ್ಧತಿಯಾಗಿತ್ತು. ಸರ್ಕಾರವು 'ಉಳುವವನೇ ಭೂಮಿಯ ಒಡೆಯ' ಎಂಬ ಕಾಯಿದೆಯನ್ನು ಜಾರಿಗೆ ತಂದ ಮೇಲೆ ಜಮೀನ್ದಾರಿ ಪದ್ಧತಿಯು ತೀವ್ರವಾಗಿ ಕಡಿಮೆಯಾಯಿತು. ಮೊದಲು ಬ್ರಿಟಿಷ್ ಸರ್ಕಾರವು ಹೆಚ್ಚಿನ ಕಂದಾಯವನ್ನು ವಸೂಲಿ ಮಾಡುತ್ತಿತ್ತು. ನಂತರ ಆಡಳಿತಕ್ಕೆ ಬಂದ ಭಾರತ ಸರ್ಕಾರವು ರೈತರ ಪರವಾಗಿದ್ದು ಅವರಿಗೆ ನೆರವಾಗುವಂತೆ ಕಂದಾಯ ಹಾಗೂ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು. ಆ ವರ್ಷದ ಮಳೆ-ಬೆಳೆಯನ್ನು ಆಧರಿಸಿ ಕಂದಾಯವನ್ನು ನಿಗಧಿ ಮಾಡುತ್ತಿದ್ದರು ತಾರತಮ್ಯದಿಂದ ಕೂಡಿದ್ದ ತೆರಿಗೆ ವಿಷಯದಲ್ಲೂ ಸಹ ಹಿಂದಿಗಿಂತ ಬರುಬರುತ್ತಾ ಶೋಷಣೆಯು ಕ್ಷೀಣಿಸುತ್ತಿರುವುದು ಕಂಡುಬರುತ್ತದೆ.

"ಭಾರತೀಯ ಸಮಾಜದಲ್ಲಿ ಸ್ತ್ರೀಯರ ಶೋಷಣೆ, ಅಸಮಾನತೆ ಅತ್ಯಂತ ಸಹಜವೆಂಬಂತೆ ನಡೆದುಕೊಂಡು ಬಂದಿದೆ. ಪುರುಷರಲ್ಲಿ ತಾವೇ ಹೆಚ್ಚು ಎಂಬ ಮನೋಭಾವ ಹಿಂದಿನಿಂದಲೂ ನಡೆದುಕೊಂಡ ರೂಢಿ, ಸಂಪ್ರದಾಯ ಆಚರಣೆಗಳಿಂದ ಸ್ತ್ರೀಯರು ಅಸಮಾನತೆ ಮತ್ತು ತಾರತಮ್ಯಕ್ಕೆ ಒಳಗಾಗಿ ನರಳಿದ್ದಾರೆ, ನರಳುತ್ತಿದ್ದಾರೆ"[6]. ಕಾನೂನಿನ ನೆರಳಿನಲ್ಲಿ ಸ್ತ್ರೀಯರ ಸ್ಥಾನಮಾನ ಏರಿಕೆಯಾಗಿರಬಹುದಾದರೂ, ಅವರು ಸದಾ ತಾರತಮ್ಯ, ದಬ್ಬಾಳಿಕೆ ಹಾಗೂ ಅಪಮಾನಕ್ಕೆ ಗುರಿಯಾಗಿದ್ದಾರೆ. ಅವರ ಅಭಿಪ್ರಾಯಗಳನ್ನು ಪುರುಷರು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ತಮ್ಮ ಸಮನಾಗಿ ಕಾಣದೆ ಸರಿಯಾದ ಗೌರವವನ್ನು ನೀಡುತ್ತಿರಲಿಲ್ಲ. ಸ್ತ್ರೀಯರ ಮೇಲೆ ನಡೆಸಲಾಗುತ್ತಿದ್ದ ದುಷ್ಟ ಪದ್ಧತಿಗಳಾದ ಬಾಲ್ಯವಿಹಾರ, ಸತೀ ಸಹಗಮನ, ವರದಕ್ಷಿಣೆ, ಪರದಾ ಪದ್ದತಿ ಮುಂತಾದವುಗಳು ಕಾಲಕ್ರಮೇಣ ನಶಿಸುವ ದಾರಿಯನ್ನು ಹಿಡಿದಿತ್ತಾದರೂ ಇನ್ನೂ ಅಸ್ತಿತ್ವವನ್ನು ಹೊಂದಿದ್ದವು. ರಾಜಕೀಯ, ಧಾರ್ಮಿಕ, ಶೈಕ್ಷಣಿಕವಾಗಿ ಸ್ತ್ರೀಯು ಸಮಾಜದಲ್ಲಿ ಸ್ವಲ್ಪಮಟ್ಟಿಗೆ ಸ್ಥಾನ ಮಾನವನ್ನು ಪಡೆದಳು ಆದರೆ ಸಾಮಾಜಿಕವಾಗಿ ಹಿಂದುಳಿದಿದ್ದಳು. ಹಿಂದೆ ಇಲ್ಲದ ಆಸ್ತಿಯ ಉತ್ತರಾಧಿಕಾರದ ಹಕ್ಕು ಸ್ತ್ರೀಗೆ ದೊರೆಯಿತು. ಧಾರ್ಮಿಕ ಕ್ಷೇತ್ರದಲ್ಲಿ ಸ್ತ್ರೀಯು ಹೆಚ್ಚಿನ ಪ್ರಾಧಾನ್ಯತೆಯನ್ನು ಪಡೆದಳು. ಇಷ್ಟಾದರೂ ಸಹ ಆಕೆಯ ಮೇಲಿನ ಶೋಷಣೆ ಮಾತ್ರ ಕೊನೆಗೊಳ್ಳದೆ ಅತ್ಯಾಚಾರ, ಹಿಂಸೆ ನೀಡುವುದು, ದೇವದಾಸಿಯನ್ನಾಗಿ ಮಾಡುವುದು ಇಂತಹ ಅನಿಷ್ಟ ಆಚಾರಗಳು ನಡೆಯುತ್ತಲೇ ಇವೆ ಆದರೆ ಹಿಂದಿನ ಕಾಲಕ್ಕೆ ಹೋಲಿಕೆ ಮಾಡಿದರೆ ಮಹಿಳೆಯರ ಶೋಷಣೆ ಕಡಿಮೆಯಾಗಿದೆ ಎಂಬುದು ಮಾತ್ರ ಸತ್ಯವಾದ್ದುದಾಗಿದೆ.

ಮಹಿಳೆಯರ ಮೇಲೆ ಏರಲಾಗುತ್ತಿದ್ದಂತಹ ದುಷ್ಟ ಪದ್ಧತಿಗಳ ವಿರುದ್ಧ ರಾಜಾರಾಂ ಮೋಹನ ರಾಯ್, ಈಶ್ವರ ಚಂದ್ರ ವಿದ್ಯಾಸಾಗರ್, ದಯಾನಂದ ಸರಸ್ವತಿ, ಇಂತಹ ಮುಂತಾದ

ಮಹನೀಯರು ಬಹಳಷ್ಟು ಶ್ರಮಪಟ್ಟು ಸ್ತ್ರೀಪರ ಹೋರಾಟವನ್ನು ನಡೆಸಿದ್ದಾರೆ. ಇದರಿಂದಾಗಿ ಸ್ತ್ರೀಯರ ಶೋಷಣೆಗಳು ಹಾಗೂ ಸಂಕಷ್ಟಗಳು ದೂರ ಸರಿದು ಉತ್ತಮ ಸ್ಥಾನವನ್ನು ಪಡೆಯುವಲ್ಲಿ ಶ್ರಮಿಸಿದ್ದಾರೆಯಾದರೂ ಸಹ ಎಲ್ಲೋ ಒಂದು ಮೂಲೆಯಲ್ಲಿ ಈ ಸ್ತ್ರೀ ಶೋಷಣೆ ನೆಡೆಯುತ್ತಲೇ ಇದೆ. ಸ್ವಾತಂತ್ರ್ಯ ಪೂರ್ವದಲ್ಲಿ ಪರಕೀಯರಿಂದ ಶೋಷಣೆಯು ನೆಡೆದರೆ ಸ್ವಾತಂತ್ರ್ಯಾನಂತರದಲ್ಲಿ ಭಾರತೀಯವರಾದ ನಮ್ಮವರಿಂದಲೇ ಶೋಷಣೆಯು ನಡೆಯಿತೆಂಬುದು ಅವಮಾನಕರ ಸಂಗತಿಯಾಗಿದೆ. ಒಟ್ಟಾರೆ ಸ್ವಾತಂತ್ರ್ಯ ಪೂರ್ವದ ಸಮಾಜಕ್ಕೂ ಸ್ವಾತಂತ್ರ್ಯನಂತರದ ಸಮಾಜಕ್ಕೂ ಹೋಲಿಸಿದರೆ ಶೋಷಣೆಯು ಎರಡೂ ಕಡೆ ಇದ್ದು, ಮೊದಲು ಹೆಚ್ಚಾಗಿದ್ದು ನಂತರದಲ್ಲಿ ಕಡಿಮೆ ಆಗಿರುವ ಸಮಾಜವನ್ನು ಕಾಣಬಹುದಾಗಿದೆ.

* * * * *

ಅಡಿ ಟಿಪ್ಪಣಿಗಳು

1. ಡಿ.ಎಸ್.ವೀರಯ್ಯ – ದಲಿತ ಚಿಂತನ, ಪುಟ. ಸಂ. 8
2. ಕೆ.ಭೈರಪ್ಪ – ಸಮಗ್ರ ಗ್ರಾಮೀಣ ಸಮಾಜ, ಪುಟ. ಸಂ. 298
3. ಡಿ.ಎಸ್. ವೀರಯ್ಯ – ದಲಿತ ಚಿಂತನ, ಪುಟ ಸಂ. 14
4. ಡಾ॥ ಸಮತಾ .ಬಿ. ದೇಶಮಾನೆ – ಸಮಾಜಶಾಸ್ತ್ರ ಮತ್ತು ಮಹಿಳೆ, ಪುಟ. ಸಂ. 2
5. ಕೆ.ಭೈರಪ್ಪ – ಸಮಗ್ರ ಗ್ರಾಮೀಣ ಸಮಾಜ, ಪುಟ. ಸಂ. 99
6. ಎಚ್ಚಾರೆಸ್ ಮತ್ತು ಎಚ್ಚಾರ್ಕೆ – ಭಾರತೀಯ ಸಮಾಜ ಅಧ್ಯಯನ, ಪುಟ ಸಂ. 89

ಅಧ್ಯಾಯ – ೪

ರಾಮಣ್ಣನವರ ಕಥೆಗಳ ಸ್ವರೂಪ

ಅಧ್ಯಾಯ – 4

ರಾಮಣ್ಣನವರ ಕಥೆಗಳ ಸ್ವರೂಪ

ಗ್ರಾಮೀಣ ಜಗತ್ತಿನ ಜನಪದರಿಂದ ಪ್ರೇರಣೆಯನ್ನು ಪಡೆದು ಬೆಸಗರಹಳ್ಳಿ ರಾಮಣ್ಣನವರು ತಮ್ಮ ಕಥೆಗಳನ್ನು ಬರೆದಿದ್ದಾರೆ ಇವರ ಪ್ರತಿಭೆಯು ದೇಶೀ ಮೂಲವಾಗಿದ್ದು, ಮಂಡ್ಯ, ಮೈಸೂರು, ಬೆಸಗರಹಳ್ಳಿಯ ಗ್ರಾಮ್ಯ ಪರಿಸರದ ಹಿನ್ನಲೆಯಲ್ಲಿ ವಿಶಿಷ್ಟ ಭಾಷೆ, ವಸ್ತುಗಳನ್ನು ಬಳಸಿ ತಮ್ಮ ಅನುಭವದ ಮೂಲಕ ರಾಮಣ್ಣನವರು ಕಥೆಗಳನ್ನು ರಚಿಸಿದ್ದಾರೆ. ಇವರು ಕಥೆ ಹೇಳುವುದನ್ನು ಅಥವಾ ಬರೆಯುವುದನ್ನು ಕೇವಲ ಹವ್ಯಾಸವನ್ನಾಗಿ ಮಾಡಿಕೊಳ್ಳದೆ ಜೀವನ ಶೋಧನೆಯ ಒಂದು ಮಾರ್ಗವನ್ನಾಗಿಸಿಕೊಂಡಿದ್ದಾರೆ. ರಾಮಣ್ಣನವರು ವಸ್ತುಗಳ ಬೆನ್ನಟ್ಟಿ ಹೋಗದೆ ತಾವು ಕಂಡು ಅನುಭವಿಸಿದ ಸಂಗತಿಗಳಿಗೇ ಕಥಾರೂಪ ನೀಡಿ ಕಥೆಗಳನ್ನು ರಚಿಸಿದ್ದಾರೆ.

ರಾಮಣ್ಣನವರ ಕಥೆಗಳ ಕೇಂದ್ರ ಬಿಂದು ಗ್ರಾಮೀಣ ಜಗತ್ತು ಈ ಗ್ರಾಮೀಣವು ಅವರಿಗೆ ಪರಕೀಯವಾಗಿರದೆ ಬಹಳ ಹತ್ತಿರದಿಂದ ನೋಡಿದ್ದುದರಿಂದ ಅಲ್ಲಿನ ಸಂವೇದನೆಯ ದೃಷ್ಟಿಯಿಂದ ತನ್ಮಯತೆಯು ಹೆಚ್ಚಾಗಿ ಒಂದು ಬಗೆಯ ನೈತಿಕ ಎಚ್ಚರ ಇಡೀ ಕಥಾ ಶರೀರದೊಳಗೆ ಹಚ್ಚಿಕೊಳ್ಳುತ್ತದೆ. ಇವರಿಗೆ ಕಥೆಯೆಂದರೆ ಕೇವಲ ಒಂದು ಪ್ರಸಂಗವಾಗಿರದೆ ಕೆಲವು ಘಟನೆಗಳಾಗಿರದೆ. ವ್ಯಕ್ತಿ ವಿಷಯವೂ ಸಹ ಆಗಿರದೆ ಅದೊಂದು ಸ್ಥಿತಿಯ ಪರಿಶೀಲನೆಯಾಗಿರುತ್ತದೆ ಆದ್ದುದರಿಂದ ರಾಮಣ್ಣನವರ ಕಥೆಗಳು ಮುಂದಕ್ಕೆ ಜಗ್ಗುವುದಕ್ಕಿಂತ ಆಚೀಚೆಗೆ ಹರಡಿಕೊಂಡಿರುವುದೇ ಹೆಚ್ಚಾಗಿರುವುದು ಕಂಡುಬರುತ್ತದೆ.

"ರಾಮಣ್ಣನವರ ವೃತ್ತಿ ಜೀವನ ಹಳ್ಳಿಗಾಡಿನ ಜನರೊಂದಿಗೇ ಇದ್ದುದರಿಂದ ಹಳ್ಳಿಗರ ಜೀವನ ವಿಧಾನ ಅವರ ಆಲೋಚನಾ ಕ್ರಮವನ್ನು ರೂಪಿಸುವುದರಲ್ಲಿ ಅವರು ಸೃಷ್ಟಿಸಿದ ಯಾವ ಪಾತ್ರವೂ ಪರಕೀಯವಾಗಿರದೆ ಬದುಕಿಗೆ ಹತ್ತಿರವಾಗಿದೆ ಬದುಕಿನ ವ್ಯಗ್ರತೆಯನ್ನು ಜೀವನದ ಒಟ್ಟು ಸಂದರ್ಭದಲ್ಲಿ ಆ ಪಾತ್ರಗಳನ್ನು ಗುರುತಿಸುವುದರಿಂದ ಸಮಷ್ಟಿಯ ಜೀವನ ಕ್ರಮದ ಸ್ಥಿತಿಯು ಒಂದು ಮುಖ್ಯ ಒತ್ತಾಯವಾಗಿ ಹಾಗೂ ಪ್ರಧಾನ ದಾರೆಯಾಗಿರುವುದು ರಾಮಣ್ಣನವರ ಕಥೆಗಳಲ್ಲಿ ಕಾಣಬಹುದು."[1] ಗ್ರಾಮೀಣ ಪ್ರದೇಶಗಳಲ್ಲಿ ಪಾರಂಪರಿಕವಾಗಿ ಬಂದಂತಹ ವ್ಯವಸಾಯ, ಪಶುಪಾಲನೆ, ಸಾಮಾನ್ಯ ಜನರ ಬದುಕು, ಅವರ ಸ್ಥಿತಿಗತಿ, ನೋವು, ನಲಿವು ರಾಮಣ್ಣನವರ ಕಥೆಗಳಲ್ಲಿ ಅನಾವರಣಗೊಳ್ಳುತ್ತವೆ. ಗ್ರಾಮೀಣ ಸಂಸ್ಕೃತಿಯ ದಟ್ಟವಾದ ಸಾದೃಶ್ಯಗಳೇ ಇವರ ಕಥೆಗಳ ಬಹುದೊಡ್ಡ ಆಸ್ತಿಯಾಗಿರುವುದು ತಿಳಿದುಬರುತ್ತದೆ.

ವಿಸ್ಮಯ, ಬೆರಗು ಮುಗ್ಧತೆಯನ್ನು ಮೈಗೂಡಿಸಿಕೊಂಡಂತಹ ಕಥೆಗಾರರಾದ ರಾಮಣ್ಣನವರ ಕಥೆಗಳಲ್ಲಿ ರೋಗಿ, ಹಣ, ಸ್ತ್ರೀ, ವೈದ್ಯ, ಮಕ್ಕಳು, ಸಾವು, ನೋವು, ದಯೆ, ಪ್ರಕೃತಿ, ಮರ–ಗಿಡ

ಮುಂತಾದ ವಿವರಗಳು ಒಂದು ಬಗೆಯ ವಿಶಿಷ್ಟ ರೂಪಕವಾಗಿವೆ. ಸುಪ್ತಕಾಮ ಜೀತಪದ್ಧತಿ, ಹಳ್ಳಿಗರ ಬಾಳಿನ ಗೋಳಿನ ವಿವರಗಳು, ದಲಿತರ ಜೀವನ ಕ್ರಮ, ಅವರ ಬದುಕಿನಲ್ಲಾಗುವ ಪರಿವರ್ತನೆ, ಸಮಾಜದ ದುಷ್ಟಶಕ್ತಿ ಜಮೀನ್ದಾರರ ಸ್ವಾರ್ಥ, ದಲಿತರ ಬಂಡಾಯ ಪ್ರವೃತ್ತಿ ಮುಂತಾದ ಹಳ್ಳಿಯ ಬದುಕಿನ ಜೀವನ ಜಂಜಾಟವು ರಾಮಣ್ಣನವರ ಕಥೆಗಳಲ್ಲಿ ಮೂಡಿಬಂದಿದೆ.

ಹಳ್ಳಿಗಾಡು ಜನರ ಕೋರ್ಟು ವ್ಯವಹಾರ, ವ್ಯಾಜ್ಯಗಳು, ಆಸ್ಪತ್ರೆಗಳ ಉದಾಸೀನತೆ, ಪೋಲೀಸ್ ವ್ಯವಸ್ಥೆ, ದಲಿತರ ಜೀವನ ಶೈಲಿ, ಸಮಾಜದಲ್ಲಿ ಅಲಕ್ಷ್ಯಕ್ಕೀಡಾದ ಜನಾಂಗದವರ ಬದುಕಿನ ವಿವಿಧ ಸ್ತರಗಳ ಸಾಂಸ್ಕೃತಿಕ ಶೋಷಣೆಯ ಸೂಕ್ಷ್ಮಗಳು, ಪಟ್ಟಭದ್ರರು ಹಾಗೂ ಅಧಿಕಾರಶಾಹಿಯವರ ನಡವಳಿಕೆ, ವ್ಯಕ್ತಿನಿಷ್ಟ ಪ್ರತಿಭಟನೆಯ ಇತಿಮಿತಿಗಳನ್ನೊಳಗೊಂಡ ಕಥೆಗಳಿದ್ದರೆ ರಾಮಣ್ಣನವರ ಇನ್ನುಳಿದ ಕಥೆಗಳು ಒಂದು ರೀತಿಯ ವಿಚಿತ್ರವಾದ, ಬದುಕಿನ ಬಗೆಗಿನ ಪಾಪಪ್ರಜ್ಞೆ, ಪ್ರಾಯಶ್ಚಿತ್ತತೆ, ಕೇಡು ಮುಂತಾದ ಅಂಶಗಳು ನೈತಿಕ ಶೋಧನೆಗೆ ಒಳಗಾಗಿರುವುದು ಕಂಡು ಬರುತ್ತದೆ.

ರಾಮಣ್ಣನವರು ಕಥೆಗಳನ್ನು ಓದುವಾಗ ಕೆಲವು ಪಾತ್ರಗಳು ಜೀವಂತವಾಗಿ ಮುಖಾಮುಖಿ ಯಾಗುವಂತೆ ಕಂಡುಬರುತ್ತವೆ. ಅವರ ಕಥೆಗಳಲ್ಲಿನ ಪಾತ್ರ ಚಿತ್ರಣಗಳು ಎಷ್ಟರ ಮಟ್ಟಿಗೆ ನೈಜತೆಯಿಂದ ಕೂಡಿರುತ್ತವೆಯೆಂದರೆ ಒಮ್ಮೊಮ್ಮೆ ಓದುಗರಿಗೆ ತಮ್ಮ ಕಣ್ಮುಂದೆಯೇ ಕಥಾ ಸನ್ನಿವೇಶ ನಡೆದಂತೆ ಭಾಸವಾಗುತ್ತದೆ. ಕಥೆಯಲ್ಲಿ ಬರುವ ಭಾವನೆಗಳಿಗೂ ಹಾಗೂ ನಿಜ ಜೀವನದಲ್ಲಿ ಬರುವ ಭಾವನೆಗಳಿಗೂ ಯಾವುದೇ ಬಗೆಯ ವ್ಯತ್ಯಾಸವಿಲ್ಲದ ಹಾಗೆ ಪರಸ್ಪರ ಸಂಬಂಧ ಇರುವಂತೆ ಭಾವನೆಗಳನ್ನು ಕುರಿತಾಗಿ ರಾಮಣ್ಣನವರು ತಮ್ಮ ಕಥೆಗಳನ್ನು ಅಭಿವ್ಯಕ್ತಗೊಳಿಸಿದ್ದಾರೆ. ಜೀವನವನ್ನು ಸೂಕ್ಷ್ಮವಾಗಿ ವಿಶ್ಲೇಷಿಸುವ ಪ್ರಬುದ್ಧತೆಯನ್ನು ಗಳಿಸಿಕೊಂಡ ಇವರು ತಮಗೆ ಪರಿಚಿತವಾದ ಗ್ರಾಮೀಣ ಜೀವನ ವಿನ್ಯಾಸದಲ್ಲಿ ಮನುಷ್ಯ ಸ್ವಭಾವದ ಹಲವು ಪದರಗಳನ್ನು, ಸಾಮಾಜಿಕ ಮೌಲ್ಯಗಳನ್ನು ಹುಡುಕಲು ಯತ್ನಿಸಿದ್ದಾರೆ. ಇಲ್ಲಿ ನಾವು ಗಮನಿಸಬಹುದಾದ ಮುಖ್ಯ ಸಂಗತಿಯೆಂದರೆ ರಾಮಣ್ಣನವರಿಗೆ ಗ್ರಾಮ ಪರಿಸರವು ಚಿರಪರಿಚಿತವಾಗಿದ್ದರೂ ಸಂವೇದನೆಯ ದೃಷ್ಟಿಯಿಂದ ಲೇಖಕರು ತಮ್ಮ ಪಾತ್ರಗಳಿಗಿಂತ ಎತ್ತರದ ಸ್ಥಾನದಲ್ಲಿ ಉಳಿಯುತ್ತಾರೆ. ಹೀಗಾಗಿ ತನ್ಮಯ ಭಾವವು ಹೆಚ್ಚಾಗಿ ಅವರ ಕಥೆಗಳು ನೈತಿಕತೆಯಿಂದ ಹಬ್ಬಿಕೊಂಡಿವೆ.

ಇವರ ಕಥೆಗಳು ಗ್ರಾಮೀಣ ಜೀವನವನ್ನು ಕಣ್ಣೆದುರಿಗೇ ಕಟ್ಟುವಂತೆ ಚಿತ್ರಿಸುತ್ತಾ ಘಟನೆ ಮತ್ತು ಪಾತ್ರಗಳು ಬೆಸೆದುಕೊಳ್ಳುತ್ತವೆ. ಪಾತ್ರಗಳೇ ಜೀವ ತುಂಬಿ ಮಾತಾಡುತ್ತವೆ. ರಾಮಣ್ಣ ಮೂಲತಃ ಸೈದ್ಧಾಂತಿಕ ನಿಲುವುಳ್ಳ ವಸ್ತುನಿಷ್ಠ ಕಥೆಗಾರರಾಗಿದ್ದಾರೆ. ಸಾಮಾಜಿಕ ಪರಿವರ್ತನೆಯನ್ನು ಕಲಾತ್ಮಕವಾಗಿ ಹಿಡಿದಿಡುತ್ತಾ, ದಬ್ಬಾಳಿಕೆಗೆ ಬೆಲೆ ಕೊಡದೆ ಮಾನವ ಮೌಲ್ಯಗಳಿಗೆ ಮರ್ಯಾದೆ

ನೀಡಿದ್ದಾರೆ. ಸನ್ನಿವೇಶ, ಪಾತ್ರ ರಚನೆ, ಮನೋವೃತ್ತಿ ಇತ್ಯಾದಿ ಅಂಶಗಳ ಬಗ್ಗೆ ಚಿಂತಿಸಿ ಬದುಕನ್ನು ಕಟ್ಟುತ್ತಾರೆ. ಮತ್ತು ಅದನ್ನು ಅರ್ಥವತ್ತಾಗಿಸುತ್ತಾರೆ. 1970 – 1980ರ ದಶಕಗಳಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳಾಗಿವೆ. ವಿಭಿನ್ನ ಅಭಿಪ್ರಾಯಗಳೂ, ಧೋರಣೆಗಳೂ, ಚಳುವಳಿಗಳು ಕನ್ನಡದಲ್ಲಿ ಚಲಾವಣೆಗಳಾಗಿವೆ. ಆದರೆ ರಾಮಣ್ಣನವರು ಯಾವುದೇ ಚಳುವಳಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳದೆ ತಮ್ಮ ಸುತ್ತಣ ಪರಿಸರವನ್ನು ತೆರೆದ ಮನಸ್ಸಿನಿಂದ ನೋಡುತ್ತಾ ಇನ್ನಿತರ ಬರಹಗಾರರಿಗಿಂತ ವಿಭಿನ್ನವಾದ ಜೀವನ ನೋಟವನ್ನು ಕಟ್ಟಿ ಕೊಟ್ಟಿದ್ದಾರೆ. ಇವರ ಕಥೆಗಳಲ್ಲಿ ಬಾಳಿಗೆ ಬೆಳಕು ನೀಡುವ ಚೈತನ್ಯವಿದೆ. ಇವರ ಕಥೆಗಾರಿಕೆಯಲ್ಲಿನ ಕೌಶಲ ಕಂಡುಬರುವುದು. ಇದು ಕಥೆಯೋ ಅಥವಾ ನಿಜವಾದ ಬದುಕೋ ಎಂಬ ಬೆರಗನ್ನು ಉಂಟುಮಾಡುವ ಕಲೆಗಾರಿಕೆಯಿಂದ ಶ್ರೀ ಸಾಮಾನ್ಯನ ಬದುಕಿನ ಚೆಲುವನ್ನು ಜೀವಂತಿಕೆಯನ್ನು ಚಿತ್ರಿಸುವುದರಿಂದ ವಸ್ತುಸ್ಥಿತಿ ಮತ್ತು ಸಾಂಕೇತಿಕತೆಗಳೆರಡನ್ನು ದುಡಿಸಿಕೊಳ್ಳುವ ಕಲೆಗಾರಿಕೆ ರಾಮಣ್ಣನವರಿಗೆ ಸಿದ್ಧಿಸಿದೆ ಎನ್ನಬಹುದು. "ಕನ್ನಡ ಕಾವ್ಯ ಕಥೆಗಳು ನವ್ಯದ ಪ್ರಭಾವಕ್ಕೆ ಪಕ್ಕಾಗಿದ್ದ ಕಾಲದಲ್ಲಿ ನಾನು ನನ್ನ ಬದುಕು ನೀಡಿದ ಅನುಭವಗಳನ್ನು ಕಥೆಗಳ ರೂಪದಲ್ಲಿ ಬರೆಯತೊಡಗಿದೆ. ನನಗೆ ಯಾವ ಹಣೆಪಟ್ಟಿಯನ್ನು ಹಚ್ಚಿಕೊಳ್ಳಬೇಕೆಂದಾಗಲಿ, ಕಥೆಯನ್ನು ಬಲವಂತಕ್ಕೆ ಬರೆಯಬೇಕೆಂಬುದಾಗಲೀ ಮನಸ್ಸು ಬಾರದೇ ಹೋದದ್ದು ಈಗ ನೆನಸಿಕೊಂಡರೆ ಆಶ್ಚರ್ಯವಾಗುತ್ತದೆ. ಕಥೆ ಬರೆಯಬೇಕೆಂದಾಗ ಕಥೆ ಬರೆದೆ ಕನ್ನಡದಲ್ಲಿ ಬರೆಯಲಾ ಗಟ್ಟಿಯಾದ ಸಾಹಿತ್ಯವನ್ನು ಯಾವ ಪೂರ್ವಗ್ರಹಕ್ಕೂ ತುತ್ತಾಗದೆ ಓದಿದೆ. ಕೆಲವನ್ನು ಅಭ್ಯಾಸ ಮಾಡಿದೆ ಬೇಕಾದ್ದನ್ನು ಒಪ್ಪಿಕೊಂಡೆ, ಬೇಡವಾದ್ದನ್ನು ದೂರ ತಳ್ಳಿದೆ."[2] ಎಂದು ಕಥೆಗಾರರೇ ಹೇಳಿಕೊಂಡಿದ್ದಾರೆ. ನವ್ಯ ಸಾಹಿತ್ಯದ ಧೋರಣೆಗಳು ಪ್ರಬಲವಾಗಿದ್ದ ಕಾಲದಲ್ಲಿ ಕಥೆ ಬರೆಯಲು ಪ್ರಾರಂಭಿಸಿದ ರಾಮಣ್ಣನವರು ನವ್ಯಕ್ಷೇತ್ರದ ದಿಗಂತಗಳನ್ನು ಮತ್ತಷ್ಟು ಹಿಗ್ಗಲಿಸುವಲ್ಲಿ ವಿಸ್ತರಿಸುವಲ್ಲಿ ಮುಂದಾದರು. ರಾಮಣ್ಣನವರು ಅನುಭವದ ಮೇಲೆ ಸಾಧಿಸಿರುವ ಹಿಡಿತ ಮತ್ತು ರೋಗಗ್ರಸ್ಥ ಹಳ್ಳಿಗಳ ಜನರ ಬದುಕಿನ ನೋವುಗಳನ್ನು ಭಾಷೆಯಲ್ಲಿ ಸ್ಫೋಟಗೊಳಿಸುವ ಕಲೆ ಅದ್ವಿತೀಯವಾಗಿದೆ. ಕಥೆಯ ವಿವಿಧ ಘಟಕಗಳನ್ನು ಒಟ್ಟು ಆಶಯಕ್ಕಾಗಿ ದುಡಿಸಿಕೊಳ್ಳುವ ಕಲೆ ಇವರಿಗೆ ಅಂತರ್ಗತವಾಗಿದೆ. ಗ್ರಾಮೀಣ ಬದುಕಿನ ವಿಪುಲವಾದ ಅನುಭವ ಸಾಮಗ್ರಿಯಿದೆ. ವಾಚಳಿ ಬಿಟ್ಟು ಬಳಸುವ ಭಾಷೆಗೆ ಮಣ್ಣಿನ ಗುಣ ಇದೆ. ಜೀವನವನ್ನು ನೇರವಾಗಿ ನೋಡುವ ಎದೆಗಾರಿಕೆಯಿದೆ.

ಬೆಸಗರಹಳ್ಳಿ ರಾಮಣ್ಣನವರ ಭಾಷಾ ಬಳಕೆಯು ಸುಲಭ ಹಾಗೂ ಸರಳತೆಯಿಂದ ಕೂಡಿದುದಾಗಿದೆ. ಅವರ ಹೆಚ್ಚಿನ ಕಥೆಗಳು ಗ್ರಾಮೀಣ ಸೊಗಡನ್ನು ಹೊಂದಿರುವುದರಿಂದ ಅವರಿಗೆ ಪರಿಚಿತವಾದ ಗ್ರಾಮ್ಯ ಭಾಷೆಯನ್ನು ಬಳಸಿಕೊಂಡಿದ್ದಾರೆ. ಅಲ್ಲಿನ ಜನರು ಬಳಸುವ ಪ್ರತಿನಿತ್ಯದ ಆಡು ಭಾಷೆಯನ್ನು ಅತ್ಯಂತ ಮನೋಜ್ಞವಾಗಿ ಎಲ್ಲರಿಗೂ ಅರ್ಥವಾಗುವಂತೆ

ಬಳಸಿಕೊಂಡಿದ್ದಾರೆ. 'ಕಡ್ಡಿಯನ್ನು ಮುಂದರೆ ಹೇಗೆ ಎರಡು ತುಂಡುಗಳಾಗುವುವೋ ಅದೇ ರೀತಿ ರಾಮಣ್ಣನವರು ಸರಳವಾಗಿ, ನೇರವಾಗಿ ಕಥೆಗಳನ್ನು ವಿವರಿಸುವರು. ವಿವರಣೆಯು ಎಂಥವರಿಗೂ ತಿಳಿಯುವಂತಿರುತ್ತದೆ. ಹಾಗೂ ಅವರ ವಾಕ್ಯಗಳ ರಚನೆ ಪದಗಳ ಜೋಡಣೆ, ಬರವಣಿಗೆ ಶೈಲಿ ಎಲ್ಲರ ಮನ ಸೆಳೆಯುವಂತಿದೆ.

"ಅದೇನ್ಲ ಚಿಕ್ಕಣ್ಮ, ಗೌಡ ಸತ್ತೋದೊಳಂಗೆ ತಲೇಗ ಕೊಟ್ಟು ಬಿಟ್ಟು ಕುಂತಿದ್ದಲ್ಲ?"

"ಏನೊಯಿಲ್ಲ ಕನೋ ಅದೇ ಮಾರ್ಮಮಿ ಹಬ್ಬ ಬತ್ತಲ್ಲ ಇನ್ನೂ ಐದು ದಿನಕ್ಕೆ!"

"ಅದ್ಕೆ ಕುಂತ್ಕಂಡು ಅಳ್ತಿದ್ದ ಗದ್ದೆ ಅಂಚೇಲಿ!"

"ನಿನಗೇನಪ್ಪ? ಹಬ್ಬ ಸುಮ್ಮನೇ ಆಗೋದದೆ? ದುಡ್ಡು ಬೇಡವೇನೋ!"

ಈ ಮೇಲಿನ ಸಂಭಾಷಣೆಯನ್ನು ನೋಡಿದಾಗ ರಾಮಣ್ಣನವರು ಭಾಷೆಯನ್ನು ಬಳಸಿರುವ ಬಗೆ ತಿಳಿದುಬರುತ್ತದೆ.

ರಾಮಣ್ಣನವರ ಆರಂಭದ ಕಥೆಗಳು ನಿರೂಪಕನ ಭಾಷೆ ಮತ್ತು ಪಾತ್ರಗಳ ಸಂಭಾಷಣೆಯ ಭಾಷೆಯಲ್ಲಿ ವ್ಯತ್ಯಾಸವಿಲ್ಲದೆ ಒಂದೇ ರೀತಿಯಲ್ಲಿರುವಂತೆ ತನ್ಮಯತೆ ಸಾಧಿಸಿವೆ. ನಂತರ ಕಥೆಗಳ ಧಾರೆ ಬೇರೆ ದಿಕ್ಕನ್ನು ಹಿಡಿದು ನಿರೂಪಕನ ಭಾಷೆ ಮತ್ತು ಪಾತ್ರ ಚಿತ್ರಣದ ಭಾಷೆಗಳು ಬೇರೆ ಬೇರೆಯಾಗಿರುವುದು ಕಂಡುಬರುತ್ತದೆ. ಇವರು ಗ್ರಾಮೀಣ ಪ್ರದೇಶವನ್ನು ಕೇಂದ್ರವಾಗಿಟ್ಟುಕೊಂಡಿರುವುದರಿಂದ ಗ್ರಾಮ್ಯ ಭಾಷೆಯನ್ನೇ ತಮ್ಮ ಕಥೆಗಳಲ್ಲಿ ಬಳಸಿರುವರಾದರೂ ಭಾಷೆಯು ತುಸು ಶಿಷ್ಟತೆಯಿಂದ ಕೂಡಿರುತ್ತದೆ.

ಇವರು ಜನಪದ ಭಾಷೆಯನ್ನು ತಮ್ಮ ಕಥೆಗಳಲ್ಲಿ ಬಳಸಿ ಅದನ್ನು ಹೊಸ ಸಂವೇದನೆಗೆ ಒಗ್ಗಿಸುವುದರ ಮೂಲಕ ಹೊಸ ಆಯಾಮವನ್ನು ತಂದುಕೊಟ್ಟಿದ್ದಾರೆ ಎನ್ನಬಹುದು. ತಮ್ಮ ಕಥೆಗಳಲ್ಲಿ ಗಾದೆ, ಒಗಟು, ನುಡಿಗಟ್ಟುಗಳನ್ನು ಹೇರಳವಾಗಿ ಬಳಸಿದ್ದಾರೆ. ನಿಸರ್ಗ ಇವರ ಕಥೆಗಳಲ್ಲಿ ಕೇವಲ ಪರಿಸರವಾಗಿ ಬರೆದ ವ್ಯಕ್ತಿ ಪ್ರಜ್ಞೆಯಲ್ಲಿ ಮಿಳಿತವಾಗಿರುವ ಒಂದು ಪಾತ್ರವಾಗಿ ಕಾಣಿಸುತ್ತದೆ. ಭಾಷೆಯನ್ನು ದುಡಿಸಿಕೊಳ್ಳುವ ಕ್ರಮ, ನಿರೂಪಣಾ ವಿಧಾನ, ಯೋಚನಾ ರೀತಿ, ಹದವರಿತ ಭಾಷಾ ಪ್ರಯೋಗ ಸಮರ್ಥವಾಗಿ ಬಳಕೆಯಾಗಿದೆ ಎನ್ನಬಹುದು. "ಮಾನವನ ಮನಸ್ಸಿನ ಸೂಕ್ಷ್ಮಾತಿ ಸೂಕ್ಷ್ಮ ವಿಶ್ಲೇಷಣೆ, ನೂತನ ಮೌಲ್ಯಗಳ ಶೋಧನೆ ಭಾಷೆಯ ಬಳಕೆಯಲ್ಲಿ ಹೊಸದಾದ ಪ್ರಜ್ಞೆ ಈ ಲೇಖಕರ ಸಾಧನೆಯಾಗಿದ್ದು. ರಚನೆಯಲ್ಲಿ ಬಿಗಿ, ಪರಿಣಾಮದಲ್ಲಿ ಉತ್ಕಟತೆ ಹಾಗೂ ಬರವಣಿಗೆಯಲ್ಲಿ ಮೊನಚು ರಾಮಣ್ಣನವರ ಕಲೆಗಾರಿಕೆಯ ಮಹತ್ವದ ಲಕ್ಷಣಗಳಾಗಿವೆ."[1] ಎಂದಿರುವ ಹಾ.ಮಾ.ನಾಯಕರ ಮಾತುಗಳು ಅರ್ಥಪೂರ್ಣವಾಗಿವೆ.

'ಕೊಟ್ರೆ ಕೊಂಯಕೆ ಅಂಥ ಮೊಟ್ಟೆ ಇಕ್ಕೋಬೇಕು', 'ಕಸ್ರ್ ಕಡ್ಕೊಬೇಕು', 'ಕಡ್ದು ದಬ್ಬಾಕ್ತೀನಿ', 'ಗೆಡ್ಡೆ ಕಿತ್ತೋಯ್ತು', 'ನಾನು ಕೊಟ್ರೆ ನೀನು ಕೊಡ್ತಿ', 'ನಿನ್ನ ನಾಲಗೆ ಸೇದೋಗ', 'ತೊಲೆ ತುಂಡಿದ್ದಂಗವಳ್', 'ನಿನ್ನ ಕಣ್ಣಿಂಗೋಗ', 'ಮರಕಟ್ಟೆ ನೇಯ್ಸಿ' – ಮೊದಲಾದ ಪ್ರಯೋಗಗಳೂ ಆಡುಮಾತಿನ ಗತ್ತನ್ನು, ಭಾಷೆಯ ಕಸುವನ್ನು ವಿಶೇಷವಾದ ಪ್ರಾದೇಶಿಕ ಬಣ್ಣವನ್ನೂ ಎತ್ತಿ ತೋರಿಸುತ್ತವೆ.

ಮಂಡ್ಯ ಜಿಲ್ಲೆಯ ಅದರಲ್ಲಿಯೂ ಅಲ್ಲಿಯ ಒಕ್ಕಲಿಗರ ಕನ್ನಡ ಭಾಷೆಯ ಸೊಗಡು ರಾಮಣ್ಣನವರ ಕಥೆಗಳಲ್ಲಿ ಚೆನ್ನಾಗಿ ಕಂಡು ಬರುತ್ತದೆ. ರಾಮಣ್ಣನವರ ಕಥೆಗಳಲ್ಲಿ ಕಂಡುಬರುವ 'ದೀವಳಿಗೇಲಿ ದನ ಕೆಣಕಬೇಡ', 'ಸುಗ್ಗೀಲೆ ಹೊಲೀನ ಕೆಣಕಬೇಡ', 'ಆಳೋನಿಗಲ್ವೆ ಹೆಣ್ಣು, ಉಳೋನಿಗಲ್ವೇ ಭೂಮಿ, 'ಹಿರಿಯಣ್ಣನ ಚಾಲು ಮನೆ ಮಕ್ಕಳಿಗೆಲ್ಲಾ', 'ಕೊತ್ತಿ ಕಾಶೀಗೋದ್ರು ಇಲಿ ತಿನ್ನ ಬುದ್ಧಿ ಬುಟ್ಟದೆ', 'ಬಡವನ ಕೋಪ ದವಡೆಗೆ ಮೂಲ', 'ಎಮ್ಮೆಗೆ ಈಯೋ ದುಃಖ ಆದ್ರೆ ಕೋಣನಿಗೆ ಕೊಸಿಯೋ ದುಃಖ', 'ಅಗಸ ಹೊಸ್ತ್ರೇಲಿ ಗೋಣಿ ಚೀಲವ ಎತ್ತಿ ಎತ್ತಿ ಒಗೆದಂತೆ', ಮಲ ಎಳ್ಸಿ ಹೇಲೂಕ್ ಕುಂತ್ಕಂಡಂಗೆ', 'ಸೀಗಡಿಗೆ ಸಿರೆ ಬಂದು ಉಗನಿ ಅಂಟಿನ ಮೇಲೆ ಕೂತ್ಕಂತಂತೆ', 'ಕುಂಡು ಕೊಕ್ಕರೆ ಬಂದು ಕುಟಿಕೋತಂತೆ', 'ತಾಯಿಯಂತೆ ಮಗಳು ನೂಲಿನಂತೆ ಸೀರೆ' – ಮುಂತಾಗಿ ಅನೇಕ ಗಾದೆ ಮಾತಿನ ದಾಟಿಗಳು ಗ್ರಾಮ ಜೀವನದ ಸೊಗಡನ್ನು, ಅಲ್ಲಿಯ ತೇಜಸ್ಸನ್ನೂ ಭಾಷಾ ಬಳಕೆಯ ಶಕ್ತಿಯನ್ನು ದಾಖಲಿಸುತ್ತವೆ.

ಜನರ ಬದುಕನ್ನು ಹತ್ತಿರದಿಂದಲೇ ಹೃದಯದಿಂದ ನೋಡಿ ಬರೆಯುವ ಹಂಬಲವುಳ್ಳ ಕಥೆಗಾರರಾದ ರಾಮಣ್ಣನವರು ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಹೊಸ ಬದಲಾವಣೆಯನ್ನು ಬಯಸುವ ಹೊಸ ಜೀವನ ದೃಷ್ಟಿಯನ್ನು ಬಯಸುವ ಕಥೆಗಳನ್ನು ಹೊರ ತಂದಿದ್ದಾರೆ. ಸ್ವಾತಂತ್ರೋತ್ತರ ಭಾರತದ ಗ್ರಾಮೀಣ ಬದುಕಿನ ಹತಾಶೆಯ ಸ್ಥಿತಿಯನ್ನು ಅಧಿಕೃತವಾಗಿ ಚಿತ್ರಿಸುವಲ್ಲಿ ಮತ್ತು ಮಾನವೀಯ ಮೌಲ್ಯಗಳನ್ನು ನೆಲೆಗೊಳಿಸುವಲ್ಲಿ ರಾಮಣ್ಣನವರ ಕಥೆಗಳು ಸೃಷ್ಟಿಶೀಲವಾಗಿವೆ. "ಇವರ ಕಥೆಗಳ ವಸ್ತು ನಿಸರ್ಗಕ್ಕೆ ಪರಕೀಯವಾಗದೆ ಉಳಿದ ಒಕ್ಕಲು ಮಕ್ಕಳ ನಿತ್ಯ ಜೀವನದ ಸುಖದುಃಖ, ಸಣ್ಣತನ, ಅಸೂಯೆ, ಔದಾರ್ಯ, ಇತ್ಯಾಧಿ; ಇವು ದಟ್ಟವಾದ ಅನುಭವದಿಂದ ಹುಟ್ಟಿದ ಕಥೆಗಳಾದ್ದರಿಂದ ಭಾವಾತಿರೇಕಕ್ಕಾಗಲೀ, ಸುಳ್ಳು ಆದರ್ಶಗಳಾಗಲೀ ಇವುಗಳಲ್ಲಿ ಎಡೆಯಲ್ಲಿ ನಿಸರ್ಗ ಇವರ ಕಥೆಗಳಲ್ಲಿ ಬರಿಯ ಪರಿಸರವಲ್ಲ; ನಿತ್ಯದ ದುಡಿಮೆಯಲ್ಲಿ ಭಾಗಿಯಾಗಿ ವ್ಯಕ್ತಿಪ್ರಜ್ಞೆಯಲ್ಲಿ ಮಿಳಿತವಾಗಿರುವ ಒಂದು ಪಾತ್ರ."[4] ಹಳ್ಳಿಯ ಒಕ್ಕಲು ಮಕ್ಕಳ ಮಣ್ಣಿನ ವಾಸನೆಯ ಭಾಷೆಯ ನುಡಿಗಟ್ಟನ್ನು, ಗ್ರಾಮೀಣ ಜನರ ಬದುಕಿನ ಸೋವು ನಲಿವಿನ, ನಂಬಿಕೆಯ ಸಾಧ್ಯತೆಗಳನ್ನು ಕಥೆಗಾರರು ಇಲ್ಲಿ ಅನನ್ಯ ರೀತಿಯಲ್ಲಿ

ಬಳಸಿಕೊಂಡಿದ್ದಾರೆ. ಆದ್ದುದರಿಂದಲೇ ಬೆಸಗರಹಳ್ಳಿ ರಾಮಣ್ಣನವರು ನವ್ಯ ಕಥೆಗಾರರಲ್ಲಿ ಪ್ರಮುಖರಾಗಿ ಉಳಿಯುವರು.

ಸಾಮಾಜಿಕ ಶೋಷಣೆಯ ವಿವಿಧ ಮಜಲುಗಳನ್ನು ರಾಮಣ್ಣ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ದಲಿತವರ್ಗದ ಬಗೆಗೆ ಇರುವ ಕಾಳಜಿ, ದಲಿತರ ಉದ್ದಾರ ಮತ್ತು ಪ್ರಗತಿಪರ ದೃಷ್ಟಿಕೋನ ವ್ಯಕ್ತವಾಗುತ್ತವೆ. ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯ, ಅತ್ಯಾಚಾರ, ದಲಿತರ ಮೇಲಿನ ದೌರ್ಜನ್ಯ, ಅವರನ್ನು ಅತ್ಯಂತ ತುಚ್ಛವಾಗಿ ನಡೆಸಿಕೊಳ್ಳುವುದು ಇವುಗಳೆಲ್ಲ ಶೋಷಣೆಯ ಪರಮಾವಧಿಯಾಗಿ ಕಂಡು ಬಂದು ಜೀತ ಪದ್ಧತಿ, ಜಾತಿ ವ್ಯವಸ್ಥೆ, ಕೌರ್ಯ, ಅನೈತಿಕ ಸಂಬಂಧಗಳು, ಪ್ರತಿರೋಧ, ಸಂಘರ್ಷ, ಅಸಹಜತೆ ಮುಂತಾದವುಗಳು ರಾಮಣ್ಣನವರ ಕಥೆಗಳಲ್ಲಿ ಬಿತ್ತಿಯಾಗಿವೆ ಈ ಕಥಾ ಬಿತ್ತಿಗಳ ಮೂಲಕ ಮಾನವೀಯ ಸಂಬಂಧಗಳನ್ನು ಅನ್ವೇಷಿಸುತ್ತ ಗ್ರಾಮೀಣ ಸಂಸ್ಕೃತಿಯ ದಟ್ಟವಾದ ಸಾದೃಶ್ಯ ಚಿತ್ರಗಳು ಇವರ ಕಥಾಸಾಹಿತ್ಯದ ದೊಡ್ಡ ಸಾಮಗ್ರಿಯಾಗಿವೆ.

ರಾಮಣ್ಣನವರ ಧೋರಣೆಗಳನ್ನು ಅವರ ಕಥೆಗಳಲ್ಲೇ ಕಾಣಬಹುದಾಗಿದೆ. ಶೋಷಣೆಯ ವಿರುದ್ಧದ ಧ್ವನಿ ಒಂದಲ್ಲ ಒಂದು ರೂಪದಲ್ಲಿ ಕಥೆಗಳಲ್ಲಿ ಮೂಡಿಬಂದಿವೆ. ಕೆಳವರ್ಗದವರನ್ನು ಶೋಷಿಸುವ ಮೇಲ್ವರ್ಗದವರ ವಿರುದ್ಧ ಅಪಾರ ಸಿಟ್ಟಿರುವುದು ಗಮನಾರ್ಹವಾಗಿದೆ. ಸಿಟ್ಟು, ಪ್ರತಿರೋಧ, ಅಸಹಜತೆ ಇವುಗಳನ್ನು ಕಥೆಯ ಆಂತರ್ಯದಲ್ಲಿ ಪ್ರಕಟಿಸಿದ್ದಾರೆ. ಮಾನವೀಯ ಮೌಲ್ಯಗಳು ಇವರ ಕಥೆಗಳಲ್ಲಿ ಪ್ರಧಾನವಾಗಿವೆ. ಸಾಮಾಜಿಕ ಶೋಷಣೆಯ ವಿವಿಧ ಮಜಲುಗಳನ್ನು ಚಿತ್ರಿಸುವಲ್ಲಿ ರಾಮಣ್ಣನವರು ಸಫಲರಾಗಿದ್ದಾರೆ. ದಲಿತರ ಉದ್ದಾರ ಪ್ರಗತಿಪರವಾದ ದೃಷ್ಟಿಕೋನ ಬಡಜನತೆಯ ಬಗೆಗಿನ ಅನುಕಂಪ ಸಹಾನುಭೂತಿ ಇವುಗಳೆಲ್ಲ ರಾಮಣ್ಣನವರಲ್ಲಿ ಕಂಡುಬರುವ ಅಂಶಗಳಾಗಿವೆ. ಸರಳವಾಗಿ ಕಥೆ ಹೇಳುತ್ತಲೇ ಗ್ರಾಮೀಣ ಜೀವನದ ಕೆಲವು ಮೂಲಭೂತ ಸತ್ಯಗಳನ್ನು ಧ್ವನಿಸುವ ಹಾಗೂ ಅವುಗಳ ಬಗ್ಗೆ ರಾಮಣ್ಣನವರು ತಾಳುವ ನಿಲುವುಗಳನ್ನು ಅವರ ಕಥಾಗುಚ್ಛದಲ್ಲೇ ಕಾಣಬಹುದು.

ಗ್ರಾಮೀಣ ಬದುಕಿನ ಹಿನ್ನೆಲೆಯಲ್ಲಿ ಮನುಷ್ಯನ ಮನಸ್ಸಿನ ಹಲವು ಚಿತ್ರಗಳನ್ನು ನಮ್ಮ ಮುಂದಿರುಸುವಾಗ ರಾಮಣ್ಣನವರ ಅಂತಃಕರಣವನ್ನು, ಔದಾರ್ಯವನ್ನು ಯಾವತ್ತೂ ಮರೆಯುವಂತಿಲ್ಲ ಹೀಗಾಗಿ ಅವರು ರಾಗ-ದ್ವೇಷಗಳ ಬಗ್ಗೆ ಬರೆಯುವಾಗಲೂ ಇವುಗಳನ್ನು ಮೀರಲು ಸಾಧ್ಯವಿದೆ, ಸಾಧ್ಯವಿರಬೇಕು ಎಂಬ ನೆಲೆಯಲ್ಲೇ ತಮ್ಮ ಬರವಣಿಗೆಯನ್ನು ಬಳಸಿದ್ದಾರೆ. ಇದರರ್ಥ ಕೆಡುಕಿನ ಬಗ್ಗೆ ರಾಮಣ್ಣ ತಲೆ ಕೆಡೆಸಿಕೊಳ್ಳುವುದಿಲ್ಲ ಅಥವಾ ಕೇಡನ್ನು ಸರಳೀಕರಿಸುತ್ತಾರೆ. ಎಂದಲ್ಲ. ಒಳಿತಿನ ಭದ್ರ ಕಲ್ಪನೆಯ ಹಿನ್ನಲೆಯಲ್ಲಿಯೇ ಕೇಡು ಚಿತ್ರಿತವಾಗುವುದರಿಂದ

ರಾಮಣ್ಣನವರ ಜೀವನ ದೃಷ್ಟಿಯು ಒಂದು ಬಗೆಯ ಇತ್ಯಾತ್ಮಕ ಭರವಸೆಯ ಅಂಶ ಅಂತರ್ಗತವಾಗಿಬಿಟ್ಟಿದೆ. ಹಾಗಾಗಿ ಅವರು ಕೆಡುಕನ್ನು ಸಿರಿತನದಿಂದ ನೋಡದೆ ವಿಷಾದದಿಂದ ನೋಡುತ್ತಾರೆ. ಭೀತಿಯಿಂದ ಪ್ರತಿಕ್ರಿಯಿಸದೆ ರೋಷದಿಂದ ಪ್ರತಿಕ್ರಿಯಿಸುತ್ತಾರೆ. ಹೀಗಾಗಿ ಲೇಖಕ ತೋರಿಸುತ್ತಿರುವ ಲೋಕ ಮತ್ತು ಲೇಖಕನ ದೃಷ್ಟಿ ಇವುಗಳು ಓದುಗರಿಗೆ ಏಕತ್ರ ಚಿತ್ರವನ್ನು ನೀಡುತ್ತವೆ.

ರಾಮಣ್ಣನವರು ತಮ್ಮ ಕಥೆಗಳ ಭಾವ ಜಗತ್ತಿಗೆ ನಿಕಟರಾಗಿದ್ದು ಸದಾ ಜಾಗೃತವಾಗಿ ಉಳಿದುಕೊಂಡಿರುವ ನೈತಿಕ ನಿಷ್ಠುರತೆಯಿಂದಾಗಿ ಪರ–ವಿರೋಧಗಳ ಸರಳ ನೆಲೆಗಳನ್ನು ಮೀರಿ ತುಂಬ ಗಾಢವಾದ ಮಾನವೀಯ ದೃಷ್ಟಿಕೋನವನ್ನು ಬೆಳೆಸಿಕೊಳ್ಳಲು ಸಾಧ್ಯವಾಗಿದೆ. ಹೀಗಾಗಿ ರಾಮಣ್ಣನವರ ಕಳಕಳಿ ಅಳುಬುರುಕುತನವಾಗಿರದೆ ವಿಷಾದವಾಗುತ್ತದೆ, ಮೈಪರಚುಕೊಳ್ಳುವಿಕೆ ನೈತಿಕ ಸಿಟ್ಟಾಗುತ್ತದೆ. ಬಂಡಾಯವೆಂಬುದು ಕೇವಲ ವಿಗ್ರಹಭಂಜಕ ಪ್ರವೃತ್ತಿಯಾಗದೆ ವಿಶಾಲ ಒಳನೋಟವನ್ನು ಪಡೆದುಕೊಳ್ಳುತ್ತದೆ.

ರಾಮಣ್ಣನವರ ಕಥನಕಲೆ ಸ್ವಷ್ಟ ಮತ್ತು ನೇರ, ಇವರಲ್ಲಿ ಹೊಸತನದ ಛಲವಿಲ್ಲ, ತಂತ್ರ ಚಾಪಲ್ಯವಿಲ್ಲ. ನರಳುವ ತಂತ್ರಗಳಾಗಲೀ, ಇಕ್ಕಟಿನ ನಿರ್ವಹಣಾ ಅಭಿವ್ಯಕ್ತಿಯ ಶೈಲಿಯಾಗಲೀ ಇವರಲ್ಲಿ ಕಂಡುಬರುವುದಿಲ್ಲ. ಕಥೆಯನ್ನು ಅವರೇ ನಿರೂಪಿಸುತ್ತಾರೆ. ಕೆಲವೊಮ್ಮೆ 'ಬೇಲ', 'ಹಾವಿಲ್ಲದ ಹುತ್ತ', 'ಗಂಗಾ', 'ಮಾನಭಂಗ' ಮುಂತಾದ ಕಥೆಗಳಲ್ಲಿ ತಮ್ಮ ಪಾತ್ರಗಳನ್ನು ಸೇರಿಸಿಕೊಳ್ಳುತ್ತಾರೆ. ಕಥೆಗಾರನೇ ಒಂದು ಪಾತ್ರವಾಗಿ ವ್ಯಕ್ತಿ ಕೇಂದ್ರಿತ ಪ್ರಜ್ಞೆಯಾಗಿ ಸಾಮಾಜಿಕ ಕೇಡನ್ನು ದಾಖಲು ಮಾಡುತ್ತಾ ಅದಕ್ಕೆ ಕಾರಣವಾದ ಪರಿಹಾರಗಳನ್ನು ಅದೇ ಸಮಾಜದಲ್ಲಿ, ರಾಜಕಾರಣದಲ್ಲಿ ಹುಡುಕುತ್ತಿರುವುದು ಕಂಡುಬರುತ್ತದೆ. ನೆನಪಿನ ಬೀಜಗಳನ್ನು ಬಿತ್ತಿ ಅವರು ಕಥೆಯನ್ನು ಬೆಳೆಸಬಲ್ಲರು. ಅವರೇ ಒಂದು ಕಡೆ ಹೇಳಿಕೊಂಡಂತೆ ಭೂತಕಾಲದ ದಾಳಿಂಬೆಯನ್ನು ವರ್ತಮಾನದ ಮುಷ್ಟಿಯಲ್ಲಿ ಜಜ್ಜಿದಾಗ ನೆನಪಿನ ಬೀಜಗಳು ದೃಷ್ಟಿಯ ಮುಂದೆ ಚೆಲ್ಲಿದವು ಎನ್ನುವ ಮಾತು ಅವರ ಅನುಭವದ ಮೂಸೆಯಿಂದ ಹೊರಹೊಮ್ಮುವ ಕಥನ ಕಲೆಯ ಜೀವಂತಿಕೆಯನ್ನು ದಾಖಲಿಸುತ್ತದೆ.

ರಾಮಣ್ಣನವರ ಬರವಣಿಗೆ ಬದುಕನ್ನು ಪ್ರೀತಿಸುವ ಬದಲಾವಣೆಯನ್ನು ಬಯಸುವ ಮನಸ್ಸುಗಳಿಗೆ ನಿರಾಶೆಯನ್ನುಂಟು ಮಾಡುವುದಿಲ್ಲ. ಮೇಲ್ಮಟ್ಟದ ಕಥೆಗಾರರಾದ ರಾಮಣ್ಣನವರಲ್ಲಿ ಹುದುಗಿರುವ ಕಲಾಪ್ರಜ್ಞೆ, ಕಥನಕಲೆ, ಗ್ರಾಮ್ಯ ಭಾಷೆಯ ವೈವಿಧ್ಯತೆ ಅಸಾಧಾರಣವಾದುದು. ಆದ್ದರಿಂದಲೇ ರಾಮಣ್ಣ ಕನ್ನಡ ಸಣ್ಣಕಥಾಕ್ಷೇತ್ರದಲ್ಲಿ ಉತ್ತಮ ಕಥೆಗಾರರ ಸ್ಥಾನವನ್ನು ಉಳಿಸಿಕೊಂಡಿದ್ದಾರೆ.

ಒಟ್ಟಾರೆ ಬೆಸಗರಹಳ್ಳಿ ರಾಮಣ್ಣನವರ ಕಥೆಗಳು ಗ್ರಾಮೀಣ ಪರಿಸರದಲ್ಲಿ ಹುಟ್ಟಿ, ವಸ್ತು, ಭಾಷೆಯಲ್ಲಿ ಗ್ರಾಮೀಣ ಸೊಗಡನ್ನು ಹೊಂದಿ ಉನ್ನತ ಮಟ್ಟದಿಂದ ಕೊಡಿವೆ. ಇವರು ಹಲವಾರು ದಶಕಗಳ ಹಳ್ಳಿಯ ಬದುಕಿನ ವೈದೃಶ್ಯಕ್ಕಿಂತ ಮಿಗಿಲಾಗಿ ಸಾದೃಶ್ಯ ಹಾಗೂ ಸಾಧ್ಯತೆಗಳನ್ನು ತಮ್ಮ ಕಥೆಗಳಲ್ಲಿ ಅನನ್ಯವಾಗಿ ದುಡಿಸಿಕೊಂಡಿದ್ದಾರೆ.

* * * * *

ಅಡಿ ಟಿಪ್ಪಣಿಗಳು

1. ಕೆ.ಎಸ್. ಭಗವಾನ್ – ಕನ್ನಂಬಾಡಿ ಮುನ್ನಡಿ, ಪುಟ. ಸಂ. 22
2. ಬೆಸಗರಹಳ್ಳಿ ರಾಮಣ್ಣ – ಕನ್ನಂಬಾಡಿ: ಬಿಸಿಲು ಬೆಳದಿಂಗಳ ನಡುವೆ, ಪುಟ. ಸಂ. 11
3. ಯು. ಆರ್. ಅನಂತಮೂರ್ತಿ – 'ನೆಲದ ಒಡಲು'ವಿನ ಮುನ್ನುಡಿ, ಪುಟ. ಸಂ. 4
4. ಡಾ॥ ಕರೀಗೌಡ ಬೀಚನಹಳ್ಳಿ – ವ್ಯಷ್ಟಿ ಮತ್ತು ಸಮಷ್ಟಿ, ಪುಟ. ಸಂ. 85

ಅಧ್ಯಾಯ – ೫

ಶೋಷಣೆಯ ವಿವಿಧ ನೆಲೆಗಳ ವರ್ಗೀಕರಣ ಮತ್ತು ಅವುಗಳ ಚಿತ್ರೀಕರಣ

೧) ಜಾತಿ–ಮತ ಆಧಾರಿತ ಶೋಷಣೆಯ ಕಥೆಗಳು

೨) ಶ್ರೀಮಂತ–ಬಡವ ಆಧಾರಿತ ಶೋಷಣೆಯ ಕಥೆಗಳು

೩) ಲಿಂಗ ಆಧಾರಿತ ಶೋಷಣೆಯ ಕಥೆಗಳು

೪) ಆಳುವ–ಆಳಿಸಿಕೊಳ್ಳುವ ಆಧಾರಿತ ಶೋಷಣೆಯ ಕಥೆಗಳು

ಅಧ್ಯಾಯ – 5

ಶೋಷಣೆಯ ವಿವಿಧ ನೆಲೆಗಳ ವರ್ಗೀಕರಣ

ಡಾ॥ ಬೆಸಗರಹಳ್ಳಿ ರಾಮಣ್ಣನವರ ಎಲ್ಲಾ ಕಥೆಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಪ್ರೌಢ ಸಂಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಸಿದ್ಧಪಡಿಸುವ ಹಿನ್ನಲೆಯಲ್ಲಿ ಇವರ ಶೋಷಣೆಯನ್ನು ವಸ್ತುವಾಗುಳ್ಳ ಕಥೆಗಳನ್ನು ವರ್ಗೀಕರಿಸಿಕೊಳ್ಳಲು ಅನುಸರಿಸಬಹುದಾದ ಕ್ರಮವನ್ನೂ, ಅಳವಡಿಸಿಕೊಳ್ಳಬಹುದಾದ ಮಾನದಂಡವನ್ನು ಕುರಿತು ಆಲೋಚಿಸಿದ್ದೇನೆ. ಈ ದೃಷ್ಟಿಯಿಂದ ರಾಮಣ್ಣನವರ ಕಥೆಗಳನ್ನು ಮರುಚಿಂತನೆಗೆ ಒಳಪಡಿಸಿ ಶೋಷಣೆಯನ್ನು ವಸ್ತುವಾಗಿ ಉಳ್ಳಂತಹ ಕಥೆಗಳನ್ನು ಮುಖ್ಯವಾಗಿ ಕೆಳಕಂಡ ನಾಲ್ಕು ವಿಭಾಗಗಳಾಗಿ ವಿಂಗಡಿಸಿಕೊಂಡು ಅಧ್ಯಯನ ನಡೆಸಲಾಗಿದೆ.

1. ಜಾತಿ–ವರ್ಗ ಆಧಾರಿತ ಶೋಷಣೆಯ ಕಥೆಗಳು
2. ಶ್ರೀಮಂತ–ಬಡವ ಆಧಾರಿತ ಶೋಷಣೆ ಕಥೆಗಳು
3. ಲಿಂಗ ಆಧಾರಿತ ಶೋಷಣೆಯ ಕಥೆಗಳು
4. ಆಳುವ–ಆಳಿಸಿಕೊಳ್ಳುವ ಆಧಾರಿತ ಶೋಷಣೆಯ ಕಥೆಗಳು

೧. ಜಾತಿ–ವರ್ಗ ಆಧಾರಿತ ಶೋಷಣೆಯ ಕಥೆಗಳು:

ಡಾ॥ ಬೆಸಗರಹಳ್ಳಿ ರಾಮಣ್ಣನವರು ಹುಟ್ಟಿ ಬೆಳೆದ ಮಂಡ್ಯ ಜಿಲ್ಲೆಯ ಪರಿಸರದ ಬದುಕನ್ನು ಗಾಢವಾಗಿ ಅನುಭವಿಸಿ ಕಥೆಗಳನ್ನು ಚಿತ್ರಿಸಿದ್ದಾರೆ. ಈ ಕಥೆಗಳಲ್ಲಿ ಬರುವ ಸನ್ನಿವೇಶ, ಪಾತ್ರಗಳು ಉತ್ತಮ ಬದುಕಿಗಾಗಿ ಹಂಬಲಿಸುತ್ತಿರುವುದನ್ನು ಕಾಣುತ್ತೇವೆ. ರಾಮಣ್ಣನವರ ಅನೇಕ ಕಥೆಗಳಲ್ಲಿ ಸೈದ್ಧಾಂತಿಕ ಪ್ರಭುದ್ಧತೆಯನ್ನು ಪಾತ್ರಗಳು ಜೀವಂತ ರೂಪು ಪಡೆಯುತ್ತವೆ. ಶೋಷಕ ಮತ್ತು ಶೋಷಿತರ ನಡುವಿನ ಸಂಬಂಧಗಳು ಇಲ್ಲಿ ದಾಖಲಾಗುತ್ತವೆ. ಗ್ರಾಮೀಣ ಪರಿಸರದಲ್ಲಿ ಮಾನವೀಯ ಮೌಲ್ಯಗಳನ್ನು ಶೋಧಿಸುವ ರಾಮಣ್ಣನವರು ಪಟ್ಟಭದ್ರ ಹಿತಾಸಕ್ತಿಗಳ ದರ್ಪ, ದೌರ್ಜನ್ಯ, ದಬ್ಬಾಳಿಕೆಯ ವಿರುದ್ಧ ಸಿಡಿದು ನಿಲ್ಲುತ್ತ ಗ್ರಾಮೀಣ ಪ್ರದೇಶಗಳಲ್ಲಿ ಕಂಡು ಬರುವ ಜಾತಿ–ವರ್ಗ ಸಂಘರ್ಷದ ವಿವಿಧ ಮುಖಗಳನ್ನು ತಮ್ಮ ಅನುಭವದ ನೆಲೆಯಲ್ಲಿ ಕಟ್ಟಿಕೊಡುತ್ತಾರೆ.

ಅಸಮಾನತೆಯ ಆಧಾರದ ಮೇಲೆ ನಿಂತಿರುವ ಸಮಾಜದ ಬದಲಾವಣೆಯೇ ಇವರ ಕಥೆಗಳ ಹಿಂದಿರುವ ಪ್ರಧಾನ ಶಕ್ತಿ, ಹೊಸ ಸಮಾಜದ ರಚನೆಗಾಗಿ ಹೋರಾಡುವ ಇಲ್ಲಿಯ ಶೋಷಿತ ವರ್ಗವು ತಾವು ಅನುಭವಿಸುತ್ತಿರುವ ನೋವಿಗೆ ಕಾರಣ ಹುಡುಕಿ ಪ್ರತಿಭಟಿಸುತ್ತಾರೆ.

ಮೇಲ್ಜಾತಿ, ಕೆಳಜಾತಿ ಎಂಬ ಭಾವನೆಯು ಬೆಳೆದು ಮೇಲು-ಕೀಳು, ಶ್ರೇಷ್ಠ-ಕನಿಷ್ಠ, ಮಡಿ-ಮೈಲಿಗೆ ತುಂಬಿದ ಮನಸ್ಸುಗಳು ಇಲ್ಲಿ ಬಿಂಬಿತವಾಗುತ್ತವೆ.

"ಜನ್ಮನಾ ಜಾಯತೇ ಶೂದ್ರ: ಸಂಸ್ಕಾರಾತ್ ದ್ವಿಜ ಉಚ್ಯತೇ" ಹುಟ್ಟುವಾಗ ಎಲ್ಲರೂ ಶೂದ್ರರಾಗಿಯೇ ಹುಟ್ಟುತ್ತಾರೆ, ನಂತರ ಜೀವನದಲ್ಲಿ ಸಂಸ್ಕಾರ ಹೊಂದಿರುವವರು ದ್ವಿಜರಾಗುತ್ತಾರೆ. ಸಂಸ್ಕೃತ ಭಾಷೆಯಲ್ಲಿನ ಈ ಉಕ್ತಿಯಿಂದ ನಮಗೆ ಸ್ಪಷ್ಟವಾಗುವುದೇನೆಂದರೆ ಹುಟ್ಟಿನಿಂದ ಎಲ್ಲರೂ ಸರಿಸಮಾನರಾಗಿದ್ದಾರೆ. ನಂತರ ಗುಣ ಮತ್ತು ವೃತ್ತಿಗಳಿಗನುಗುಣವಾಗಿ ವಿವಿಧ ವರ್ಗಗಳಿರುತ್ತವೆ ಎಂಬುದಾಗಿದೆ. ಜಾತಿ ಮತ್ತು ವರ್ಗ ಸಂಘರ್ಷಗಳಿಂದ ಒಡೆದು ಚೂರು ಚೂರಾಗಿ ಹೋಗಿರುವ ನಮ್ಮ ಸಮಾಜದ ಮಧ್ಯಮ ಜಾತಿಯ ಲೇಖಕ ಅನೇಕ ತೊಡಕುಗಳಲ್ಲಿ ಸಿಕ್ಕಿ ತೊಳಲಾಡುತ್ತಾರೆ. "ಮೊದಲನೆಯ ವರ್ಗಕ್ಕೆ ಸೇರಿದ ಲೇಖಕ ತನ್ನ ವರ್ಗ ಮಾಡಿರುವುದೆಲ್ಲ ಸರಿ ಎಂಬಂಥ ಧೋರಣೆ ತಾಳಿದರೆ, ಕೊನೆಯ ವರ್ಗಕ್ಕೆ ಸೇರಿದ ಸಾಹಿತಿ, ಎಲ್ಲ ಮೇಲ್ವರ್ಗಗಳೂ ತನ್ನ ವರ್ಗವನ್ನು ಶೋಷಿಸಿ ಹಿಂಸಿಸಿದ್ದಾರೆಂಬ ನಿಲುವನ್ನು ಹೊಂದಬಹುದು. ಈ ಎರಡು ತುದಿಗಳ ಮಧ್ಯೆ ಬರುವ ಸಾಹಿತಿಗೆ ಹೆಚ್ಚು ಸತ್ಯವನ್ನು ಕಾಣಿಸುವ ಸಾಧ್ಯತೆ ಇದೆ. ಏಕೆಂದರೆ ಇವರು ಪ್ರತಿನಿಧಿಸುವ ವರ್ಗ ಶೋಷಣೆಗೆ ಒಳಗಾಗಿದೆ, ಶೋಷಣೆಯನ್ನೂ ಮಾಡುತ್ತಿದೆ. ಆದ್ದರಿಂದಲೇ ಮಧ್ಯಮ ವರ್ಗದ ಲೇಖಕನ ಕೃತಿಗಳು ಆಳವೂ, ವ್ಯಾಪಕವೂ, ಗಾಢವೂ ಆಗಿರುತ್ತದೆ"[1]. ಎಂಬ ಕೆ.ಎಸ್. ಭಗವಾನರ ಮಾತುಗಳು ರಾಮಣ್ಣನವರ ವಿಷಯದಲ್ಲಿ ಅಕ್ಷರಶಃ ನಿಜವಾಗಿದೆ. ವರ್ಗ-ಜಾತಿ ಸಂಘರ್ಷದ ಜ್ವಾಲೆಯಲ್ಲಿ ಹಳ್ಳಿಯ ಸಮಸ್ತ ಜನರ ರೀತಿ ನೀತಿಗಳು ಕುದಿದು ಮನುಷ್ಯ ಜೀವನದ ಮೂಲ ನೆಲೆಯನ್ನು ಹುಡುಕುತಾ ಹೊಸ ಜಾಡನ್ನು ನಿರ್ಮಿಸುವ ಇವರ ಕಥಾ ಚಿತ್ರಣಗಳು ಹೊಸ ಬದುಕನ್ನು ಅರ್ಥವತ್ತಾಗಿ ಕಟ್ಟಿಕೊಡುವಲ್ಲಿ ಯಶಸ್ವಿಯಾಗಿವೆ.

ಜಾತೀಯತೆಯು ವ್ಯಕ್ತಿಯು ತಾನು ತನ್ನ ಉಪಜಾತಿಗೆ ಇಲ್ಲವೇ ವರ್ಗಕ್ಕೆ ತೋರಿಸುವ ಅಂಧನಿಷ್ಠೆಯಾಗಿದೆ. ರಾಮಣ್ಣನವರ ಕಥೆಗಳಲ್ಲಿ ಜಾತಿ-ವರ್ಗ ಶೋಷಣೆಯ ಸಂದರ್ಭಗಳಲ್ಲಿ ಅನ್ಯಜಾತಿಯ ಹಿತಾಸಕ್ತಿಯನ್ನು ವಿವೇಚನೆ ಮಾಡದೆ ಉಪೇಕ್ಷೆ ಮಾಡುತ್ತಾ ನ್ಯಾಯ-ಅನ್ಯಾಯ, ನೀತಿ-ಅನೀತಿ, ಧರ್ಮ-ಅಧರ್ಮಗಳ ಬಗೆಗಿನ ತಾರತಮ್ಯಗಳು ಮೂಡಿಬಂದಿವೆ. ಇಲ್ಲಿ ರಾಮಣ್ಣನವರು ವಾಸ್ತವತೆಯನ್ನು ದಾಖಲಿಸುತ್ತಾ ಶೋಷಣೆಯ ಕುರಿತಾಗಿ ದಲಿತರ ಬದುಕಿನ ಜೀವನವನ್ನು ಕಲಾತ್ಮಕವಾಗಿ ಚಿತ್ರಿಸಿದ್ದಾರೆ.

ರಾಮಣ್ಣನವರ ಜಾತಿ-ವರ್ಗವನ್ನು ವಸ್ತುವಾಗಿ ಉಳ್ಳಂತಹ ಕಥೆಗಳು ಪ್ರಗತಿಪರ ಚಿಂತನೆ, ಪ್ರತಿಗಾಮಿ ಶಕ್ತಿಗಳ ವಿರುದ್ಧ ಪ್ರತಿಭಟನೆ ಮತ್ತು ಶೋಷಣೆಗೆ ಕಾರಣವಾದ ವ್ಯವಸ್ಥೆಯ ಕರಾಳ ಕ್ರೌರ್ಯಗಳ ವಿರುದ್ಧ ಸಮರ ಸಾರುವುದು, ಸಾಮಾಜಿಕ ವಿಷಯ ಸ್ಥಿತಿಗೆ ವಿಡಂಬನೆ ಮತ್ತು

ವರ್ಗಗಳ ಆಂತರಿಕ ದ್ವಂದ್ವಗಳ ಚಿತ್ರಣ ಹೀಗೆ ಸಮಾಜದ ಶೋಷಣೆಯ ವಿವಿಧ ಮಜಲುಗಳನ್ನು ಬಿತ್ತರಿಸುತ್ತವೆ. ತುಳಿತಕ್ಕೆ ಒಳಗಾದವರ ಬದುಕಿನ ಪರಿಸರವನ್ನು ಸೂಕ್ಷ್ಮ ರೀತಿಯಲ್ಲಿ ಗಮನಿಸಿ, ತಮ್ಮ ಬದುಕಿನಲ್ಲಿ ಒಳಹೊಕ್ಕು ನೋಡಿ ದಮನಕಾರಿ ಶಕ್ತಿಗಳ ವಿರುದ್ಧ ಬಂಡೇಳುವ ಎಚ್ಚರದ ಸ್ಥಿತಿಯನ್ನು ಇಲ್ಲಿ ಕಾಣಬಹುದಾಗಿದೆ. ಮೇಲ್ವರ್ಗಗಳ ತಾರತಮ್ಯ, ತಾತ್ಸಾರ, ದೌರ್ಜನ್ಯ, ದರ್ಪ, ಕ್ರೌರ್ಯಗಳಿಂದಾಗಿ ಕೆಳವರ್ಗದವರು ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಇತ್ಯಾದಿ ಕ್ಷೇತ್ರಗಳಲ್ಲಿ ಅನರ್ಹರಾಗಿ ಶೋಷಣೆಗೆ ತುತ್ತಾಗಿ ಜೀವನ ನಡೆಸುತ್ತಿದ್ದಾರೆ ಎಂಬುದು ರಾಮಣ್ಣನವರ ಗರ್ಜನೆ, ಹರಕೆಯ ಹಣ, ಕರಕನ ಯುಗಾದಿ, ಗಾಂಧೀ ಸಂತಾನ, ಕಳೆ, ಅಭಿಮಾನ, ಇತ್ಯಾಧಿ ಕಥೆಗಳಲ್ಲಿ ಪರಿಣಾಮಕಾರಿಯಾಗಿ ಮೂಡಿಬಂದಿವೆ.

'ಹರಕೆಯ ಹಣ' ಕಥೆಯಲ್ಲಿ ಮಲ್ಲನಾಯಕನ ಹಳ್ಳಿಯ ಜನರ ಜೀವನದಲ್ಲಿ ಮೇಲು ಕೀಳಿನ ಸಮಸ್ಯೆ ಹೇಗೆ ಸುತ್ತಿಕೊಂಡಿದೆ. ಎಂಬ ಅಂಶವನ್ನು ವ್ಯಕ್ತಪಡಿಸುತ್ತವೆ. ಅನೇಕ ಶತಮಾನಗಳಿಂದ ಶೋಷಣೆಗೆ ಒಳಗಾಗಿ ಬದುಕುತ್ತಿದ್ದ ಜನರ ಬದುಕು ಬದಲಾಗುತ್ತಿರುವುದನ್ನು ತೆರೆದುತೋರಿಸಿದೆ. ಈ ಹಳ್ಳಿಯ ಕೆಳವರ್ಗದವರ ಜೀವನ ಮೇಲ್ವರ್ಗದವರ ಹಿಡಿತಕ್ಕೆ ಸಿಕ್ಕಿ ಹೇಗೆ ತೊಳಲಾಡುತ್ತದೆ ಮತ್ತು ಎಚ್ಚೆತ್ತ ಕೆಳವರ್ಗದವರು ತಮಗೆ ನ್ಯಾಯವಾಗಿ ಸಲ್ಲಬೇಕಾದ ಹಕ್ಕಿಗಾಗಿ ಒಗ್ಗೂಡಿ ಪ್ರತಿಭಟಿಸುವ ರೀತಿ, ಅದನ್ನು ಹತ್ತಿಕ್ಕುವ ಮೇಲ್ವರ್ಗದವರ ಕುತಂತ್ರ ಮಾರ್ಮಿಕವಾಗಿ ಮೂಡಿ ಬಂದಿದೆ.

ಮಲ್ಲನಾಯಕನೆಂಬ ಪಾಳೇಗಾರನ ಕಾಲದಿಂದಲೂ ಹರಿಜನರ ಬದುಕು ಮುಕ್ಕಾಗದಂತೆ ನಡೆದುಕೊಂಡು ಬಂದಿದೆ. ದಂಡಿಗಮ್ಮ ಸವರ್ಣೀಯರ ಕೇರಿಯಲ್ಲೂ, ಮಾಸ್ತಮ್ಮ, ಮಾರಮ್ಮ ಹೊಲೆಯರ ಕೇರಿಯಲ್ಲೂ ಇರುವ ದೇವತೆಗಳು. ವಿಶೇಷವೆಂದರೆ ಈ ಮೂರೂ ದೇವಸ್ಥಾನಗಳಿಗೆ ಕೆಳವರ್ಗದವರೇ ಪೂಜಾರಿಗಳಾಗಿದ್ದರು. ಮೂರು ವರ್ಷಗಳಿಗೊಮ್ಮೆ ನಡೆಯುವ ಜಾತ್ರೆಯಲ್ಲಿ ಕೊಂಡ ಹಾಯುವುದು ಇತ್ಯಾದಿ ಪೂಜಾಕ್ರಮಗಳನ್ನು ಮಾಡುತ್ತಿದ್ದ ಇವರಿಗೆ ದೇವರಿಗೆ ಬರುತ್ತಿದ್ದ ಹರಕೆಯ ಹಣ ಸಿಗದೆ ಊರಿನ ಪಟೇಲ ಮತ್ತು ಶಾನುಭೋಗರ ಪಾಲಾಗುತ್ತಿತ್ತು. ಇದನ್ನು ಕಂಡ ದಲಿತರ ಮುಖಂಡನಾದ 'ಸುಮಾನಿ' ಪೂಜಾರಿಗಳಾದ ಮೆಣಸ, ಸಿದ್ಧಯ್ಯ, ಧೊಳಯ್ಯರನ್ನು ಹುರಿದುಂಬಿಸಿ ಹರಿಜನರನ್ನು ಒಗ್ಗೂಡಿಸಿ ಹರಕೆಯ ಹಣ ತಮ್ಮದಾಗಬೇಕೆಂದು ನ್ಯಾಯ ತೀರ್ಮಾನವನ್ನು ಮಾಡಿಸುತ್ತಾನೆ. ಇದನ್ನು ಸಹಿಸಲಾರದ ಪಟೇಲ ಉಗ್ರೇಗೌಡ ಮತ್ತು ಗೊಳೂರು ಶಾನುಭೋಗ ಶ್ಯಾಮಣ್ಣ ಸೇರಿಕೊಂಡು ರಾಜಕಾರಣಿಗಳಿಂದ ಹಿಡಿದು ಸರಕಾರಿ ಅಧಿಕಾರಿಗಳ ಮನವೊಲಿಸಿ ದಲಿತರನ್ನು ಹತ್ತಿಕ್ಕುತ್ತಾರೆ. ಮೇಲು ವರ್ಗದವರ ಶೋಣೆಯ ವಿರುದ್ಧ ಮಲ್ಲನಾಯಕನ ಕಟ್ಟೆಯ ಬೀದಿ ಬೀದಿಯಲ್ಲೂ ಹರಿಜನರಿಂದ ಬಂದ ಅನಿರೀಕ್ಷಿತ ಸವಾಲು ಗೊಮ್ಮಟವಾಗ

ತೊಡಗಿತ್ತು. ಎಂಬ ಕಥೆಗಾರರ ಮಾತು ದಲಿತರು ಎಚ್ಚೆತ್ತುಕೊಂಡ ಬಗೆಯನ್ನು ಮತ್ತು ಅವರ ಬದುಕು ಪರಿವರ್ತನೆಗೊಳಗಾಗುತ್ತಿರುವುದನ್ನು ಸೂಚಿಸುತ್ತದೆ. ಇಲ್ಲಿ ವರ್ಗ ಸಂಘರ್ಷದ ಶೋಷಣೆಯ ಚಿತ್ರಗಳು ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ. ಹಾಗೂ ದಲಿತವರ್ಗದವರ ಪ್ರತಿಭಟನೆಯನ್ನು ಚಿತ್ರಿಸುವ ಮೂಲಕ ಆ ವರ್ಗದಲ್ಲಿ ಕಾಣಿಸಿಕೊಂಡ ಚಲನಶೀಲತೆಯನ್ನು ದಾಖಲಿಸಿದೆ.

'ಗಾಂಧೀ ಸಂತಾನ' ಕಥೆ ಶಿಕ್ಷಣ ಕ್ಷೇತ್ರದಲ್ಲಿ ಕಲಿಯುಲು ಹೊರಟ ಶೂದ್ರ ಮತ್ತು ದಲಿತರ ಅವಮಾನದ ಸ್ಥಿತಿಯನ್ನು ಹಾಗೂ ಉತ್ತಮ ಜಾತಿ ಎಂದು ಹೇಳಿಕೊಂಡು ಬಂದ ಬ್ರಾಹ್ಮಣರ ವರ್ತನೆಯ ರೀತಿಯನ್ನು ಚಿತ್ರಿಸುತ್ತದೆ. ಆಡಳಿತದ ಪ್ರಮುಖ ಸೂತ್ರಗಳನ್ನು ಹಿಡಿದುಕೊಂಡು ಬಂದಿರುವ ಮೇಲು ಜಾತಿಗಳು ಕೇಳವರ್ಗದವರನ್ನು ನಡೆಸಿಕೊಳ್ಳುವ ರೀತಿ ಮತ್ತು ಶೋಷಣೆಗೆ ಗುರಿಯಾದವರ ಪ್ರತಿಭಟನೆ ಇಲ್ಲಿಯ ಸಂಘರ್ಷದ ನೆಲೆಯಲ್ಲಿ ವ್ಯಕ್ತವಾಗಿದೆ. ಮಧ್ಯಮ ವರ್ಗದವರಾದ ಕಥೆಗಾರರು ತಾವು ಅನುಭವಿಸಿದ ಬಾಲ್ಯದ ಘಟನೆಯ ಜೊತೆಯಲ್ಲಿಯೇ ಕಥೆ ಬೆಳೆಸುವ ಕೌಶಲ ಅದ್ಭುತವಾಗಿದೆ.

ಈ ಕಥೆಯಲ್ಲಿ ಬರುವ ಹೊಲೆಯರ ತಿಮ್ಮಕ್ಕನ ಮಗ ಮೆಣಸ ತನ್ನ ಅಪ್ಪ ಮಾಡಿದ ಸಾಲಕ್ಕಾಗಿ ಜೀತಕ್ಕಿರಲು ನಿರಾಕರಿಸುತ್ತಾನೆ. ನಮ್ಮ ಜಾತಿಯನ್ನು ಕೇಳು ಜಾತಿ ಅಂತಾರಲ್ಲ ಇವರದು ಯಾವುದು ಮಹಾ ಜಾತಿ ಎಂದು ತನ್ನ ಗಡಸುತನವನ್ನು ಪ್ರದರ್ಶಿಸುತ್ತಾನೆ. ತನ್ನ ಜಾತಿಯ ಬಗ್ಗೆ ಪುಟ್ಟಣ್ಣ ಹೇಳುವ 'ನಾವು ಬ್ರಂದೇವರ ಪಾದದೇಲಿ ಹುಟ್ಟಿರೋರಂತೆ ಕಲೆ ಮೆಣಸ, ಅದ್ಕೆ ಊರಾಚೆ ಮಡಗವ್ರೆ' ಎಂಬುದನ್ನು ಕೇಳಿ 'ಬ್ರಾಹ್ಮಣರು ಬ್ರಂದೇವರ ಯಾವ ಜಾಗದಿಂದ ಹುಟ್ಟಿರೋದು?'.... ಎಂದು ಅಪಹಾಸ್ಯ ಮಾಡಿ 'ಎಲ್ಲಾದ್ರೂ ಮುಖದೇಲಿ, ಕಾಲೇಲಿ ಮಕ್ಕಳಾದವೇ, ಬ್ರಂದೇವರು ಹೆಂಗ್ಸಲ್ಲ ಕಣ ಗಂಡಸರು, ಗಂಡಸು ಮಕ್ಕಳಿತ್ತಾನ ಹುಟ್ಟುಸ್ತಾನಪ್ಪ' ಎಂದು ಹೀಯಾಳಿಸುತ್ತಾನೆ. ತನ್ನ ಜಾತಿಯ ಯಜಮಾನನಿಗೆ 'ನಿನ್ನಂಥ ನಾಮರ್ದರೆಲ್ಲ ಯಜಮಾನರಾಗೋ ಹೊತ್ತಿಗೆ ನಂಜನಕ್ಕೆ ಈ ಬಾಳಾಟ ಥೂ' ಎಂದು ಮೂದಲಿಸಿ ಮೇಲು ವರ್ಗದವರ ವಿರುದ್ಧ ಸೆಟೆದು ನಿಲ್ಲುತ್ತಾನೆ. ಹೀಗೆ ಈ ರೀತಿ ಮೆಣಸ ಸೆಟೆದು ನಿಲ್ಲಲು ಮುಖ್ಯ ಕಾರಣವೆಂದರೆ ಅವನ ಜಾತಿ-ವರ್ಗದ ಮೇಲಾದ ಶೋಷಣೆಯಾಗಿದೆ.

ನನಗೂ ಓದಲು ಆಸೆ ಇತ್ತು ಆದರೆ 'ಸ್ಕೂಲೇಲಿ ನನ್ನ ಮೂಲೇಲಿ ದೂರದಲ್ಲಿ ಕೂರಿಸೋರು, ಮುಟ್ಟಿಸ್ಕೋಬ್ಯಾಡ ಅನ್ನೋರು, ನನ್ನ ಸ್ಲೇಟ್ ಕಂದ್ರೆ ಒಬ್ಬ ಕಿವುಡ ಮೇಷ್ಟ್ರು ಇದ್ದನಲ್ಲ ಅವನು 'ಹೇಲು ಕಂಡಂಗೆ ಅಸಿಸಿ ದೂರ-ದೂರ ಅಂತ ಚಂಗ್ನೆ ಹಿಂದಕ್ಕೆ ಹಾರುವ' ಅವರ ಮನೆ ಹಾಳಾಗ ಎಂದು ಶಪಿಸುತ್ತಾನೆ. ಹೊಲೆಯರ ಮೆಣಸನ ಕೊಬ್ಬಿದ ಮಾತುಗಳನ್ನು ಕೇಳಿ

ಸಹಿಸದ ಮೇಲು ವರ್ಗದವರು ಜೋಯಿಸರ ಮನೇಲಿ ದೊಡ್ಡ ಸಭೆ ನಡೆಸಿ ಮೆಣಸನ ಚರಿತ್ರೆ ಮುಕ್ತಾಯವಾಗುವಂತೆ ಏರ್ಪಾಡು ಮಾಡುವುದು. ಮೆಣಸನ ಬಗ್ಗೆ ಸಭೆ ನಡೆದ ಮೂರನೇ ದಿನದಿಂದ ಮೆಣಸ ಊರಲ್ಲಿ ಕಾಣದೇ ಹೋಗುವುದು ವರ್ಗ ಸಂಘರ್ಷದ ಹಿನ್ನಲೆಯಲ್ಲಿ ಉಂಟಾದ ಮೇಲು ವರ್ಗದವರ ಕ್ರೂರತನದ ನಡವಳಿಕೆಯನ್ನು ಚಿತ್ರಿಸುತ್ತದೆ. ಇಲ್ಲಿ ಮೆಣಸ ಕೊಲೆಯಾದರೂ ಮೆಣಸನಂಥ ನೂರಾರು ದಲಿತರಿಗೆ ಕೆಚ್ಚು ತುಂಬಿದ ಮೆಣಸನ ಪ್ರತಿಭಟನೆ ಮಾರ್ಮಿಕವಾಗಿ ಈ ಕಥೆಯಲ್ಲಿ ಪ್ರತಿಧ್ವನಿಸುತ್ತದೆ.

'ಕಳೆ' ಕಥೆಯಲ್ಲಿ ಉತ್ಪಾದನಾ ಮೂಲಗಳನ್ನು ಹೊಂದಿರುವ ಗೌಡಮನೆತನಗಳು ಹೇಗೆ ತಮ್ಮ ಕೆಳವರ್ಗದವರನ್ನು ಶೋಷಿಸುತ್ತಾರೆ ಎಂಬ ಚಿತ್ರಣವನ್ನು ಎಳೆ ಎಳೆಯಾಗಿ ತೆರೆದಿಟ್ಟಿದ್ದಾರೆ. ಫ್ಯೂಡಲ್ ಸಂಸ್ಕೃತಿಯ ನೋಟ ಇಲ್ಲಿ ಎದ್ದುಕಾಣುತ್ತದೆ. ಇಲ್ಲಿ ಮೇಲ್ವರ್ಗಕ್ಕೆ ಸೇರಿದ ಶಿವಲಿಂಗೇಗೌಡರು ಕೆಳವರ್ಗಕ್ಕೆ ಸೇರಿದ ಹೊಲೆಯರ ಕೆಂಪಿ ಮತ್ತು ಅವಳ ತಾಯಿ ಬೇಲೂರಿಯನ್ನು ನಡೆಸಿಕೊಂಡ ಬಗೆಯ ಕುರಿತು ವಿವರಿಸಲಾಗಿದೆ. ಮೇಲ್ವರ್ಗದ ಜನರ ಸಮಾಜದ ಇತರ ಎಲ್ಲ ಕೆಲಸಗಳಿಂದ ದೂರವಿಡುವ ಕೆಳವರ್ಗದವರನ್ನು ತಮ್ಮ ಲೈಂಗಿಕ ಕಾಮನೆಗಳನ್ನು ತೃಪ್ತಿ ಪಡಿಸಿಕೊಳ್ಳಲು ಮಾತ್ರ ಬಳಸುವ ಅವರು ಕ್ರೌರ್ಯತೆಯನ್ನು ಮೆರೆಯುತ್ತಿದ್ದರು.

ಕೆಂಪಿ ಪ್ರಾಯದಲ್ಲಿದ್ದಾಗ ಸಂಭೋಗಾತುರನಾಗಿದ್ದ ಗೌಡ ಅವಳ ಪ್ರಾಯ ಇಳಿದ ಮೇಲೆ ತೆಗೆದುಕೊಳ್ಳುವ ನಿರ್ಧಾರ ಕೆಳವರ್ಗದವರ ಅಸಹಾಯಕತೆಯನ್ನು ಚಿತ್ರಿಸುತ್ತದೆ. ಇಲ್ಲಿ ಕೆಂಪಿಯ ಅವ್ವ ಬೇಲೂರಿಯೂ ಸಹ ಪ್ರತಿಭಟಿಸಲಾರದೆ ಬೆಂಬಲ ನೀಡುವುದು ಕೆಳ ವರ್ಗದವರ ಶೋಚನೀಯ ಸ್ಥಿತಿಯನ್ನು ಬಿತ್ತರಿಸುತ್ತದೆ. ಇದರೊಂದಿಗೆ ಬೆಸ್ತರ ಲಕ್ಕಿ ಸೊಸೈಟಿ ಸಾಲ ತೀರಿಸಲು ತೋಟ ಮಾರುವುದಕ್ಕೆ ತೀರ್ಮಾನಿಸಿದಾಗ ಶಿವಲಿಂಗೇಗೌಡರು 'ಲೇ ಲಕ್ಕಿ ಮಾರೋದಾಗಿದ್ರೆ ನನಗೇ ಮಾರಬೇಕು ಆ ವೈಸ್ ಛೇರ್ಮನ್ ಸಿದ್ಧನಿಗೆ ಏನಾದ್ರೂ ಮಾರಿದ್ರೆ ನಿನ್ನ ಚರ್ಮ ಸುಲ್ಸಿ.... ಲೇ.....' ಎಂದು ತಾಕೀತು ಮಾಡುವುದು ಕೆಳವರ್ಗದವರ ಮೇಲೆ ನಡೆಯುವ ದೌರ್ಜನ್ಯರ ಕ್ರೌರ್ಯವನ್ನು ಚಿತ್ರಿಸುತ್ತದೆ.

ಗೌಡರು ಊರಿನ ಕೆಳವರ್ಗದ ಹೆಣ್ಣುಮಕ್ಕಳನ್ನು ಭೋಗಿಸಲು ಮುಂದಾಗುವುದು ಮತ್ತು ಮನೆಯ ಆಳುಗಳು ಜಮೀನ್ದಾರರ ಹೆಣ್ಣುಮಕ್ಕಳನ್ನು ಗುಟ್ಟಾಗಿ ಭೋಗಿಸುವುದು ಮುಂತಾದವುಗಳು ವರ್ಗ ಸಂಘರ್ಷದ ವೈರುದ್ಯಗಳನ್ನು ಹಾಗೂ ಶೋಷಣೆಗಳನ್ನು ಈ ಕಥೆ ದಾಖಲಿಸುತ್ತದೆ.

'ಅಭಿಮಾನ' ಕಥೆಯಲ್ಲಿ ಗೌಡ ಮನೆತನಗಳ ನಡುವೆಯೇ ನಡೆಯುವ ರಾಜಕೀಯ ಮಸಲತ್ತು ಇವರುಗಳನ್ನೇ ಹಿಂಬಾಲಿಸುವ ಕೆಳವರ್ಗದವರ ಚಿಂತಾಜನಕ ಸ್ಥಿತಿ ಮತ್ತು

ಅಸಹಾಯಕತೆ ಸೊಗಸಾಗಿ ನಿರೂಪಿತವಾಗಿವೆ. ಪುಟ್ಟಸ್ವಾಮಿ ಗೌಡ ಇಡೀ ಹಳ್ಳಿಯನ್ನೇ ತನ್ನ ಸ್ವಾರ್ಥ ಸಾಧನೆಗಾಗಿ ಬಳಸಿಕೊಳ್ಳುತ್ತಾ ತನಗೆ ಆಗದಿದ್ದವನನ್ನು ಅವಿಶ್ವಾಸ ತಂದು ಛೇರ್ಮನ್ ಗಿರಿಯಿಂದ ಕೆಳಗಿಳಿಸಲು, ಪಂಚಾಯ್ತಿ ಸದಸ್ಯನಾದ ಕೆಳವರ್ಗದ ಅನಕ್ಷರಸ್ಥ ಹೊಲೆಯರ ಯಲಕ್ಕಿಯ ಕೈಯಲ್ಲಿ ಖಾಲಿ ಪತ್ರಕ್ಕೆ ಸಹಿ ಹಾಕಿಸಿಕೊಂಡು ಆಟವಾಡಿಸುವುದು ಮೇಲ್ವರ್ಗದವರ ಹಿತಾಸಕ್ತಿಗಳ ಕುತಂತ್ರವನ್ನು ಚಿತ್ರಿಸುತ್ತದೆ.

ಮೇಲ್ವರ್ಗಕ್ಕೆ ಸೇರಿದಂತಹ ಪುಟ್ಟಸ್ವಾಮಿಗೌಡ ತನ್ನ ರಾಜಕೀಯದ ದಾಳದಿಂದ ಸೊಸೈಟಿ ಸಾಲದ ನೆಪದಲ್ಲಿ ಕೆಳವರ್ಗದ ಯಾಲಕ್ಕಿಗೆ ಮೋಸ ಮಾಡಿರುವುದು ಸಿದ್ಧೆಗೌಡನಿಗೆ ನೆಮ್ಮದಿ ಕೆಡಿಸಿದೆ. ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ ಊರಿನ ತಾಲ್ಲೂಕು ಮಟ್ಟದ ರಾಜಕೀಯ ವ್ಯವಸ್ಥೆಯಲ್ಲಿ ಕೆಳವರ್ಗದವರು ರಾಜಕೀಯ ನಿರ್ಣಯ ತೆಗೆದುಕೊಳ್ಳುವ ಹಂತಕ್ಕೆ ತಲುಪಿರುವುದು ಕಥೆಯ ಮುಖ್ಯ ಬೆಳವಣಿಗೆಯಾಗಿದೆ.

'ಅಪ್ಪೋ ಈ ದೇಹ ಊರೇಲಿ ಜನ್ಮ ಪಡೆದದೆ, ಈ ಊರಿನ ನೀರು, ಗಾಳಿ, ಅನ್ನ ತಿಂದು ಬೆಳೆದಿದೆ, ನಾವು ಕೀಳುಜಾತಿಯವರಾಗಿ ಹುಟ್ಟಿರಬಹುದು, ನಂಬಿದೋರ್ಗೆ ಎರಡು ಬಗೆದು ರೂಢಿ ಇಲ್ಲ. ಯಾಲಕ್ಕಿ ಯಾವತ್ತೂ ಅಂಥ ತಾಯಿ ಗಂಡ ಕೆಲಸ ಮಾಡಿದ್ದಿಲ್ಲ, ಮಾಡಿದ್ರೆ ನಾನು ಎಲ್ಲಮ್ಮ ತಾಯಿ ಗುಡಿ ಮುಂದೆ ಮೂಗು ಕುಯ್ದುಕೋ ಬುಟ್ಟೇನು ಎಂದು ಗೌಡರ ಸಂಶಯವನ್ನು ತಳ್ಳಿ ಹಾಕಿ ತನ್ನ ಜಾತಿಯ ಪ್ರಾಮಾಣಿಕತೆಯನ್ನು ಎತ್ತಿ ಹಿಡಿಯುತ್ತಾನೆಯಾದರೂ ಮೇಲ್ವರ್ಗದವರಿಂದ ಶೋಷಣೆಗಳನ್ನು ಹಾಗೂ ದೊಷಣೆಗಳನ್ನು ಎದುರಿಸುವಂತಾಯಿತು.

ಓದು ಬರಹ ಬಾರದ ಯಾಲಕ್ಕಿಯ ಕೈಯಲ್ಲಿ ಖಾಲಿ ಬಾಂಡಿಗೆ ಸಹಿ ಹಾಕಿಸಿಕೊಳ್ಳುವುದರ ಮೂಲಕ ಅನ್ಯಾಯ ಮಾಡಲಾಗುತ್ತಿದೆ. ಕೊನೆಗೆ ವಿಷಯ ತಿಳಿದ ಯಾಲಕ್ಕಿ ಕುಡುಗೋಲಿನಿಂದ ಶೋಷಣೆಯನ್ನು ಪ್ರತಿಭಟಿಸುವನು. ಇಲ್ಲಿ ಶತ-ಶತಮಾನಗಳಿಂದ ನಡೆದುಬರುತ್ತಿರುವ ಜಾತಿ-ವರ್ಗ ಆಧಾರಿತ ಶೋಷಣೆಯು ಕಂಡು ಬಂದಿದ್ದು ಮೇಲ್ವರ್ಗದವರಿಂದ ಆದ ಶೋಷಣೆಗೆ ಕೆಳವರ್ಗದವರು ತಳೆಯುವ ಅಂತಿಮ ನಿಲುವುಗಳು ಅತ್ಯಂತ ಪರಿಣಾಮಕಾರಿಯಾಗಿ ಮೂಡಿಬಂದಿದೆ.

'ಕಕರನ ಯುಗಾದಿ' ಕಥೆಯೂ ಕೂಡ ಪುರೋಹಿತಶಾಹಿ ವರ್ಗದವರು ದಲಿತರನ್ನು ನಡೆಸಿಕೊಳ್ಳುವ ರೀತಿ ಮತ್ತು ಹಿಂಸಿಸುವ ಬಗೆಯನ್ನು ಚಿತ್ರಿಸುವಂತಹುದಾಗಿದೆ. ಊರಿನ ಸಾಹುಕಾರರು, ಗೌಡರು, ಜೋಯಿಸರ ನಡುವೆಯೇ ಜೀವಿಸುವ ಹೊಲೆಯರ ಕಕರನ ಬದುಕು ಅಮಾನವಿಯ ಸ್ಥಿತಿಯಲ್ಲಿ ನರಳುತ್ತಿರುವುದನ್ನು ದಾಖಲಿಸುತ್ತದೆ. ಊರ ಗೌಡರ ಮಗ ಅಂದರೆ

ಮೇಲ್ವರ್ಗಕ್ಕೆ ಸೇರಿದವನು ಕೆಳವರ್ಗದ ಕಕರನ ಮಗಳನ್ನು ಬಸುರಿ ಮಾಡುವುದು ಶೋಷಕ ವರ್ಗದವರ ಕ್ರೂರತನವನ್ನು ಬಯಲಿಗೆಳೆಯುತ್ತದೆ. ಸಾಲವನ್ನು ಕೇಳಲು ಬಂದ ಕಕರನನ್ನು ಮೇಲ್ಜಾತಿಯ ಜೋಯಿಸರು ಶೋಷಿಸುವ ನವಿರಾದ ಕ್ರೌರ್ಯದ ಮೊನಚು ದಲಿತರ ಬಾಳಿನ ಗೋಳನ್ನು ಎಳೆಎಳೆಯಾಗಿ ಚಿತ್ರಿಸುತ್ತದೆ.

ಹಾಲುಗೂಡಿನಿಂದ ತಂದ ಸೀಳುಸೌದೆಯನ್ನು ಜೋಯಿಸರ ತಾಯಿ ಗೋದಮ್ಮ ಸೌದೆ ಮೈಲಿಗೆಯಾಗಿದೆ ಎಂದು ಸಗಣಿ ನೀರನ್ನು ಚಿಮುಕಿಸಿ ಶಾಸ್ತ್ರ ಮಾಡಿ ಅಮಾನವೀಯತೆಯನ್ನು ಮರೆಯುತ್ತಾಳೆ. ಇದಕ್ಕೆ ಜೋಯಿಸನೂ ಬೆಂಬಲಿಸಿ ಮತ್ತೆ ಅದನ್ನು ಮುಟ್ಟೇಡ ಎಂದು ತಾಕೀತು ಮಾಡಿದನು. ಹೊಲೆಯನಾದ ಕಕರನನ್ನು ನೀನು ಕೆಳಜಾತಿಯವನು ದೂರನೇ ನಿಂತು ಮಾತಾಡು ಎಂದು ತಮ್ಮ ಮಡಿವಂತಿಕೆಯನ್ನು ತೋರುತ್ತಿದ್ದ ಜೋಯಿಸರು ಅವರ ಹೆಂಡತಿ ಬಾವಿಗೆ ಬಿದ್ದಾಗ ಕಕರ ನಿನ್ನ ದಮ್ಮಯ್ಯ ನನ್ನ ಹೆಂಡ್ತಿ ಬಚಾವ್ ಮಾಡೋ! ನೀನು ಕೇಳಿದ್ದು ಕೊಡ್ತೀನಿ ಎಂದು ಅಂಗಲಾಚಿ ಬೇಡಿಕೊಂಡಾಗ "ಸ್ವಾಮಿ ನಾನು ಹೊಲೆರೋನು ಒಳಕ್ಕೆ ಹೆಂಗೋಗ್ಲಿ ನೀವು ಬಾಂಬ್ರು!' ಎಂಬುದಕ್ಕೆ ಜೋಯಿಸರ ಮಡಿಮೈಲಿಗೆಯ ಸಂಸ್ಕೃತಿ ಅವಮಾನಕ್ಕೆ ಒಳಗಾಗಿ ಜಾತಿ ಮನೆ ಹಾಳಾಯ್ತು, ಭಗವಂತನ ದೃಷ್ಟಿಯಲ್ಲಿ ಎಲ್ಲಾ ಒಂದೇ ಕಣೋ ಎಂದು ಸ್ವಾರ್ಥ ಸಂಸ್ಕೃತಿ ಹರಾಜು ಮಾಡಿ ಮಾನವೀಯ ಸಂಸ್ಕೃತಿಯನ್ನು ನಿರ್ಮಾಣ ಮಾಡುತ್ತಾರೆ. ಮೇಲು ಕೀಳು ಎನ್ನುವ ಭಾವನೆ, ವರ್ಗ ಪ್ರಜ್ಞೆ ಮನುಷ್ಯ ಸುಖ ಸಂತೋಷದಿಂದ ಇರುವಾಗ ಮಾತ್ರ ಅದೇ ಪ್ರಾಣ ಸಂಕಟಕ್ಕೆ ಸೀಲುಕಿಕೊಂಡಾಗ ಯಾವ ಜಾತಿಯೂ ಇಲ್ಲ, ಜಾತಿಯ ಕಲ್ಪನೆ ಕೇವಲ ಮನುಷ್ಯ ನಿರ್ಮಿತ ಎನ್ನುವ ಸತ್ಯವನ್ನು ಲೇಖಕರು ಈ ಕಥೆಯಲ್ಲಿ ಸೂಕ್ಷ್ಮವಾಗಿ ನಿರೂಪಿಸಿದ್ದಾರೆ.

'ಗರ್ಜನೆ' ಕಥೆಯಲ್ಲಿ ಬರುವ ಮರಿನಂಜ ತನ್ನ ಹುಟ್ಟಿಗೆ ಕಾರಣರಾರು ಎಂಬುದು ತಿಳಿಯದೆ ಜನಗಳ ಬಾಯಿಯಲ್ಲಿ ಹಾದರಕ್ಕೆ ಹುಟ್ಟಿದೋನು ಎಂಬ ಅಣಕಕ್ಕೆ ಗುರಿಯಾಗುತ್ತಾನೆ. ಕಥೆಯ ಮೊದಲಲ್ಲಿ ಮರಿನಂಜ ಉರುಫ್ ಕುರಿನಂಜ ಅನಾಥ, ದಿಕ್ಕಿಲ್ಲದವನು ಪಟೇಲರ ಮನೆಯಲ್ಲಿ ಕುರಿ ಕಾಯುವುದೇ ಆತನ ಕೆಲಸವಾದ್ದರಿಂದ ಚಿಕ್ಕವರು ದೊಡ್ಡವರು ಎಲ್ಲರೂ ಕುರಿನಂಜನೆಂದೇ ಕರೆಯುತ್ತಿದ್ದರು. ಹಾದರಕ್ಕೆ ಹುಟ್ಟಿದವನು ನೀನು, ನಿನ್ನ ಅಪ್ಪ ಯಾರು? ಎಂದು ಛೇಡಿಸುತ್ತಿದ್ದರಿಂದ ಮರಿಜಂಜನಿಗೆ ತನ್ನ ಜಾತಿ-ವರ್ಗ ತಿಳಿಯದ ಕಾರಣ ಅತ್ತು-ಅತ್ತು ಸಾಗಾಗಿ ತನ್ನ ಹುಟ್ಟಿನ ಗುಟ್ಟನ್ನು ತಿಳಿಯಲು ಬಸವನ ಗುಡಿಯ ಮುಂದಿನ ಶಿವಶಂಕುವಿನ ಮರದ ಕೆಳಗೆ ಕುಳಿತಿದ್ದ ಸುಬ್ಬಮ್ಮನ ಬಳಿ ಹೋಗಿ ನಮ್ಮಪ್ಪ ಯಾರು? ಹೇಳು ಎಂದು ದುಂಬಾಲುಬಿದ್ದನು.

ಮೇಲ್ಜಾತಿಗೆ ಸೇರಿದಂತಹ ಪಟೇಲರೇ ತನ್ನ ಜನ್ಮಕ್ಕೆ ಕಾರಣ ಎಂಬ ವಿಷಯ ತಿಳಿಯಿತು. ನಿಮ್ಮವ್ವನ ಮೊದಲನೆ ಗಂಡ ಅಂದರೆ ನಿಮ್ಮ ತಂದೆ ಸತ್ತ ನಂತರ ನಿಮ್ಮವ್ವನ ಮೈ ಮನಸ್ಸು ಪಟೇಲರ ಪಾಲಾಯ್ತು. ಆಮೇಲೆ ನೀನು ಹುಟ್ಟಿದೆ ಎಂದು ಹೇಳಿದಾಗ ಮರಿನಂಜನ ಮೈ ಕೆಂಡದಂತಾಯಿತು. ಕೊನೆಗೆ ತಾನು ಜೀತಕ್ಕಿರುವ ಮನೆಯ ಒಡೆಯನಾದ ಪಟೇಲನೇ ಅಪ್ಪ ಎಂಬುದು ಗೊತ್ತಾದಾಗ 'ನನ್ನ ಅವರಿವರು ಹಾದರಕ್ಕೆ ಹುಟ್ಟಿದವನು ಅಂದ್ರೆ ನಿಮಗೇನೂ ಅನ್ನಿಸೋದೇ ಇಲ್ವೆ' ಎಂದು ತನ್ನ ಹಟ್ಟಿಗೆ ಕಾರಣನಾದ ಪಟೇಲರನ್ನು ಹಿಡಿದು ಜಗ್ಗಿಸಿ ಕೇಳಬೇಕೆನ್ನುವ ಮರಿನಂಜನ ಮಾನಸಿಕ ಪ್ರತಿಭಟನೆ, ಮುಂದೆ ಕ್ರಿಯಾ ರೂಪಕ್ಕೆ ಇಳಿಯುವ ಪರಿವರ್ತನೆಯನ್ನು ಬಯಸುವ ನಿಬಿಡ ಚಿತ್ರಣವನ್ನು ದಾಖಲಿಸುತ್ತದೆ.

ಇಲ್ಲಿ ಮೇಲ್ವಗಕ್ಕೆ ಸೇರಿದ ಪಟೇಲನು ತನ್ನ ತೀಟೆ ತೀರಿಸಿಕೊಳ್ಳುವುದಕ್ಕೆ ಮರಿನಂಜನ ತಾಯಿಯನ್ನು ಬಳಸಿಕೊಂಡನು. ಆದರೆ ಅವಳ ಹೊಟ್ಟೆಯಲ್ಲಿ ಹುಟ್ಟಿದ ತನ್ನ ಮಗನಿಗೆ ಸರಿಯಾದ ಸ್ಥಾನ ಮಾನವನ್ನು ನೀಡದೆ ಅವನನ್ನು ಕೆಳವರ್ಗದವರಂತೆ ಕಂಡು ಕುರಿ ಕಾಯಲು ಬಳಸಿಕೊಳ್ಳುತ್ತಿದ್ದನು. ಹೀಗೆ ಶೋಷಣೆಯ ವಿಭಿನ್ನರೂಪವನ್ನು ಇಲ್ಲಿ ತೆರೆದಿಡಲಾಗಿದೆ.

ತನ್ನ ಹುಟ್ಟಿನ ಕಾರಣದಿಂದಾಗಿ ಸಮಾಜದಲ್ಲಿ ಸರಿಯಾದ ಸ್ಥಾನ ಸಿಗದೆ ಬೇರೆ ಜನರ ಬಾಯಿಗೆ ಆಹಾರವಾದ ಮರಿನಂಜನ ಬದುಕು ತಾತ್ಸಾರ, ಹೀಯಾಳಿಕೆಗೆ ಗುರಿಯಾಗಿತ್ತು. ನಂತರ ತಾನೂ ಮೇಲ್ವರ್ಗದವರಿಗೆ ಹುಟ್ಟಿದವನು ಎಂದು ತಿಳಿದು 'ನಾ ಕೈ ಹಿಡಿದರೆ ನಿನ್ನೇ ಪಾರ್ವತಿ; ಇಲ್ಲದಿದ್ದರೆ ಇಲ್ಲ' ಎಂಬ ಮಾತು ಅವನಲ್ಲಿ ಛಲ, ಪ್ರತಿಭಟನೆಯನ್ನು ವ್ಯಕ್ತ ಪಡಿಸುವ ರೀತಿಯನ್ನು ಈ ಕಥೆಯಲ್ಲಿ ಚಿತ್ರಿಸಲಾಗಿದೆ.

೨. ಶ್ರೀಮಂತ-ಬಡವ ಆಧಾರಿತ ಶೋಷಣೆಯ ಕಥೆಗಳು:

ರಾಮಣ್ಣನವರು ಬರೆದಿರುವ ಬಹುತೇಕ ಕಥೆಗಳು ಗ್ರಾಮೀಣ ಸಮಾಜವನ್ನು ಕುರಿತದ್ದಾಗಿದೆ. ಈ ಗ್ರಾಮೀಣ ಸಮಜದಲ್ಲಿ ಬಡವ ಮತ್ತು ಶ್ರೀಮಂತ ಎಂಬ ಎರಡು ಪಂಗಡಗಳಿದ್ದು ಶ್ರೀಮಂತ ವರ್ಗದವರು ಬಡವರನ್ನು ಹಲವು ರೀತಿಯಲ್ಲಿ ಶೋಷಣೆಗೆ ಗುರಿಪಡಿಸುತ್ತಿರುವುದು ಅವರ ಕಥೆಗಳ ಮೂಲಕ ಸೂಕ್ಷ್ಮವಾಗಿ ಭಿತ್ತಿಯಾಗಿವೆ. ಗ್ರಾಮೀಣ ಬದುಕಿನ ದಿನನಿತ್ಯದ ಸುಖದುಃಖ, ಮನುಷ್ಯನ ಸಣ್ಣತನ, ಅಸೂಯೆ, ಕ್ರೌರ್ಯ, ಬಡವರ ನೋವು, ಹಸಿವು, ಸಂಕಟದ ಜೊತೆಗೆ ಶ್ರೀಮಂತರು ಮಾಡುವ ನವಿರಾದ ಶೋಷಣೆ, ದುಷ್ಟ ಶಕ್ತಿಗಳ ದಬ್ಬಾಳಿಕೆ, ಊಳಿಗಮಾನ್ಯ ಪದ್ಧತಿ ವ್ಯವಸ್ಥೆ ಹೀಗೆ ಹಲವು ವಸ್ತುಗಳನ್ನು ಆಧಾರವಾಗಿಟ್ಟುಕೊಂಡು ಈ ವರ್ಗೀಕರಣಕ್ಕೆ ಸಂಬಂಧಿಸಿದ ಕಥೆಗಳನ್ನು ಇಲ್ಲಿ ಗುರುತಿಸಲಾಗಿದೆ.

ಬಡವರ ಬದುಕು ತೀರ ಕೆಳಮಟ್ಟದ್ದಾಗಿದ್ದು ಶ್ರೀಮಂತರಿಂದ ಋಣಭಾರಕ್ಕೆ ಒಳಗಾಗುತ್ತಾರೆ. ಇಲ್ಲಿ ರಾಮಣ್ಣನವರ ಕಥೆಯಲ್ಲಿ ಬರುವ ಬಡವರು ಸಾಲದಲ್ಲಿ ಹುಟ್ಟಿ, ಸಾಲದಲ್ಲಿ ಬದುಕಿ, ಸಾಲದಲ್ಲೇ ಸಾಯುವುದು ಸಾಮಾನ್ಯ ಸಂಗತಿಯಾಗಿದೆ. 'ಸಾಲವನ್ನು ಕೊಂಬಾಗ ಹಾಲೋಗರುಂಡಂತೆ, ಸಾಲಿಗನು ಬಂದು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ' ಎಂಬ ಸರ್ವಜ್ಞನ ಮಾತು ಇಲ್ಲಿ ಅಕ್ಷರಶಃ ಸತ್ಯವಾಗಿದೆ. ಶ್ರೀಮಂತರು ಬಡವರಿಗೆ ಕಷ್ಟದಲ್ಲಿ ದುಡ್ಡು ನೀಡಿ ಅದಕ್ಕೆ ಹೆಚ್ಚಿನ ಬಡ್ಡಿ, ಚಕ್ರ ಬಡ್ಡಿ ವಸೂಲಿ ಮಾಡುವ, ಒಂದು ವೇಳೆ ಅವರಿಂದ ಕಟ್ಟಲು ಸಾಧ್ಯವಾಗದೇ ಹೋದರೆ ಅವರನ್ನು ಜೀತಕ್ಕಿಟ್ಟುಕೊಳ್ಳುವ ಅಥವಾ ಅವರ ಹೊಲ ಗದ್ದೆಗಳನ್ನು ವಶಪಡಿಸಿಕೊಳ್ಳುವ ಲೇವಾದೇವಿಗಾರರ ಕ್ರೌರ್ಯ ಪದ್ಧತಿಯ ವಿರುದ್ಧ ಗ್ರಾಮೀಣ ಜಮೀನ್ದಾರಿ ಶಕ್ತಿಗಳ ವಿರುದ್ಧ ಲೇಖಕರಾದ ರಾಮಣ್ಣನವರು ಪ್ರತಿಭಟನೆ ಮಾಡುವ ಮನೋಭಾವ ಉಳ್ಳವರೆಂಬುದು ಅವರ ಕಥೆಗಳ ಕಥಾಹಂದರದಲ್ಲೇ ತಿಳಿದುಬರುತ್ತದೆ.

ರಾಮಣ್ಣನವರ ಕಥೆಗಳಲ್ಲಿ ಒಂದು ತುತ್ತು ತಿನ್ನಲೂ ಅನ್ನವಿಲ್ಲದ ಜೀವನ ನಡೆಸುತ್ತಿರುವ ಜನಾಂಗವು ಶೋಚನೀಯ ಸ್ಥಿತಿಯಲ್ಲಿ ಕಂಡು ಬಂದರೆ ದರ್ಪ, ದೌರ್ಜನ್ಯ, ಅಹಂಕಾರದಿಂದ ಕೂಡಿದ ಮತ್ತೊಂದು ಜನಾಂಗದ ವ್ಯಕ್ತಿತ್ವದ ಕುರಿತು ಪರಿಚಯ ಮಾಡಿಕೊಡುತ್ತವೆ. ಶ್ರೀಮಂತರು ಕುತಂತ್ರದಿಂದ ಬಡವರನ್ನು ಬಡವರನ್ನಾಗಿಯೇ ಉಳಿಯುವಂತೆ ಮಾಡುವ ಉದ್ದೇಶವನ್ನು ಹೊಂದಿ ಅನ್ಯಾಯ ಮಾಡುವುದು, ಜೀತಕ್ಕಿರುವವರನ್ನು ನಡೆಸಿಕೊಳ್ಳುವ ಬಗೆ, ಹೀಗೆ ಶೋಷಣೆಯು ಅತಿಯಾದಾಗ ಅದನ್ನು ಸಹಿಸಲಾರದೆ ಸಿಡಿಸು ಬೀಳುವುದು ರಾಮಣ್ಣನವರ ಈ ಹಂತದ ಕಥೆಗಳಲ್ಲಿ ಹೆಚ್ಚು ಕಂಡುಬರುತ್ತದೆ. ಇಲ್ಲಿನ ಕಥೆಗಳಲ್ಲಿ ಸಾಮಾಜಿಕ ಬದಲಾವಣೆ ಎಂದರೆ ಶೋಷಿಸುವ ವ್ಯವಸ್ಥೆಯನ್ನು ಕಿತ್ತು ಹಾಕಿ ಶೋಷಣಾರಹಿತ ವ್ಯವಸ್ಥೆಯನ್ನು ಕಟ್ಟುವುದು. ಈ ಹೊಸ ವ್ಯವಸ್ಥೆಯಲ್ಲಿ ಮೇಲು-ಕೀಳು, ದಬ್ಬಾಳಿಕೆಗೆ ಅವಕಾಶವಿಲ್ಲದೆ ಮನುಷ್ಯತ್ವಕ್ಕೆ ಮಾತ್ರ ಬೆಲೆ ಎನ್ನುವಂತಹ ಕಥೆಯ ವಸ್ತುವಿನಲ್ಲಿ ಹೊಸತನವಿರುವುದು ಎದ್ದುಕಾಣುತ್ತದೆ.

ಶ್ರೀಮಂತರು ಬಡವರ ಮೇಲೆ ಯಾವುದೇ ಬಗೆಯ ಕರುಣೆ, ಅನುಕಂಪ, ಪ್ರೀತಿ, ವಾತ್ಸಲ್ಯದ ಭಾವನೆಯನ್ನು ತೋರದೆ ಅವರಿಂದಲೇ ಹೆಚ್ಚಿನ ಪ್ರತಿಫಲವನ್ನು ಪಡೆಯುತ್ತಾ ಹಲವು ರೀತಿಯಲ್ಲಿ ಶೋಷಣೆಗೊಳಪಡಿಸುವರು. ಈ ಬಗೆಯ ಶೋಷಣೆಗಳನ್ನೊಳಗೊಂಡ 'ಅವ್ವ', 'ಬೆಟ್ಟದ ಮೇಲೊಂದು ಮನೆಯ ಮಾಡಿ', 'ಜೀತ', 'ಜ್ವಾಲೆಯ ನಡುವೆ', 'ಕಕರನ ಯುಗಾದಿ', 'ಗಾಂಧಿ', 'ನೂರು ರೂಪಾಯಿ ನೋಟು' ಮುಂತಾದ ಕಥೆಗಳಲ್ಲಿ ದಲಿತರ ಬದುಕು ಮತ್ತು ಅವರ ನಾನಾ ಸಮಸ್ಯೆಗಳು ಚಿತ್ರಿತವಾಗಿವೆ. "ದಲಿತರ ಬದುಕನ್ನು ಕುರಿತು ಇಷ್ಟೊಂದು ಕಥೆಗಳನ್ನು ಬರೆದಿರುವ ದಲಿತೇತರ ಲೇಖಕರಿಲ್ಲ ಎನ್ನಬಹುದು. ಈ ಕಥೆಗಳಲ್ಲಿ

ದಲಿತ ಜೀವನ ಸಾಕಷ್ಟು ವಿವರ ವಿವರವಾಗಿ ವಿವಿಧ ಮಗ್ಗುಲುಗಳಿಂದ ರಾಗೋಜ್ವಲತೆಯಿಂದ ಕೃತಿಗೊಂಡಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ದಲಿತರ ಬದುಕು ಪರಿವರ್ತನೆಗೆ ಒಳಗಾಗಿರುವುದನ್ನು ಈ ಕಥೆಗಳು ದಾಖಲಿಸುತ್ತವೆ"[2] ಎಂಬ ಭಗವಾನ ಮಾತು ಅಕ್ಷರಸಃ ನಿಜವಾಗಿದೆ

'ಅವ್ವ' ಕಥೆಯಲ್ಲಿ ಶ್ರೀಮಂತ ವರ್ಗದವರ ದಬ್ಬಾಳಿಕೆ ವ್ಯಕ್ತವಾಗುತ್ತದೆ. ಸಮಾಜದಲ್ಲಿ ಬಡವರು ತಮ್ಮ ಕಷ್ಟವನ್ನು ಪರಿಹರಿಸಿಕೊಳ್ಳಲು ಶ್ರೀಮಂತರಿಂದ ಹಣವನ್ನು ಸಾಲವಾಗಿ ಪಡೆಯುವರು ಮತ್ತು ಪಡೆದ ಹಣಕ್ಕೆ ಹೆಚ್ಚಿನ ಬಡ್ಡಿಯನ್ನು ತೆರುವರು. ಈ ಬಗೆಯ ಶೋಷಣೆಯನ್ನೊಳ ಗೊಂಡಂತಹ ಕಥೆಯೇ ಈ ಅವ್ವ ಆಗಿದೆ. ಗಂಡನನ್ನು ಕಳೆದುಕೊಂಡಂತಹ ಬಡವಿ ಕೆಂಪಕ್ಕ ಕೂಲಿನಾಲಿ ಮಾಡಿ ಬದುಕುತ್ತಿದ್ದಳು ತನ್ನ ಸಂಸಾರದ ನಿರ್ವಹಣೆಗಾಗಿ ಸಾಹುಕಾರ ವೀರಭದ್ರಯ್ಯನ ಹತ್ತಿರ ಸಾಲ ಪಡೆಯುತ್ತಾಳೆ. ಸಾಲ ವಸೂಲಿಗೆ ಬಂದ ಸಾಹುಕಾರನಿಗೆ 'ಸ್ವಾಮಿ, ನಾನು ಬಡವಿ, ಜೊತೆಗೆ ಮುಂಡೆ, ಬಡ್ಡಿಯನ್ನು ಕೊಡಲಾರೆ ಆದರೆ ಅಸಲನ್ನು ಕೊಟ್ಟು ಬುಡ್ತೀನಿ' ಎಂದು ಗೋಗರೆದು ಸಾಲದ ಅಸಲು ಹಣವನ್ನು ಕೊಡುತ್ತಾಳೆ. ಅದಕ್ಕೆ ಸಾಹುಕಾರ ವೀರಭದ್ರಯ್ಯ ಬಡ್ಡಿ ಕೊಟ್ಟು ಕೊಡಬೇಕು. ಇಲ್ಲದೇ ಇದ್ರೆ ಬಡ್ಡಿ ಹಣಕ್ಕೆ ನಿನ್ನ ಮಗನ್ನ ಎರಡು ವರ್ಷ ನನ್ನ ಮನೇಲಿ ಜೀತಕ್ಕಿರಿಸು ಎಂದು ಗರ್ಜಿಸುತ್ತಾನೆ. ಇಲ್ಲಿ ಬಡವರ ದಾರಿದ್ರ್ಯವನ್ನು ಮುಂದಿಟ್ಟುಕೊಂಡು ಶ್ರೀಮಂತರು ತಮ್ಮ ಬೇಳೆಕಾಳುಗಳನ್ನು ಬೇಯಿಸಿಕೊಳ್ಳಲು ನೋಡುವರು.

ಇದಕ್ಕೂ ಮೊದಲು ಅವ್ವ ಕೆಂಪಕ್ಕ ಮತ್ತು ಮಗನ ನಡುವೆ ತಮ್ಮ ಬಡತನದ ಸಲುವಾಗಿ ಗೋವನ್ನು ಮಾರಬೇಕೆಂಬುದರ ವಿಷಯವಾಗಿ ಬಿರುಸಾದ ವಾಗ್ವಾದ ನಡೆದಿದ್ದವು. ಇದಕ್ಕೆ ಕಾರಣ ಅವರ ಹಿಂದಿರುವ ದಾರಿದ್ರ್ಯವಾಗಿದೆ. ಗೌಡರು ತನ್ನ ಮಗನನ್ನು ಜೀತಕ್ಕಿರಿಸು ಎಂಬ ಮಾತನ್ನು ಮುಗಿಸುವ ಮೊದಲೇ 'ಜೀತ' ಎಂಬ ಶಬ್ದ ಕಿವಿಗೆ ಬಿದ್ದೊಡನೆಯೇ ಕೆಂಪಕ್ಕ ಜೀತದ ವಿರುದ್ಧವೇ ಸಿಡಿದು ಬೀಳುವಂತೆ 'ಸ್ವಾಮಿ, ಇನ್ನೊಂದು ಸಾರಿ ಜೀತಕ್ಕೆ ನನ್ನ ಮಗನ ನಿಂನೇಲಿ ಇರ್‍ಸೊ ಅನ್ನೋ ವಾಕ್ಸು ನೀವು ಕಡೀಸಬ್ಯಾಡಿ, ನಾಳೆ ಬನ್ನೋಗಿ ನಿಂ ಬಡ್ಡಿ ಅದೇನು ಬಿಸಾಕ್ತೀನಿ ದೂಸ್ರ ಮಾತಾಡಬ್ಯಾಡಿ' ಎಂದು ಸಾಹುಕಾರ ಮುಟ್ಟಿ ನೋಡಿಕೊಳ್ಳುವ ಹಾಗೆ ಹೇಳುತ್ತಾಳೆ. ಇಲ್ಲಿ ಸಾಮಾನ್ಯ ಹೆಂಗಸೊಬ್ಬಳು ಸಾಹುಕಾರನ ಶೋಷಣೆಯ ವಿರುದ್ಧ ಸಿಡಿದು ಗರ್ಜಿಸುವುದು ಅರ್ಥಪೂರ್ಣವಾಗಿದೆ. ಇಂತಹ ಸಂಘರ್ಷ ಆಳುವವರ ಬಂಧನದಿಂದ ಬಿಡುಗಡೆ ಪಡೆಯುತ್ತಿರುವ ದಲಿತರ ಬದುಕು ಬದಲಾಗುತ್ತಿರುವುದರ ಸಂಕೇತವಾಗಿದೆ.

"ಬೆಟ್ಟದ ಮೇಲೊಂದು ಮನೆಯ ಮಾಡಿ" ಕಥೆಯ ಭೂಹೀನ ರೈತರನ್ನು ಕುಕ್ಕಿ ತಿನ್ನುತ್ತಿರುವ ಬಡತನ ಮತ್ತು ಭೂ ಒಡೆತನವುಳ್ಳ ಶ್ರೀಮಂತರ ದೌರ್ಜನ್ಯವನ್ನು ಚಿತ್ರಿಸುತ್ತದೆ. ಈ ಕಥೆಯಲ್ಲಿ

ಬರುವ ಬಡವ ಉರುಗಯ್ಯನ ಪಾತ್ರ ಚಿತ್ರಣವನ್ನು ಕಥೆಗಾರರು ಸೊಗಸಾಗಿ ಚಿತ್ರಿಸಿದ್ದಾರೆ. ಈ ಉರುಗಯ್ಯ ಸಾಹುಕಾರ ಹರಿಶ್ಚಂದ್ರಯ್ಯನ ಜಮೀನಿನ ಗೇಣಿದಾರರಲ್ಲಿ ಒಬ್ಬ ಗೇಣಿಗೆ ಪಡೆದುಕೊಂಡ ಭೂಮಿಯಲ್ಲಿ ತನ್ನ ಹೆಂಡತಿ, ಮಕ್ಕಳನ್ನು ಕೂಡಿಕೊಂಡು ಉರುಗಯ್ಯ ಸಾಕಷ್ಟು ಕಷ್ಟ ಪಟ್ಟು ದುಡಿದು ಅಷ್ಟೋ ಇಷ್ಟೋ ಭತ್ತ ಬೆಳೆದು ಸಾಹುಕರ ಹರಿಶ್ಚಂದ್ರಯ್ಯನಿಂದ ಗುತ್ತಿಗೆಯ ಪಾಲನ್ನು ತೆಗೆದುಕೊಳ್ಳುತ್ತಾನೆ. ಗುತ್ತಿಗೆಯಾಗಿ ಪಡೆದ ಭತ್ತ ತನ್ನ ಸಂಸಾರಕ್ಕೆ ಸಾಲದಾದಾಗ ಸಾಲವಾಗಿಯೂ ಪಡೆದುಕೊಳ್ಳುತ್ತಾನೆ. ಶ್ರೀಮಂತ ಹರಿಶ್ಚಂದ್ರಯ್ಯನ ಸೋದರ ಮಾವ ತೆಂಗಪ್ಪ ಒಂದಕ್ಕೆ ಎರಡು ಬರೆದು ಉರುಗಯ್ಯನ ಮೇಲೆ ಸಾಲದ ಹೊರೆ ಹೆಚ್ಚುವಂತೆ ನೋಡಿಕೊಳ್ಳುತ್ತಾನೆ. ಅಂದರೆ ಶ್ರೀಮಂತರು ತಮ್ಮ ಕುತಂತ್ರದಿಂದ ಬಡವರನ್ನು ಬಡವನ್ನಾಗಿಯೇ ಉಳಿಯುವಂತೆ ಮಾಡುವ ಉದ್ದೇಶವನ್ನು ಹೊಂದಿ ಅನ್ಯಾಯ, ಮೋಸವನ್ನು ಮಾಡುವರು.

ತೆಂಗಪ್ಪನು ಉರುಗಯ್ಯನು ಬೆಳೆದ ಸಂಪೂರ್ಣ ಬೆಳೆಯನ್ನು ಕಳೆದ ವರ್ಷದ ಬಾಕಿ ಎಂದು ವಶಪಡಿಸಿಕೊಂಡನು. ಆಗ ಬಡವ ಉರುಗಯ್ಯ ತನ್ನ ಸಂಸಾರದ ಗತಿಯೇನು ಎಂದು ತೆಂಗಪ್ಪನ ಕಾಲಿಗೆ ಬಿದ್ದು ಸ್ವಲ್ಪವಾದರೂ ಭತ್ತ ಕೊಡಿ ಸ್ವಾಮಿ ಎಂದು ಬೇಡಿಕೊಂಡನು. ತೆಂಗಪ್ಪ ತನ್ನ ಶ್ರೀಮಂತಿಕೆಯ ದರ್ಪದಿಂದ ಜಾಡಿಸಿ ಒದ್ದಾಗ ಮೂಗಿನಿಂದ ರಕ್ತ ಸುರಿಯುತ್ತದೆ. ಇದು ಉಳ್ಳವರು ದಲಿತರ ಮೇಲೆ ಮಾಡುವ ಶೋಷಣೆಯ ರೂಪವಾಗಿದೆ. ಇದನ್ನೆಲ್ಲಾ ನೋಡುತ್ತಾ ನಿಂತಿದ್ದ ಉರುಗಯ್ಯನ ಮಗ ಊರಯ್ಯ ತನ್ನ ತಂದೆಗಾದ ಅವಮಾನವನ್ನು ಸಹಿಸಲಾರದೆ ಗಾಡಿ ತಡಿಕೆ ದಬ್ಬೆಯಿಂದ ಚೆನ್ನಾಗಿ ತೆಂಗಪ್ಪನಿಗೆ ಥಳಿಸುತ್ತಾನೆ. ತೆಂಗಪ್ಪ ಮತ್ತು ಹರಿಶ್ಚಂದ್ರಯ್ಯನ ದರ್ಪ ಇನ್ನೂ ಮಿತಿ ಮೀರಿದಾಗ ಊರಯ್ಯ ತೆಂಗಪ್ಪನ ರುಂಡವನ್ನು ತನ್ನ ಮಚ್ಚಿನಿಂದ ಕೊಚ್ಚಿ ಹಾಕುತ್ತಾನೆ. ಹೀಗೆ ಶ್ರೀಮಂತ ವರ್ಗದವರು ಬಡವರನ್ನು ಶೋಷಣೆಗೊಳಪಡಿಸಿದಾಗ ಅವರ ರೋಷ ಇಮ್ಮಡಿಯಾಗುವುದನ್ನು ಈ ಕಥೆಯ ಮೂಲಕ ಕಥೆಗಾರರು ವ್ಯಕ್ತಪಡಿಸಿದ್ದಾರೆ.

'ಜೀತ' ಕಥೆಯು ಬಡವರನ್ನು ಜೀತದಾಳುಗಳಾಗಿ ಮಾಡಿಕೊಂಡು ಅವರನ್ನು ಹೊಡೆಯುವ ಸುಲಿಗೆ ಮಾಡುವ ಶ್ರೀಮಂತರ ದರ್ಪ, ದೌರ್ಜನ್ಯವನ್ನು ಚಿತ್ರಿಸುತ್ತದೆ. ಇಲ್ಲಿ ಬರುವ ಸಾಹುಕಾರ ದೇವೀರಯ್ಯ ತನ್ನ ಮನೆಯ ಜೀತದಾಳುವಾದ ಚಿಕ್ಕರಾಮನನ್ನು ಹಿಂಸಿಸುವ, ಶೋಷಿಸುವ ರೀತಿ ಮನುಷ್ಯತ್ವವೇ ಇಲ್ಲದ ಶ್ರೀಮಂತ ಮೃಗಗಳ ಬಣ್ಣವನ್ನು ಬಯಲು ಮಾಡುತ್ತದೆ. ಬೆಳಗಾಗುವುದಕ್ಕೆ ಮುಂಚೆಯೇ ಮೂವತ್ತು ಮಂಕರಿಯಷ್ಟು ಕಸಗುಡಿಸಿ ನಂತರ ಒಂದು ಚೀಲ ಹಸಿರು ಹುಲ್ಲನ್ನು ಕುಯ್ದು ಗಾಢ ನಿದ್ರೆ ಬಂತು. ಆಗ ದನಗಳು ಗದ್ದೆಗೆ ನುಗ್ಗಿದ್ದನ್ನು ಕಂಡ ದೇವಿರಯ್ಯ ಚಿಕ್ಕರಾಮನಿಗೆ ಸರ್ವೆ ಚಬ್ಬೆಯಿಂದ ಬಾರಿಸಿ' ಲೇ ಸೂಳೇಮಗನೇ ಇದ್ಕೆ

ಏನ್ಲ ನಿಂಗೆ ವರ್ಷಕ್ಕೆ ಅರವತ್ತು ರೂಪಾಯಿ ಕೊಟ್ಟು ಹಿಟ್ಟು ಬಟ್ಟೆ ಕೊಟ್ಟು ಜೀತಕ್ಕೆ ಮಡಿಕೊಂಡಿರೋದು' ಎಂದು ಕಿರುಚುತ್ತಾ ಕಬ್ಬಿನ ಗದ್ದೆಗೆ ಓಡಲು ಮುಂದಾದ ಚಿಕ್ಕರಾಮನನ್ನು ತರಲು ದಾಸನಿಗೆ ಆಜ್ಞೆ ಮಾಡಿದನು.

ಮತ್ತೊಬ್ಬ ಗೌಡನ ಮನೆಯಲ್ಲಿ ಜೀತಕ್ಕಿದ್ದ ಚಿಕ್ಕರಾಮನ ಅಣ್ಣ ಪುಟ್ಟಸ್ವಾಮಿಗೆ ವಿಷಯ ತಿಳಿದು ಓಡೋಡಿ ಬಂದು 'ಜೀತಕ್ಕೆ ಅವನ ಅಂತ ಕೊಂದುಬುಡಯ್ಯ, ನಿನಗೆ ಮಕ್ಕಳಿಲ' ಎನ್ನುತ್ತ ಹೊಡೆಯಲು ಎತ್ತಿದ ಕೈ ದೇವೀರಯ್ಯನ ಕೈಯನ್ನು ಹಿಡಿದುಕೊಂಡನು. ನೀನು ಕೊಟ್ಟಿರೋ ದುಡ್ಡಿಗೆ ಮೂರು ನಾವು ಹೋಗಯ್ಯ ದೇವೀರಯ್ಯ ಎಂದು ಪ್ರತಿಭಟಿಸುತ್ತಾನೆ. ಅಣ್ಣ ತಮ್ಮೂರಲ್ಲಿ ಸಾಹುಕಾರನ ಮನೆಯಲ್ಲಿ, ನಾನು ಚಿಕ್ಕರಾಮ ಇಲ್ಲಿ, ಇನ್ನೂಳಿದ ಮರಿ ಅಂಕ ಯಾವ ಊರಲ್ಲಿ ಯಾವ ಮನೇಲಿ ಜೀತ ಮಾಡಬೇಕೋ? ಎಂದು ತನ್ನ ಮನೆತನದ ಜೀತದ ಸಾಲನ್ನು ನೆನಸಿಕೊಳ್ಳುವಾಗ ಶ್ರೀಮಂತರು ಬಡವರನ್ನು ಇನ್ನಷ್ಟು ಶೋಷಣೆಗೆ ಒಳಪಡಿಸಿ ಜೀತದಾಳುಗಳನ್ನು ನಡೆಸಿಕೊಳ್ಳುವ ದುಷ್ಟ ಮಾರ್ಗ ಪುಟ್ಟಸ್ವಾಮಿಯ ಕಣ್ಣಿಗೆ ಕಟ್ಟಿದಂತೆ ಕಂಡಿತು.

'ಮರಕ್ಕೆ ಕಟ್ಟಿ ನೇಯ್ಸಿ, ಚರ್ಮ ಸುಲೀಸಿ ಕಣ್ಣಿಗೆ ಎಕ್ಕದ ಹಾಲು ಊಯ್ಸ್ತೀನಿ ಎಂದಾಗ ನನ್ನ ಹೆಣ್ಣಿಗ ಅಂತ ತಿಳ್ಕೊಂಡ ಎಂದು ತನ್ನ ನಡುವಿಗೆ ಸಿಕ್ಕಿಸಿದ್ದ ಮಚ್ಚನ್ನು ಇರಿದು ಮುನ್ನುಗಿದ್ದನ್ನು ಕಥೆಗಾರರು ಅವನ ವಿರುದ್ಧ ಆದ ಶೋಷಣೆಗೆ ರೋಷವನ್ನು ವ್ಯಕ್ತಪಡಿಸಿದ್ದಾರೆ.

ಕೊನೆಗೆ ತಮ್ಮೂರಿಗೆ ಹೋಗುವುದೆಂದು ನಿರ್ಧರಿಸಿದಾಗ ಅಲ್ಲಿನವರೂ ಸಹ ಮಳೆ ಬೆಳೆ ಇಲ್ಲದೆ ದನಕರುಗಳನ್ನು ಮಾರಿ ತಮ್ಮ ತಂದೆ ತಾಯಿಯರೂ ಇತ್ತಲೇ ಬರುತ್ತಿರುವುದನ್ನು ಕೇಳಿ ಜೀತ ಎಂಬುದು ಬೆಂಬಿಡದ ಭೂತ ಎಂದು ಬೆಪ್ಪಾಗಿ ಅವನ ಸುತ್ತಲಿದ್ದ ಕತ್ತಲೆಯೆಲ್ಲಾ ಘನೀಭೂತವಾಗಿ ಅವನನ್ನು ಅಪ್ಪಳಿಸಿದಂತಾಯಿತು.

ಒಂದೊತ್ತಿನ ತುತ್ತಿಗೂ ಗತಿ ಇಲ್ಲದೆ ಉಳ್ಳವರ ಮನೆಯ ಆಳಾಗಿ ದುಡಿಯುವ ಅಸಂಖ್ಯಾತ ಬಡವರ ಬದುಕನ್ನು ತೆರೆದಿಡುತ್ತದೆ. ಈ ಕಥೆಯಲ್ಲಿ ಚಿಕ್ಕರಾಮನ ತಾಯಿ ತನ್ನ ಗಂಡನನ್ನು ಕುರಿತು 'ನೀವೇನಾದ್ರೂ ಅನ್ನಿ, ಹಾಳು ಜೀತಕ್ಕೆ ಮಕ್ಕಳು ಇರಿಸೋದು ಅಂದ್ರ ನಂಗೆ ಸಂಕಟ, ಬೆಟ್ಟವೇ ಬಂದು ಎದೆ ಮೇಲೆ ಅದೀಕಂಡಾಗಾಯ್ತದೆ. ಹಾಳು ಜನ ಕಾಲದಿಂದಲೂ ನಮ್ಮ ಜೀತದ ಮನೆಯೋರು, ವಂಶದೋರು ಅಂತ್ಲೇ ಕರ್ಮ ರೂಢಿ, ಇನ್ನಾದ್ರೂ ಅದು ನಿಲ್ಲಲಿ' ಎಂದು ಹೇಳುವ ಮಾತುಗಳು ಅವರ ಮೇಲಾದ ಶೋಷಣೆಯಿಂದ ಮುಕ್ತವಾಗಲು ಹವಣಿಸುತ್ತಿರುವ ಧ್ವನಿಯನ್ನು ಸೂಚಿಸುತ್ತದೆ.

'ಜ್ವಾಲೆಯ ನಡುವೆ' ಕಥೆಯಲ್ಲಿ ಕಥೆಗಾರರು ತಾವು ಪ್ರಯಾಣ ಮಾಡುತ್ತಿರುವ ರೈಲಿನಲ್ಲಿ ಸಹ ಪ್ರಯಾಣಿಕರೊಂದಿಗೆ ನಡೆದು ಹೋಗಬಹುದಾದ ಅನೇಕ ವಿಚಾರಗಳನ್ನು ತೆರೆದಿಡುತ್ತಾರೆ.

ಲೋಕಾಭಿರಾಮದ ಮಾತುಗಳಲ್ಲೂ ದೇಶದ ಬಡತನ, ಸಮಸ್ಯೆ, ದಾರಿದ್ರ್ಯ, ಕೊಲೆ, ಸುಲಿಗೆ, ಲೂಟಿ, ಬೆಂಕಿ ಇಂತಹ ಹಲವು ದುಃಸ್ಥಿತಿಯ ಬಗ್ಗೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವರು. ಮನುಷ್ಯನ ಹೋರಾಟ ಅನ್ನಕ್ಕಾಗಿ ಮಾತ್ರ ಎಂಬ ಅಂಶವನ್ನು ತಾನು ನೋಡಿದ ಕಂಡ ಅನುಭವಗಳೊಂದಿಗೆ ಚಿತ್ರಿಸುತ್ತಾರೆ.

ಮನವನಾದವನು ಏನೇ ಕೆಲಸ ಮಾಡಿದರೂ ಸಹ ಅದು ಅವನ ಹೊಟ್ಟೆಗಾಗಿ ಎಂಬುದೇ ಆಗಿದೆ. ಹೊಟ್ಟೆಗಿಲ್ಲದವರ ಮೇಲೆ ನಡೆಯುವ ಶೋಷಣೆಯೇ ಅವರ ಈ ಬಗೆಯ ಕ್ರೌರ್ಯಕ್ಕೆ ಕಾರಣವೆಂಬುದನ್ನು ಕಥೆಗಾರರು ನಿರೂಪಿಸಿದ್ದಾರೆ. ರೈಲಿನ ಸಹಪ್ರಯಾಣಿಕ ಧ್ವನಿಗೂಡಿಸಿ ದೇಶದ ಹದಗೆಟ್ಟ ಆಡಳಿತ ವ್ಯವಸ್ಥೆ ವರ್ತಕರ ಶೋಷಣೆ, ದೇಶಪ್ರೇಮವಿಲ್ಲದವರ ಬಗ್ಗೆ ನಿರಾಸೆ ವ್ಯಕ್ತಪಡಿಸುತ್ತಾ, 'ಇವತ್ತಿನ ದಿನ ನಮ್ಮ ದೇಶದಲ್ಲಿ ಎಷ್ಟು ಜನ ಬದುಕಿದ್ದಾರೆ ನ್ಯಾಯವಾಗಿ ಎಲ್ಲಾ ಜೊಳ್ಳುಗಳು ಸಾರ್' ಎನ್ನುತ್ತಾನೆ. ಅಂದರೆ ಇಲ್ಲಿ ಶ್ರೀಮಂತ ವರ್ಗದವರು ಬಡವರನ್ನು ನೆಮ್ಮದಿಯಿಂದ ಬಾಳಲು ಬಿಡದೆ ಹಲವು ರೀತಿಯಲ್ಲಿ ಗೋಳು ಹೊಯ್ದುಕೊಳ್ಳುತ್ತಿದ್ದರು. ಹೀಗೆ ಶೋಷಣೆಗೆ ಒಳಗಾದ ವ್ಯಕ್ತಿ ಕರೀ ಆಸಾಮಿ ಜೀವನವೇ ಬೇಸರವಾದಂತೆ ಅಸಮಾಧಾನ ವ್ಯಕ್ತಪಡಿಸುತ್ತಾನೆ. ಇಲ್ಲಿ ಕಥೆಯ ಶೀರ್ಷಿಕೆಯಲ್ಲಿ ಇರುವಂತೆ ದೇಶವು ಬಡತನ, ಅಜ್ಞಾನದಿಂದ ಬೆಂಕಿಯಲ್ಲಿ ಬಿದ್ದು ಒದ್ದಾಡುತ್ತಿದೆ ಎಂಬುದನ್ನು ಕಥೆಗಾರರು ಸಾಂಕೇತಿಕ ಅರ್ಥವನ್ನು ನೀಡಿದ್ದಾರೆ. ಬದುಕುತ್ತಿರುವ ಅನೇಕರು ಮೇಲ್ನೋಟಕ್ಕೆ ಸಂತೋಷವಾಗಿರುವವರಂತೆ ಕಂಡರೂ ತಮ್ಮ ವೈಯಕ್ತಿಕ ಬದುಕಿನಲ್ಲಿ ಒಂದಲ್ಲ ಒಂದು ಚಿಂತೆಯಿಂದ ಸಮಸ್ಯೆಗೆ ಗುರಿಯಾಗಿರುತ್ತಾರೆ. ಇಲ್ಲಿ ದುಷ್ಟ ಶಕ್ತಿಗಳ ದಬ್ಬಾಳಿಕೆ, ಶೋಷಣೆ, ಬಡತನ, ಊಳಿಗಮಾನ್ಯ ಪದ್ಧತಿಯ ವ್ಯವಸ್ಥೆ-ಮುಂತಾದ ವಿಚಾರಗಳು ಮನಸ್ಸಿಗೆ ನಾಟುವಂತಿದೆ ಒಟ್ಟಿನಲ್ಲಿ ರಾಮಣ್ಣನವರು ತಮ್ಮ ಸುತ್ತಣ ನಡೆಯುವ ವ್ಯಾಪಾರವನ್ನು ತೆರೆದ ಮನಸ್ಸಿನಿಂದ ನೋಡಿದ್ದಾರೆ.

'ಕಕರನ ಯುಗಾದಿ' ಕಥೆಯು ದಲಿತ ಕಕರನ ಬಡತನದ ಬದುಕನ್ನು ಚಿತ್ರಿಸಿರುವ ಒಂದು ಉತ್ತಮ ಕಥೆಯಾಗಿದೆ. ಬಡತನದ ಬೇರೆಯಲ್ಲಿ ಬೇಯುತ್ತಿರುವ ಕಕರನ್ನು ತನ್ನ ಹೆಂಡತಿ ಮತ್ತು ಮಕ್ಕಳಿಗೆ ಒಂದು ತುತ್ತು ಕೂಳಿಗೂ ಗತಿ ಇಲ್ಲದೆ ಇರುವ ಸ್ಥಿತಿಯಲ್ಲಿ ಜೀವನವನ್ನು ಸಾಗಿಸುತ್ತಿರುವನು. ವರ್ಷಕ್ಕೊಮ್ಮೆ ಬರುವ ಯುಗಾದಿ ಹಬ್ಬವನ್ನು ಆಚರಿಸಲೂ ಅವನಲ್ಲಿ ಹಣವಿಲ್ಲ ಮುರುಟಿ ಹೋಗಿರುವ ದಾರಿದ್ರ್ಯದಲ್ಲೂ ಸ್ವಾಭಿಮಾನವನ್ನು ಎತ್ತಿ ನಿಲ್ಲಿಸಲು ಹಂಬಲಿಸುವ ಕಕರನ ಹೆಂಡತಿ ಚೆನ್ನಿಯ ಕೋರಿಕೆ ಕಕರನ ಜೊತೆಯಲ್ಲಿದೆ.

'ನಾಳಾಕೆ ಉಗಾದಿಹಬ್ಬ ಹೈಕ್ಳು ಅವರಿವ್ರ ಕೈಬಾಯಿ ನೋಡ್ತಾ ನಿಂತ್ಕತನೆ' ಎಂದು ಸಾಲ ತರುವುದಕ್ಕಾಗಿ ಊರೆಲ್ಲ ತಡಕಾಡುತ್ತಿದ್ದಾನೆ. ಕೊನೆಪಕ್ಷ ತನ್ನ ಕೊನೆಯವನಾದ ದೇವರಸನನ್ನು

ಜೀತಕ್ಕಾದರೂ ಇಟ್ಟು ಸಾಲ ತಂದು ಹಬ್ಬ ಮಾಡುವ ಹವಣಿಕೆಯಲ್ಲಿದ್ದಾನೆ. ದಮ್ಮುಕೆಮ್ಮು ಸೂಲಿನಿಂದ ನರಳುವ ಹೆಂಡತಿ, ಗಂಡನ ಬಿಟ್ಟು ತವರು ಮನೆಗೆ ಮಗಳು ಬಂದಿದ್ದಾಳೆ. ಕಕರ ಊರೆಲ್ಲಾ ತಿರುಗಿದರೂ ಸಾಲ ಹುಟ್ಟುವುದಿಲ್ಲ. ಆದ್ದರಿಂದಲೇ ಕಕರ ಮನುಷ್ಯ ಜಾತಿಯ ಈ ದಾರಿದ್ರ್ಯ ಬದುಕನ್ನು ಬೇಸರದಿಂದ ಕಂಡು 'ಹಾಳು ಮನುಷ್ಯ ಜನ್ಮ ಎತ್ತದೆ ಕುರಿಯೋ, ಆಡೋ, ಕೋಳಿಯೋ ಆಗಿ ಹುಟ್ಟಿದ್ದರೆ ಅಥವಾ ಹಾರಾಡುವ ಹಕ್ಕಿಯಾಗಿ ಹುಟ್ಟಿದ್ದರೆ ಚೆನ್ನಾಗಿರುತ್ತಿತ್ತು' ಎಂಬುದು ಕಕರನ ಚಿಂತನೆಯಾಗಿದೆ.

ತನ್ನ ದಾರಿದ್ರ್ಯವನ್ನು ದೂರ ಮಾಡಿಕೊಳ್ಳಲು ಹಾಗೂ ಯುಗಾದಿ ಹಬ್ಬದ ಖರ್ಚಿಗಾಗಿ ಜೋಯಿಸರ ಬಳಿ ಹೋಗಿ ಸಾಲ ಕೇಳಿದಾಗ ಅವನು ತನ್ನ ಸ್ವಾರ್ಥ ಸಾಧನೆಗಾಗಿ ಅವನನ್ನು ಬಳಸಿಕೊಂಡನು. ಆದರೂ ಅವನಿಗೆ ಆರ್ಥಿಕ ಸಹಾಯ ಮಾಡದೆ ಅವನನ್ನು ಶೋಷಣೆಗೆ ಒಳಪಡಿಸಲಾಯಿತು. ಕೊನೆಗೆ ಸಾಲ ಕೇಳಲು ಬಂದ ಕಕಂರನು ಜೋಯಿಸರ ಹೆಂಡತಿಯನ್ನು ಬಾವಿಯಿಂದ ತೆಗೆಯಲು ಹೋಗಿ ನೀರು ಪಾಲಾಗುತ್ತಾನೆ. ಈ ರೀತಿ ದುರಂತದ ಸಾವಿನಲ್ಲಿ ಮುಕ್ತಾಯಗೊಂಡ ಈ ಕಥೆಯಲ್ಲಿ ಕಕರನನ್ನು ದಾರಿದ್ರ್ಯದ ಹಿನ್ನಲೆಯ ಆರ್ಥಿಕ ಶೋಷಣೆಗೊಳಪಡಿಸಿ ಕಥೆಯನ್ನು ರಾಮಣ್ಣನವರು ಸೊಗಸಾಗಿ ಹೆಣೆದಿದ್ದಾರೆ.

ಇನ್ನು ಇವರ 'ಗಾಂಧಿ' ಕಥೆಯಂತೂ ಮುಕ್ಕಾಲು ಪಾಲು ನನ್ನೆದುರೇ ನಡೆದದ್ದು ಎಂದು ಕಥೆಗಾಗರೇ ಹೇಳಿಕೊಂಡಿದ್ದಾರೆ ಈ ಕಥೆಯನ್ನು ಮೈಸೂರಿನ 'ಆಂದೋಲನ' ಪತ್ರಿಕೆಯು ಆ ಆಪತ್ಕಾಲಿನ ಸಮಯದಲ್ಲಿ ಪ್ರಕಟಿಸಿತ್ತು. ಇದು ಆಂದೋಲನಕ್ಕಾಗಿ ಬರೆದ ಕಥೆಯೇ ಆಗಿದೆ. ಈ ಕಥೆಯನ್ನು ಕುರಿತು ಚಂದ್ರಶೇಖರ ಪಾಟೀಲರು 'ಎಂತಹ ಉತ್ತಮ ಕಥೆ ಬರೆದಿದ್ದೀರಿ ರಾಮಣ್ಣ' ಎಂದು ಮೆಚ್ಚಿಗೆ ವ್ಯಕ್ತಪಡಿಸಿ ಇಂಗ್ಲೀಷಿಗೆ ತರ್ಜಿಮೆ ಮಾಡಿದ್ದಾರೆ. ಇದನ್ನು 'ಡೆಕ್ಕನ್ ಹೆರಾಲ್ಡ್'ನಲ್ಲಿ 'ನ್ಯೂ ಟ್ರೆಂಡ್ಸ್ ಇನ್ ಕನ್ನಡ ಲಿಟರೇಚರ್' ಎಂಬ ಮಾಲಿಕೆಯನ್ನು ಸಂಪಾದಿಸಿ ಪ್ರಕಟಿಸಿದ ಡಿ.ಆರ್. ನಾಗರಾಜ್ ಇಂಗ್ಲೀಷ್ ಬಲ್ಲವರಿಗೆ ಪರಿಚಯಿಸಿ ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ. 1974ರಲ್ಲಿ ಕೊಡಿಯಾಲ ಪ್ರಾಥಮಿಕ ಕೇಂದ್ರದಲ್ಲಿ ನಡೆದ ನಿಜ ಘಟನಯನ್ನಿಟ್ಟು ಕೊಂಡು ಕಥೆಗಾರರು ಈ ಕಥೆಯನ್ನು ಬರೆದಿದ್ದಾರೆ

ಈ ಕಥೆಯಲ್ಲಿ ಬರುವ 'ಗಾಂಧಿ' ಎಂಬ ಬಡ ಹುಡುಗನ ಸಾವು ಗಾಂಧೀಜಿಯ ಎರಡನೆಯ ಸಾವು ಎಂಬಂತೆ ಧ್ವನಿ ಹೊಮ್ಮಿಸುತ್ತದೆ. ಆದರೆ ಹುಡುಗನ ಸಾವಿಗೆ ಅವನ ಸುತ್ತಲಿನ ಪರಿಸರ ವ್ಯವಸ್ಥೆ ಕಾರಣವಾಗುವುದರ ಬದಲು ಕುಟುಂಬದ ಮುಗ್ದತೆ ಹಾಗೂ ಬಡತನವೇ ಕಾರಣವಾಗಿರುವಂತೆ ಕಥೆಯ ಅಂತ್ಯ ಸೂಚಿಸುತ್ತದೆ. ಮಹಾತ್ಮ ಗಾಂಧೀಜಿಯ ಹೆಸರು ಹೊಂದಿದ ಹಳ್ಳಿಯ ರೋಗಗ್ರಸ್ತ ಬಡ ಹುಡುಗನೊಬ್ಬ ಆ ಹೆಸರಿನಿಂದಲೇ ವ್ಯಂಗ್ಯದ ವಸ್ತುವಾಗುವುದು ಕಥೆಯ ಮುಖ್ಯ ಧಾಟಿಯಾಗಿದೆ.

ಆಸ್ಪತ್ರೆಯಲ್ಲಿ ಬಡವರಾದ್ದರಿಂದ ಇವರನ್ನು ಗಮನಿಸದೇ ಇದ್ದುದು ಕಂಡು ಮಗ 'ನಾನು ಇದ್ದರೆಷ್ಟು ಸತ್ತರೆಷ್ಟು ನಡಿಯವ್ವಾ ಹೋಗುವ ಊರಿಗೆ, ಇದ್ದು ನಾನು ಯಾವ ರಾಜ್ಯ ಆಳಬೇಕು' ಎಂದು ಹೇಳುವಲ್ಲಿ ಅವನ ಬಡತನದ ಅಸಹಾಯಕತೆಯನ್ನು ಎತ್ತಿತೋರಿಸುತ್ತದೆ. ತನಗಿರುವ ಕಾಯಿಲೆ ಹೃದಯ ಮತ್ತು ಮೂತ್ರ ಪಿಂಡಕ್ಕೆ ಸಂಬಂಧಿಸಿದ್ದು ಅದಕ್ಕಾಗಿ ಅವರು ದೊಡ್ಡಾಸ್ಪತ್ರೆಗೆ ಹೋಗಲು ಸೂಚಿಸುವರು. ತಂದೆ ಇಲ್ಲದ ಕಿತ್ತು ತಿನ್ನುವ ಬಡತನದಲ್ಲಿ ಹೇಗೆ ದೊಡ್ಡಾಸ್ಪತ್ರೆಗೆ ತೋರಿಸುವುದು ಎನ್ನುವಾಗ ಗಾಂಧಿಯ ತಾತ ಕುರಿಸಿದ್ದೇಗೌಡ ಹಣಕ್ಕಾಗಿ ಬಹಳ ಕಷ್ಟಪಡುತ್ತಾನೆ ಆದರೂ ಒಂದು ಪೈಸೆ ಹುಟ್ಟುವುದಿಲ್ಲ.

ಕೊನೆಗೆ ತನ್ನ ಮಗಳ ಹಾಗೂ ಮೊಮ್ಮಗಳ ಓಲೆಗಳನ್ನು ಗಿರಿವಿ ಇಡಲು ಪ್ರಯತ್ನಿಸುವನು. ಕೊನೆಗೆ ಹಣ ತೆಗೆದುಕೊಂಡು ಹೋಗುವುದರೊಳಗೆ ಗಾಂಧಿ ಸತ್ತಿರುತ್ತಾನೆ. ಗಾಂಧಿಯ ಸಾವಿಗೆ ಅವನ ಬಡತನ ಮತ್ತು ಅಜ್ಞಾನವೇ ಕಾರಣ ಎಂದು ಕಥೆಗಾರರು ಬಿಂಬಿಸಿರುವರಾದರೂ ಸಹ ಶ್ರೀಮಂತ ವರ್ಗದವರು ಅವರ ಮೇಲೆ ಮಾಡುವ ಶೋಷಣೆ, ಅವರ ಕಷ್ಟಕ್ಕೆ ನೆರವಾಗದ ಶ್ರೀಮಂತ ವರ್ಗದವರ ಕ್ರೂರ ವರ್ತನೆಯನ್ನು ಸೂಕ್ಷ್ಮವಾಗಿ ಈ ಕಥೆಯಲ್ಲಿ ವಿವರಿಸಿದ್ದಾರೆ.

'ನೂರು ರೂಪಾಯಿ ನೋಟು' ಕಥೆಯಲ್ಲಿ ಬರುವ ನಿಂಗಮ್ಮ ಕೂಳನೆರೆಯ ಬಡ ಕುಟುಂಬದಲ್ಲಿ ಹುಟ್ಟಿ ಬೆಳೆದವಳು. ತನ್ನ ಬಾಳಿನಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಿದವಳು. ಆಕೆಯು ಗಂಡನನ್ನು ಕಳೆದುಕೊಂಡ ಮೇಲಂತೂ ತುತ್ತು ಅನ್ನಕ್ಕೂಗತಿ ಇಲ್ಲದೆ ಪರಿಸ್ಥಿತಿಯುಂಟಾಗಿ ಕೂಲಿ ಮಾಡುತ್ತಾ ಅವರಿವರ ಕಾಲಿಗೆ ಬಿದ್ದು ಮಗನನ್ನು ಓದಿಸಿ ಡಾಕ್ಟರ್ ಮಾಡಿಸುತ್ತಾಳೆ. ಹೀಗೆ ಡಾಕ್ಟರ್ ಮಾಡಿಸಲು ನಿಂಗಮ್ಮ ಅನೇಕ ಶೋಷಣೆಗಳಿಗೆ ಒಳಗಾಗಿರುವುದು ಕಂಡು ಬರುತ್ತದೆ. ಒಮ್ಮೆ ನಿಂಗಮ್ಮ ಮಗನ ಫೀ ಕಟ್ಟಲು ಬೇರೆಯವರ ಹತ್ತಿರ ಹೋಗಿ ಹಣ ತಂದು ಓದಿಸಿದ್ದು ವ್ಯರ್ಥವಾಗುವಂತೆ ಅವಳ ಮಗ ತಾನು ಬೆಳೆದು ಬಂದ ಬಡತನದ ಹಿನ್ನಲೆಯನ್ನು ಮರೆತು ಬಡವರ ರಕ್ತ ಹೀರಿ ಹಣ ಸಂಪಾದನೆ ಮಾಡುವುದು, ಅವನ ತಾಯಿಯ ಕನಸು ನುಚ್ಚು ನೂರು ಮಾಡಿದಂತಾಗುತ್ತದೆ. ಅಪ್ಪನ ಅನ್ಯಾಯದ ಆಸ್ತಿಗಳಿಕೆ ಮಗನಿಗೆ ಹೇಸಿಗೆ ಹುಟ್ಟಿಸುತ್ತದೆ. ರವಿಕಾಂತೇ ಗೌಡ ತನ್ನ ಅಪ್ಪನ ಲಂಚದ ಹಣದಿಂದ ಸಮಾಜ ಸೇವೆಗೆ ಮುಂದಾಗುವನು. ಆದರೂ ಬಡವರ ಬೆಂಕಿಯ ಬೆವರಿನಂತಿದ್ದ ನೂರು ರೂಪಾಯಿ ನೋಟು ಅಣಕಿಸುತ್ತದೆ. ಇಲ್ಲಿ ಕಥೆಗಾರರು ಬಡವನಾಗಿದ್ದವ ಶ್ರೀವಂತನಾದೊಡನೆ ಹೇಗೆ ತನ್ನ ಹಿಂದಿನ ಸ್ಥಿತಿಯನ್ನು ಮರೆತು ಶೋಷಣೆ ಮಾಡುವವನು ಎಂಬುದನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

೩. ಲಿಂಗ ಆಧಾರಿತ ಶೋಷಣೆಯ ಕಥೆಗಳು

ಬೆಸಗರಹಳ್ಳಿ ರಾಮಣ್ಣನವರ ಕಥೆಗಳಲ್ಲಿ ಲಿಂಗ ಆಧಾರಿತ ಶೋಷಣೆ ಎಂದು ವರ್ಗೀಕರಿಸಲಾಗಿದೆ. ಇಲ್ಲಿ ಹೆಣ್ಣು ಗಂಡಿನಿಂದ ಅನುಭವಿಸುವ ಶೋಷಣೆಗಳು ಹಾಗೂ ಆಕೆಗೆ

ಅದಂತಹ ಅನ್ಯಾಯ, ದುರಂತಗಳನ್ನು ಸೂಕ್ಷ್ಮವಾಗಿ ಚಿತ್ರಿಸಲಾಗಿದೆ. ಅವರ 'ಬೇಲ', 'ನೆರಳುಗಳು', 'ಕಳೆ', 'ಸೋಲು', 'ಗಂಗಾ', 'ಮಾನಭಂಗ', 'ಜಾಡಮಾಲೆ', 'ಶೂಲ' ಇತ್ಯಾದಿ ಕಥೆಗಳಲ್ಲಿ ಮಹಿಳಾ ಶೋಷಣೆಗಳನ್ನು ದಾಖಲಿಸಿದ್ದಾರೆ.

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರವೂ ಮಹಿಳೆಯರ ಸ್ಥಿತಿಗತಿಗಳು, ಸ್ಥಾನಮಾನಗಳಲ್ಲಿ ಯಾವುದೇ ಬದಲಾವಣೆಯಾಗದೆ ಕೇವಲ ಗಂಡಸಿನ ಹಿತಕ್ಕಾಗಿ ದುಡಿಯುವಂತಹ ದುಃಸ್ಥಿತಿಯ ಕುರಿತು, ಮಹಿಳೆಯರನ್ನು ಸಂಸಾರದಿಂದಾಚೆಗೆ ಕುರಿತು ಯೋಚಿಸುವುದು ಸಾಧ್ಯವಾಗದೆ ಅವಳದೇ ಆದ ವರ್ತುಲದೊಳಗೆ ಬಂಧಿಸಿಡುವ ಕ್ರೌರ್ಯವನ್ನು ಕಥೆಗಾರರು ಯಥಾವತ್ತಾಗಿ ತರುವಲ್ಲಿ ಯಶಸ್ವಿಯಾಗಿದ್ದಾರೆ.

ಮಹಿಳೆಯರನ್ನು ಹಲವಾರು ದುಷ್ಟಪದ್ಧತಿಗಳಿಗೆ ಒಳಪಡಿಸಿ ದೇವದಾಸಿ, ಬಾಲ್ಯವಿಹಾಹ, ಸತಿ ಪದ್ಧತಿ, ವೇಶ್ಯಾ ಪದ್ದತಿಗಳಿಂದಾಗಿ ಅವರು ತಲೆ ಎತ್ತದಂತೆ ಮಾಡಲಾಗಿದೆ. ಇಲ್ಲಿ ಗಂಡಸು ತನ್ನ ಕಾಮನೆಗಳನ್ನು ಈಡೇರಿಸಿಕೊಳ್ಳಲು ದಲಿತರ ವರ್ಗದ ಹೆಣ್ಣು ಮಕ್ಕಳನ್ನು ಬಳಸಿಕೊಳ್ಳುವುದು ಅಮಾನವೀಯ ಸಂಗತಿಯಾಗಿದೆ. ಅನಾಥ ಮಹಿಳೆಯರನ್ನು ಕೆಟ್ಟ ದೃಷ್ಟಿಯಿಂದ ನೋಡಿ ಅವರನ್ನು ಹಾಳು ಮಾಡಿ ಬಸರು ಮಾಡುವುದು ಕೊನೆಗೆ ಕೊಲೆ ಮಾಡುವಂತಹ ಕೀಳು ಮಟ್ಟಕ್ಕೆ ಗಂಡಸು ಜಾತಿ ಇಳಿಯುತ್ತದೆ ಎಂಬುದನ್ನು ರಾಮಣ್ಣನವರು ಹೆಚ್ಚು ಪ್ರತಿಧ್ವನಿಸುತ್ತ ಅಂತಹ ಕೆಟ್ಟ ಪುರುಷರ ವಿರುದ್ಧ ಬಂಡೆದ್ದು ನಿಲ್ಲುತ್ತಾರೆ. ಹಾಗೂ ಹೆಣ್ಣಿಗೆ ಆದ ಅನ್ಯಾಯದ ಕುರಿತು ಕಥೆಗಾರರು ಮರುಗುವುದು ಕಥೆಯಲ್ಲಿ ತಿಳಿಯುತ್ತದೆ. "ಇವರ ಕಥೆಗಳಲ್ಲಿ ಹೆಣ್ಣು ಗಂಡಿನ ಸಂಬಂಧ ಕೇವಲ ಸಂಬಂಧವಾಗಿ ಬರದ ಕಥೆಯ ಮೈಗೆ ಅಂಟಿಕೊಂಡು ಬರುವುದು ಗಮನಾರ್ಹ. ಹೆಣ್ಣು ಎಂದ ಕೂಡಲೇ ಹಸಿಹಸಿಯಾದ ವರ್ಣನೆಗಳಿಂದ ತಮ್ಮ ಅಂತರಂಗದ ಚಪಲವನ್ನು ಆ ಮೂಲಕ ತೀರಿಸಿಕೊಳ್ಳುವ ಚಟ ಬೆಸಗರಹಳ್ಳಿಯವರಿಗಿಲ್ಲ. ಹೆಣ್ಣು ಇವರಲ್ಲೆ ಜೀವನದ ಸೋಲಿಗೆ ಕಾರಣವಾಗಿ, ದುರಂತಕ್ಕೆ ದಾರಿಯಾಗಿ ಮೈದೋರಿದ್ದಾಳೆ. ಹಾಗೂ ಗರ್ಜಿಸುವ ಸಿಂಹನಾಗಿ, ಗರ್ಜನೆಗೆ ಉದ್ದೀಪನದಾರಿಯಾಗಿ, ಜೀವನದ ಚೈತನ್ಯದಾರಿಯಾಗಿ ನಿಂತಿದ್ದಾಳೆ."[1] ಎಂಬ ಶಿವರಾಮು ಕಾಡನಕುಪ್ಪೆ ಅವರ ಮಾತುಗಳು ಮೇಲಿನ ಮಾತುಗಳಿಗೆ ಪೂರಕವಾಗಿವೆ.

'ಯತ್ರನಾರ್ಯಸ್ತು ಪೂಜ್ಯತೇ ರಮಂತೇ ತತ್ರಾ ದೇವತಾ' ಎಂದು ಮನು ಹೇಳಿದ್ದಾನೆ. ಯಾವುದೇ ಒಂದು ಸಮಾಜದ ಸಂಸ್ಕೃತಿ ನಾಗರೀಕತೆಗಳ ಮಟ್ಟವನ್ನು ಆ ಸಮಾಜದಲ್ಲಿ ಸ್ತ್ರೀಯರಿಗೆ ದೊರೆತಿರುವ ಸ್ಥಾನಮಾನಗಳ ಮೇರೆಗೆ ಅಳೆಯುತ್ತಾರೆ. ಜಗತ್ತಿನ ಸಂಸ್ಕೃತಿಗಳ ಇತಿಹಾಸದಲ್ಲಿ ಒಮ್ಮೆ ಸ್ತ್ರೀ ದೇವತೆಯಾಗಿ ತೋರಿದಳು ಮತ್ತೊಮ್ಮೆ ಗುಲಾಮಳಾಗಿ ಕಂಡಳು.

ಆದರೆ ಮಾನವಳಾಗಿ ಅವಳ ವ್ಯಕ್ತಿತ್ವ ತೋರಿಬರುವುದು ಅಪರೂಪವಾಗಿದೆ. ಯಾವುದೇ ಬಗೆಯ ಸ್ವಾತಂತ್ರ್ಯವನ್ನು ಹೆಣ್ಣಿಗೆ ನೀಡದಿರುವುದು, ಗಂಡು ಹೇಳಿದಂತೆ ಕೇಳಿ ಆಜ್ಞಾ ಪಾಲಕಳಾಗಿ ಮಕ್ಕಳು, ಮನೆ ಸಂಸಾರವೆಂದು 'ಗೂಟಕ್ಕೆ ಕಟ್ಟಿದ ಹಸುವಿನ ಹಾಗೆ' ಜೀವನ ನಡೆಸುವುದು, ಸ್ತ್ರೀ ಮತ್ತು ಪುರುಷರು ಒಂದೇ ನಾಣ್ಯದದ ಎರಡು ಮುಖಗಳು ಎಂದು ಹೇಳಬಹುದಾದರೂ ಸಮಾಜದಲ್ಲಿ ಮಹಿಳೆಯರಿಗೆ ಕೊಡುವ ಸ್ಥಾನ ಬೇರೆಯಾಗಿದೆ, ಅವಳನ್ನು ನೋಡುವ ದೃಷ್ಟಿಯೇ ಬೇರೆಯಾಗಿದೆ. ಹೀಗೆ ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯ ಅನ್ಯಾಯ, ಅತ್ಯಾಚಾರ, ಹಿಂಸೆ ಇತ್ಯಾದಿಗಳ ಕುರಿತಂತೆ ರಾಮಣ್ಣನವರು ಈ ಹಂತದ ಕೆಲವು ಕಥೆಗಳನ್ನು ಚಿತ್ರಿಸಿದ್ದಾರೆ.

'ಬೇಲ' ಕಥೆಯೂ ಕೂಡ ಮೇಲ್ಮಟ್ಟದಲ್ಲಿ ನಡೆಯುವ ವೇಶ್ಯಾವೃತ್ತಿಯ ನವಿರಾದ ಕ್ರೌರ್ಯವನ್ನು ದಾಖಲಿಸುತ್ತದೆ. ಹಾಗೂ ಮಹಿಳೆಯರ ಮೇಲೆ ಆಗುವ ಶೋಷಣೆಯ ಚಿತ್ರಣವನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಬೇಲ ಕಥೆಯಲ್ಲಿ ಆಕಸ್ಮಿಕವಾಗಿ ಕೇಳಿದ ಆಕೆಯ ಪರಿಚಯ ಗಾಢ ಸ್ನೇಹವಾಗಿ, ಕಾಡುವ ಪ್ರೇಮವಾಗಿ ಬೆಳೆಯುವ ಕ್ರಿಯೆ ಈ ಕಥೆಯ ವಿಶೇಷ ಎನ್ನಬಹುದು. ಇಲ್ಲಿಯ ಶೃಂಗಾರದ ವರ್ಣನೆ, ಅದರ ನಿರ್ವಹಣೆ ಅಶ್ಲೀಲದ ಗೆರೆ ತಾಕದೆ ಮಧುರವಾಗಿದೆ. ಡಾಕ್ಟರು ಸಣ್ಣತನವನ್ನು ತೋರಿಸುತ್ತಲೇ ಬೇಲಾಳ ಸುಸಂಸ್ಕೃತ ಮನಸ್ಸನ್ನು ಬಿಡಿಸುವ ಕಥೆಗಾರರ ತಂತ್ರಗಾರಿಕೆ ಆಕರ್ಷಕವಾಗಿದೆ. ಸಿಡುಬು ರೋಗದಂತೆ ವೇಶ್ಯಾ ಸಮಸ್ಯೆಯೂ ಒಂದು ಸಾಮಾಜಿಕವಾದ ಸಾಂಕ್ರಾಮಿಕ ರೋಗ ಎಂಬುದರ ಧ್ವನಿ ಈ ಕಥೆಯಲ್ಲಿದೆ ಸಿಡುಬು ರೋಗ ನಿರ್ಮೂಲನದ ಕಾರ್ಯದ ನಿಮಿತ್ತ ಕರ್ತವ್ಯದ ಮೇಲೆ ಹೋದ ಡಾಕ್ಟರು ಅರ್ಥಾತ್ ಕಥೆಗಾರರು ಬೇಲಳ ಬದುಕಿನಲ್ಲಿ ಕಂಡ ವೇಶ್ಯಾವೃತ್ತಿಯ ಮಗ್ಗುಲನ್ನು ಸೊಗಲಾಗಿ ನಿರೂಪಿಸಿದ್ದಾರೆ.

"1974ರಲ್ಲಿ ಬಿಹಾರದ ಬಾಗಲ್ಪುರ ಜಿಲ್ಲೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಅಡಿಯಲ್ಲಿ ವಿಶೇಷ ಸೇವೆ ಸಲ್ಲಿಸಲು ಹೋದಾಗ ಪಿರ್‌ಶಾಂತಿ ಬ್ಲಾಕಿನ ಬಿಸಾಲ್ ಗ್ರಾಮದಲ್ಲಿ ಪರಿಚಯವಾದ ಗ್ರಾಮ ನರ್ತಕಿಯ 'ಸ್ನೇಹ ಫಲವೇ' ಈ ಕಥೆ ಎಂದು ಕಥೆಗಾರರೇ ಹೇಳಿ ಕೊಂಡಿದ್ದಾರೆ."[4] ಸ್ತ್ರೀಯಲ್ಲಿರುವ ದೃಢತೆ, ದೇಶಪ್ರೇಮ ಕಾಮವನ್ನು ಪಾವಿತ್ರ್ಯತೆಯ ಹಿನ್ನಲೆಯಲ್ಲಿ ನೋಡಲಾಗಿದೆ. ವೇಶ್ಯಾವೃತ್ತಿಗೆ ಮೂಲ ಕಾರಣ ಗಂಡು, ಈ ಗಂಡಿನಿಂದಲೇ ಮಹಿಳೆಯರ ಶೋಷಣೆ ಸಾಧ್ಯ ಎಂಬುದನ್ನು ಕಥೆಗಾರರು ಖಾತರಿಪಡಿಸುತ್ತಾರೆ.

ಭಾರತದಲ್ಲಿರುವ ಅಸಮಾನತೆಯ ವಿರುದ್ಧ ಭ್ರಷ್ಟ ವ್ಯವಸ್ಥೆಯ ವಿರುದ್ಧ ಮಾತನಾಡುವ ಕಥೆಗಾರರಿಗೆ ಬೇಲ ಕೊಡುವ ಉತ್ತರ ನಿಮ್ಮ ಕ್ರಾಂತಿಯ ಕಲ್ಪನೆ ಇಂಪಾಗಿದೆ. ಶೋಷಣೆಯಿಂದ, ದಬ್ಬಾಳಿಕೆಯಿಂದ ಇಡೀ ಭಾರತದ ಜನತೆಯನ್ನು ನೀವು ಮುಕ್ತರನ್ನಾಗಿ ಮಾಡುವುದಿರಲಿ, ತಲೆತಲಾಂತರದಿಂದ ಮೌಢ್ಯ ಸಂಪ್ರದಾಯವೊಂದರ ಬಲೆಯಲ್ಲಿ ಸಿಕ್ಕಿ ಒದ್ದಾಡುತ್ತಿರುವ, ತಿನ್ನಲು, ಉಡಲು ಸಾಕಷ್ಟಿರದಿದ್ದರೂ ಗೌರವವಾಗಿ ಸಮಾಜದಲ್ಲಿ ತಲೆ ಎತ್ತಿ ಬದುಕುವಂತೆ ಮಾಡಿ.....

ಅದೇ ದೊಡ್ಡ ಕ್ರಾಂತಿ ಎಂಬ ಮಾತುಗಳು ನಮ್ಮ ಸಮಾಜದಲ್ಲಿ ಹೆಣ್ಣನ್ನು ನಡೆಸಿಕೊಳ್ಳುತ್ತಿರುವ ರೀತಿಯನ್ನು ಚಿತ್ರಿಸುತ್ತದೆ. ವೇಶ್ಯಾವೃತ್ತಿಗೆ ಹೆಣ್ಣಿನ ಅಸಹಾಯಕತೆಯೊಂದೇ ಕಾರಣವಲ್ಲ ಗಂಡಸಿನ ದಬ್ಬಾಳಿಕೆಯೂ ಕಾರಣ ಎಂಬುದನ್ನು ದಾಖಲಿಸುತ್ತಾರೆ.

'ನೆರಳುಗಳು' ಕಥೆ ಸಣ್ಣಪುಟ್ಟ ನಗರಗಳ ರೋಗಗ್ರಸ್ಥ ಕೊಂಪೆಗಳಲ್ಲಿ ನಡೆಯುವ ತೀರಾ ಕೆಳಮಟ್ಟದ ಶೋಷಣೆಯಾದ ವೇಶ್ಯಾವೃತ್ತಿಯ ಬದುಕಿನ ರೀತಿಯನ್ನು ಪರಿಚಯಿಸುತ್ತದೆ ಬದುಕಲು ತುತ್ತು ಅನ್ನಕ್ಕೆ ಗತಿಇಲ್ಲದೆ ವೇಶ್ಯಾ ವೃತ್ತಿಯನ್ನೇ ಅವಲಂಬಿಸಿರುವ ಅನೇಕ ಹೆಣ್ಣುಗಳನ್ನು ಹಿಂಸಿಸುವ ಕಾಮುಕರ ಮತ್ತು ಅವರ ವರ್ತನೆಗಳನ್ನು ಮಾರ್ಮಿಕವಾಗಿ ಚಿತ್ರಿಸಲಾಗಿದೆ. ಇಂತಹ ವೇಶ್ಯಾ ವೃತ್ತಿಯಿಂದ ಸಮಾಜ ಹಾನಿಗೆ ತುತ್ತಾಗುತ್ತಿರುವುದು ಮತ್ತು ಆ ಸೊಂಕಿಗೆ ಬಲಿಯಾದ ಯುವ ಪೀಳಿಗೆ ಅಧೋಗತಿಗೆ ಇಳಿಯುತ್ತಿರುವುದನ್ನು ಸೂಚಿಸುತ್ತದೆ.

'ನೀನೇನು ಹೆಂಗಸರೇ ಕಾಣಾ..... ಅಕ್ಕ ತಂಗೀರಿಲ್ವ....ಅಲ್ಕಾಗೊಳ...... ದುಡ್ಡು ಕೊಟ್ಟಿದೀ ಅಂತ ಪ್ರಾಣ ತಗೀತೀಯ?' ಇನ್ನೇನು ನಿನ್ನ ಮುದ್ದಿಸಬೇಕಾಗಿತ್ತೇನೋ; ತಲೀ ಮೇಲಿ ಮೆರವಣಿಗೆ ಮಾಡಿ ಮಾಂಡೋದು ಲುಚ್ಚಾ ಕೆಲ್ಸ...... ಪತಿವ್ರತೆ ಆಡದಂಗಾಡ್ತಾಳೆ ಏನೋ ಹಾಳು ದೇವ್ರು ನಮಗೆ ಹಿಟ್ಟು ಬಟ್ಟೆಗೆ ನೇರವಾಗಿ ಕೊಟ್ಟಿದ್ರೆ ಯಾವ ನಿನ್ನ ಗುಲಾಮ ನನ್ನ ಮಗಳು ಬತ್ತಿದ್ಲು ಈ ಲುಚ್ಚಾ ಕಸುಬಿಗೆ ನಾವೇನು ಖುಷಿಗಾಗಿ ಬಂದು ಇಲ್ಲಿ ನಿನಗೆ ಕಾಯ್ಕಂಡ್ ಕುಂತಿವ್ನ ಈ ಹಾಳು ಹೊಟ್ಟೆಯಿಂದ ಈ ಗತಿ ನಿಮ್ಮಂಥೋರ ಕೈಲಿ ಸಿಕ್ಕಿ ರಕ್ತ ಬರುವಂಗೆ ಕಚ್ಚಿದ್ಯಲ್ಲ... ನಿನ್ನ ಹಲ್ಲು ಸೇದೋಗ.....ನಾಯೇ ಮೇಲು ನಿಮ್ಮಂಥೋರಿಗಿಂತ ಮುಂತಾದ ವೇಶ್ಯಾವೃತ್ತಿಯ ಪರಧಿಯಲ್ಲಿ ನಡೆಯುವ ಸಂಭಾಷಣೆಗಳು ನಮ್ಮ ಸಮಾಜದಲ್ಲಿ ಬೇರು ಬಿಟ್ಟಿರುವ ಸಾಂಕ್ರಾಮಿಕ ರೋಗವಾದ ಹೆಣ್ಣಿನ ಮೇಲಿನ ಶೋಷಣೆಯ ವಿವಿಧ ಮಗ್ಗುಲುಗಳನ್ನು ದಾಖಲಿಸುತ್ತದೆ.

'ಕಳೆ' ಕಥೆಯೂ ಕೂಡ ಗಂಡು ಹೆಣ್ಣಿನ ಅನೈತಿಕ ಸಂಬಂಧವನ್ನು ದಾಖಲಿಸುತ್ತದೆ. ಈ ಕಥೆಯಲ್ಲಿ ಬರುವ ಶಿವಲಿಂಗೇಗೌಡರು ಊರಿಗೇ ಗೌಡರೆನ್ನಿಸಿ ಕೊಂಡು ತಲೆಕೂದಲು, ಮೀಸೆ ನೆರಯಲು ಪ್ರಾರಂಭಿಸಿದ್ದರೂ ಗಂಡನನ್ನು ಬಿಟ್ಟು ಬಂದ ಹೊಲೆಯರ ಬೇಲೂರಿಯ ಮಗಳು ಕೆಂಪಿಯನ್ನು ಭೋಗಿಸುವುದು, ಗೌಡರಿಗೆ ಎದುರು ಮಾತನಾಡದೆ ಬೇಲೂರಿಯೂ ಸಹ ತನ್ನ ಮಗಳನ್ನು ಅನುಭವಿಸಬೇಕೆಂದಿರುವ ಗೌಡರ ಗಂಡಸುತನಕ್ಕೆ ಬೆಂಬಲಿಸುವುದು. ಮೇಲು ವರ್ಗದವರ ಕಾಮುಕ ದೃಷ್ಟಿಯನ್ನು ಎದುರಿಸಲಾರದ ದಲಿತ ಹೆಣ್ಣು ಮಕ್ಕಳ ಅಸಹಾಯಕತೆಯನ್ನು ಚಿತ್ರಿಸುತ್ತದೆ. ಬೇಲೂರಿಯ ಮಗಳು ಕೆಂಪಿಯನ್ನು ಪ್ರಾಯದಲ್ಲಿ ಮಜಾ ಮಾಡಿದ ಗೌಡರು ಕೆಂಪಿ ಪ್ರಾಯ ಕಳೆದುಕೊಂಡು ಕೈಕಾಲು ಬಡಕಲಾದಾಗ, 'ಈ ಹಾಳು ಹೆಂಗಸರೇ ಇಷ್ಟು, ಒಂದಿಷ್ಟು ದಿನ ರಸ ತುಂಬಿದ ಕಬ್ಬಿನಂತಿದ್ದವರು ಕಾಲ ಕಳೆದಂತೆ ಬಾಡಿ ಬತ್ತಿ ಕಸಕ್ಕಿಂತಲೂ

ಕಡೆಯಾಗುತ್ತಾರೆ" ಎಂದು ದೂರ ತಳ್ಳುವುದು ಗೌಡರ ನೀಚ ಪ್ರವೃತ್ತಿಗೆ ಕನ್ನಡಿ ಹಿಡಿಯುತ್ತದೆ. ಊರಿನ ಹೊಲೆಗೇರಿಯ ಹೆಣ್ಣುಗಳನ್ನೆಲ್ಲಾ ಭೋಗಿಸಬೇಕೆಂಬ ಚಪಲದಲ್ಲಿದ್ದ ಗೌಡರಿಗೆ ಒಮ್ಮೆ ಹೊಲೆಯರ ನಿಂಗ ತಮ್ಮ ಮಗಳು ಲಲಿತಳೊಂದಿಗೆ ತಬ್ಬಿಕೊಂಡು ಮಲಗಿರುವುದನ್ನು ಕಂಡಾಗ ಭೂಮಿಗೆ ಕುಸಿದು ಹೋಗುತ್ತಾರೆ. ತನ್ನ ಮನೆಯಲ್ಲಿಯೂ ಬೆಳೆದು ನಿಂತಿರುವ ಮಗಳಿದ್ದಾಳೆಂಬ ಪ್ರಜ್ಞೆ ಮರುಕಳಿಸುತ್ತದೆ. ನಿಂಗ ಮತ್ತು ಲಲಿತರ ಲೈಂಗಿಕ ಸಂಬಂಧ ಗೌಡರ ಕಾಮುಕತನವನ್ನು ಸುಟ್ಟು ಬೂದಿ ಮಾಡುತ್ತದೆ. ಈ ಕಥೆಯಲ್ಲಿ ದಾಖಲಾಗಿರುವ ಗಂಡು-ಹೆಣ್ಣಿನ ಲೈಂಗಿಕ ಸಂಬಂಧ ವಿರೋಧಾಭಾಸ ಗೌಡರ ದರ್ಪ ದೌರ್ಜನ್ಯಕ್ಕೆ ಕಡಿವಾಣ ಹಾಕಿ, ದಲಿತರ ಹೆಣ್ಣು ಮಕ್ಕಳು ಭೀತಿಯಿಲ್ಲದೆ ಬದುಕಲು ದಾರಿ ಮಾಡಿ ಕೊಡುತ್ತದೆಯಾದರೂ ಅವರ ಮೇಲೆ ಶೋಷಣೆಯಾಗಿರುವುದನ್ನು ಪ್ರತಿನಿಧಿಸುತ್ತದೆ.

'ಸೋಲು' ಕಥೆಯಲ್ಲಿ ಬರುವ ಅನೈತಿಕ ಲೈಂಗಿಕ ಸಂಬಂಧ ಮತ್ತು ಅಸಹಾಯಕ ಹೆಣ್ಣಿನ ಗೋಳು ಚಿತ್ರಿತವಾಗಿದೆ. ದೊಡ್ಡೇಗೌಡರಿಗೆ ಮದುವೆಯಾಗಿ ಮೂರು ಮಕ್ಕಳಿದ್ದರೂ ಸಹ ಮೋಹ ಮುಕ್ತರಾಗದೆ ಎಮ್ಮೆ ಕಾಯಲು ಬರುತ್ತಿದ್ದ ಸುಬ್ಬಕ್ಕನನ್ನು ತನ್ನವಳನ್ನಾಗಿ ಮಾಡಿಕೊಳ್ಳುವ ಹೊಂಚಿಕೆ ಹಾಕಿ ಅವಳನ್ನು ಭೋಗಿಸುವುದು, ಅಷ್ಟೇ ಅಲ್ಲದೆ ಸುಬ್ಬಕ್ಕನ ಮಗಳು ಕೆಂಪಿಯನ್ನೂ ಕಾಮ ದೃಷ್ಟಿಯಿಂದ ಹಿಂಬಾಲಿಸಿ ಹೋಗುವುದು ಗೌಡರ ಕಾಮುಕ ದೃಷ್ಟಿಯನ್ನು ಚಿತ್ರಿಸುತ್ತದೆ. ಹೀಗೆ ಪುರುಷ ಸಮಾಜದ ಮಹಿಳೆಯನ್ನು ತನ್ನ ಸುಖಕ್ಕೆ ಮಾತ್ರ ಬಳಸಿಕೊಳ್ಳುವುದರ ಮೂಲಕ ಶೋಷಣೆಯನ್ನು ನಡೆಸಲಾಗುತ್ತದೆ. ಕಥೆಯ ಪ್ರಾರಂಭದಿಂದಲೂ ದರ್ಪದಿಂದಲೇ ದೌರ್ಜನ್ಯವೆಸಗುವ ಗೌಡರು ಕೆಂಪಿಯನ್ನು ಹಿಂಬಾಲಿಸಿ ಗದ್ದೆ ಕಡೆಗೆ ಹೋದಾಗ ಯಾತಕ್ಕೂ ಬಾರದ ಹ್ಯಾಪು ಮೋರೆಯ ತಮ್ಮ ಮಗ ಕಬ್ಬಿನ ಗದ್ದೆಯಲ್ಲಿ ಕೆಂಪಿಯೊಂದಿಗೆ ರಮಿಸುತ್ತಿರುವುದನ್ನು ಕಂಡು ಸೋಲಿನ ಪ್ರಪಾತದಲ್ಲಿ ಉರುಳಿ ಹೋಗುತ್ತಾರೆ. ಗೌಡರಂತಹ ನೀಚ ಕಾಮುಕ ವ್ಯಕ್ತಿಗಳು ಚಿತ್ರಿತವಾಗುತ್ತಲೇ ಈ ಕಥೆಯು ದೌರ್ಜನ್ಯದ ಸೋಲಿನ ಸಾಂಕೇತಿಕತೆಯನ್ನು ಪಡೆದುಕೊಳ್ಳುತ್ತದೆ.

'ಮಾನಭಂಗ' ಕಥೆಯ ನಿವೇದಕ ಒಬ್ಬ ಡಾಕ್ಟರ್ ಈ ಕಥೆಯಲ್ಲಿ ಒಬ್ಬ ಮನುಷ್ಯನನ್ನು ಸಮಾಜ ಹೇಗೆ ನಡೆಸಿಕೊಳ್ಳುತ್ತದೆಯೋ ಅದರ ಮೇಲೆ ಆತನ ನಡವಳಿಕೆ ಬದಲಾಗುತ್ತದೆ. ಎಂಬ ಚಿತ್ರಣವಿದೆ ಇದು ರಶೀದ್ ಎಂಬ ಬಡ ಕಲಾಯಿಗಾರ ಹಾಗೂ ಅವನ ಸಂಸಾರದ ಕಥೆಯಾಗಿದೆ. ಆಸ್ಪತ್ರೆಯಲ್ಲಿ ನಡೆದ ಕಳುವಿನ ಆಪಾದನೆಯ ಮೇಲೆ ಅವನು ಜೈಲಿಗೆ ಸೇರುತ್ತಾನೆ. ರಶೀದನ ಹೆಂಡತಿ ಸೋನಿಯಾ ಬೇಗಂ ಮತ್ತು ಮಗಳು ಮಮ್ತಾಜಳು ಆಸ್ಪತ್ರೆಯ ಬಾವಿಯ ಗರ್ಭಕ್ಕೆ ಸೇರಿಕೊಂಡರು. ಇವರಿಬ್ಬರ ಶವ ಪರೀಕ್ಷೆಯನ್ನು ಮಾಡಿದ ನಿವೇದಕರು ಮಮ್ತಾಜ್‌ಳ

ಸಾವು ಕೊಲೆಯೆಂದು ತಿಳಿದರೂ ನಿರಪರಾಧಿಯೊಬ್ಬ ಪೊಲೀಸರ ದೌರ್ಜನ್ಯಕ್ಕೆ ಗುರಿಯಾಗುವನೆಂಬ ಹೆದರಿಕೆಯಿಂದ ಅದನ್ನು ಆತ್ಮಹತ್ಯೆ ಎಂದು ದಾಖಲಿಸುತ್ತಾನೆ. ಇದರಿಂದ ಅಲ್ಲಿನ ಭ್ರಷ್ಟತೆಯು ಎದ್ದುಕಾಣುತ್ತದೆ. ಡಾಕ್ಟರ್ ತಾವು ಮಾಡಿದ ತಪ್ಪಿಗೆ ನೈತಿಕ ನೆಲೆಗಟ್ಟು ಕಂಪಿಸತೊಡಗಿ ರಶೀದನಲ್ಲಿ ಕ್ಷಮೆ ಯಾಚಿಸಲು ಬಂದಾಗ 'ರಶೀದನೇ ತನ್ನ ಹೆಂಡತಿಯ ಮೂಲಕ ಮಗಳ ಕೊಲೆ ಮಾಡಿಸಿ, ಹೆಂಡತಿಯನ್ನೂ ಆತ್ಮಹತ್ಯೆ ಮಾಡಿಕೊಳ್ಳುವಂತೆ ಪ್ರೇರೇಪಿಸಿದನು ಎಂಬ ಮಾತುಗಳಿಂದಲೇ ಅಲ್ಲಿನ ದುಷ್ಟ ಸಮಾಜದ ಬಗ್ಗೆ ಚಿತ್ರಿತವಾಗುತ್ತದೆ. ರಶೀದನು ಡಾಕ್ಟರ್‌ರನ್ನು ಕುರಿತು 'ಈ ಅಲಾಲ್ಟೋರ ಪ್ರಪಂಚಕ್ಕೆ ಸುಖ ಕೊಡೋಕೆ ಈಗ ಇರೋ ಸೂಳೇರು ಸಾಕಲ್ವೆ ಸಾಬ್, ನನ್ನ ಮಗಳೂ ಒಬ್ಬ ಸೂಳೆ ಆಗೋದ ಒಬ್ಬ ಅಪ್ಪ ಆಗಿ ನಾನು ಹೆಂಗೆ ಸಹಿಸ್ಕೊಳ್ಳಿ ಹೊಟ್ಟೆ ಕೆಟ್ಟುದು ಸಬ್...... ಸೂಳೇರ ಗೋಳ ದಿನಾ ನೋಡೋ ಪೊಲೀಸ್ನೋರ್ನೇ ಕೇಳಿ ಬೇಕಾದ್ರೆ.....!' ಎಂಬುದು ಅಲ್ಲಿನ ಹೆಣ್ಣನ್ನು ಸಮಾಜ ಬಹಳ ಕೆಟ್ಟದಾಗಿ ಉಪಯೋಗಿಸಿಕೊಂಡು ಶೋಷಣೆಗೆ ಒಳ ಪಡಿಸುತ್ತಿತ್ತು. ಇಂತಹ ಸಾಮಾಜಿಕ ವಾಸ್ತವದ ದುರಂತಗಳನ್ನು ಗಮನಿಸಿಯೂ ಮನುಷ್ಯನ ಮೂಲಭೂತ ಒಳ್ಳೆಯತನ ಮತ್ತು ನೈತಿಕತೆಯನ್ನು ಎತ್ತಿ ಹಿಡಿದಿರುವುದು ಬೆಸಗರಹಳ್ಳಿ ರಾಮಣ್ಣನವರ ಕಥೆಯ ವೈಶಿಷ್ಟ್ಯವಾಗಿದೆ.

'ಗಂಗಾ' ಕಥೆ ತಂದೆ ತಾಯಿ ಇಲ್ಲದ ಅನಾಥ ಗಂಗಾಳ ದುರಂತ ಸಾವನ್ನು ಚಿತ್ರಿಸುತ್ತದೆ. ಗಂಗಾಳ ತಾಯಿ ಕಮಲಕ್ಕ ತೀರಿಕೊಂಡ ನಂತರ ಬೆನ್ನು ಮೇಲೆಲ್ಲ ಹೊಡೆಸಿಕೊಂಡು, ಬಲಗೈಯ ಸ್ವಾಧೀನವನ್ನು ಕಳೆದುಕೊಂಡ ಗಂಗಾಗಳ ಪರಿಸ್ಥಿತಿಗೆ ಅವಳ ಚಿಕ್ಕಮ್ಮ ನಡೆಸಿಕೊಂಡ ರೀತಿಯೇ ಕಾರಣವಾಗಿದೆ ತನ್ನ ಚಿಕ್ಕಮ್ಮಳ ಕಿರುಕುಳವನ್ನು ತಪ್ಪಿಸಿಕೊಂಡು ತುಪ್ಪದ ಹಳ್ಳಿಗೆ ಹೋದಾಗ ಗಂಗಾಳನ್ನು ಬೀದಿ ಕಾಮುಕರು ಮಾನಭಂಗ ಮಾಡಿ ಕೊಲ್ಲುವುದು ಹೆಣವನ್ನು ಕೊಳಕ್ಕೆ ಎಸೆದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಅಥವಾ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ಸತ್ತಳೆಂಬ ಪುಕಾರು ಹಬ್ಬಿಸಿ ಆ ಕೊಲೆಯನ್ನು ಮುಚ್ಚೋಕೆ ಅಧಿಕಾರಿಗಳಿಗೆ ಹಾಗೂ ಗಂಗಾಳ ಚಿಕ್ಕಮ್ಮನಿಗೆ ಸಾಕಷ್ಟು ದುಡ್ಡು ಚೆಲ್ಲಿದರು. ಸಾವಿಗೆ ಕಾರಣವೇನೆಂಬುದನ್ನು ತಿಳಿಯಲು ಶಿವಪರೀಕ್ಷೆ ನಡೆಸದೆ ತಾತ್ಸಾರದಿಂದ ಆ ಅನಾಥ ಹೆಣ್ಣಿನ ಸಾವಿಗೆ ಯಾರೂ ಸಹ ತಲೆಕೆಡಿಸಿಕೊಳ್ಳುವುದಿಲ್ಲ. ಹೀಗೆ ಸಮಾಜದಲ್ಲಿ ಹೆಣ್ಣಿನ ಮೇಲೆ ನಡೆಯುವ ಅತ್ಯಾಚಾರ, ಶೋಷಣೆಯ ಕರಾಳ ಕ್ರೌರ್ಯವನ್ನು ಈ ಕಥೆಯಲ್ಲಿ ಚಿತ್ರಿಸಲಾಗಿದೆ. ಇಲ್ಲಿ ಗಂಗಾ ತನ್ನ ಅಲ್ಪ ಜೀವಿತದಲ್ಲೇ ಅನುಭವಿಸಿದ ನೋವು, ಸಾವು ಯಾವ ಬಗೆಯದು ಎಂಬುದೆಂದು ಕಥೆಗಾರರು ವ್ಯಕ್ತಪಡಿಸಿರುವುದು ಅವರ ಮನಸ್ಸನ್ನು ಎತ್ತಿ ತೋರಿಸುತ್ತದೆ.

ಗಂಗಾಳನ್ನು ಮಾನಭಂಗ ಮಾಡಿ ಕೊಲೆ ಮಾಡಿದವರಿಗೆ, ಕೊಲೆಯನ್ನು ಮುಚ್ಚಿಹಾಕಿದವರಿಗೆ ಶಿಕ್ಷೆಯನ್ನು ನೀಡದೆ ಅವರನ್ನು ಕ್ಷಮಿಸು ಎಂದು ಬೇಡಿದ ಶ್ರೀನಿವಾಸ ಅಯ್ಯಂಗಾರ್ ಕಂಡು

ಚಿಕಿತನಾದರೂ 'ಶಿಕ್ಷೆಯಿಂದ ಪಾಪದ ಕ್ಷಯ ಸಾಧುವಿಲ್ಲ" ಎಂಬ ದಾಸ್ತೊವಸ್ಕಿಯ "ಕರಮ್‌ಜೋವ್ ಸಹೋದರರು" ಎಂಬ ಕಾದಂಬರಿಯ ಮೂಲಕ ವ್ಯಕ್ತಪಡಿಸುವುದು ಕಥೆಗಾರರ ಧೋರಣೆಗಳು ದಾಖಲಾಗುತ್ತವೆ.

'ಜಾಡಮಾಲೆ' ಕಥೆಯಲ್ಲಿಯೂ ಹೆಣ್ಣಿನ ಮೇಲೆ ಶೋಷಣೆ ನಡೆದಿರುವುದು ತಿಳಿದುಬರುತ್ತದೆ. ಈ ಕಥೆಯಲ್ಲಿ ಬರುವ ಸರೋಜ ಚಿಕ್ಕಂದಿನಿಂದಲೂ ನಾನು ಕಷ್ಟಗಳಿಂದ ನೊಂದು-ಬೆಂದು ಅನಾಥವಾಗಿ ಹುಚ್ಚು ಹಿಡಿದು ಬೀದಿಗಿಳಿದಾಗ, ದುಷ್ಟ ಗಂಡಸು ವರ್ಗದವರು ಬೀದಿ ನಾಯಿಗಳಂತೆ ವರ್ತಿಸಿ ಕಾಮುಕರಾಗಿ ಅಂತಹ ಹುಚ್ಚಿಯನ್ನೂ ಬಸಿರು ಮಾಡುವ ಕೃತ್ಯ ಅಸಹ್ಯ ಹುಟ್ಟಿಸುತ್ತದೆ. ಹಾಗೂ ಹುಚ್ಚಿ ಸರೋಜ ಹೆರಿಗೆಯ ನೋವಿನಿಂದ ಬೀದಿಯಲ್ಲಿ ಬಿದ್ದು ನರಳಾಡುವಾಗ ಯಾರೊಬ್ಬರೂ ಮಾನವೀಯತೆಯನ್ನು ತೋರದೇ ಇರುವುದು ಮಹಿಳೆಯರ ಸ್ಥಾನಮಾನ ಹಾಗೂ ಅವಳ ಮೇಲೆ ನಡೆಯುವ ಶೋಷಣೆಯನ್ನು ಕಥೆಗಾರರು ಈ ಕಥೆಯಲ್ಲಿ ಚಿತ್ರಿಸಿದ್ದಾರೆ.

'ಶೂಲ' ಕಥೆ ಪ್ರೇಮಿಗಳಿಬ್ಬರ ದುರಂತವನ್ನು ಹೇಳುತ್ತದೆಯಾದರೂ ಅಲ್ಲಿ ಹೆಣ್ಣಿನ ಶೋಷಣೆ ಯಾಗಿರುವುದು ಸೂಕ್ಷ್ಮವಾಗಿ ಕಂಡುಬರುತ್ತದೆ. ಹಳ್ಳಿಯ ಜಾನಪದ ಹಬ್ಬವೊಂದರ ಹಿನ್ನಲೆಯಲ್ಲಿ ಚಿತ್ರಿಸುವ ಕಥೆಗಾರರ ಕೌಶಲ ಅದ್ಭುತವಾಗಿದೆ. ಮುಗ್ಧ ಪ್ರೇಮಿಗಳು ಒಬ್ಬರನ್ನೊಬ್ಬರು ಮುಕ್ತವಾಗಿ ಪ್ರೀತಿಸಿ ಮದುವೆಯಾಗಬೇಕು ಎನ್ನುವಷ್ಟರಲ್ಲಿ ಹಣ, ಅಂತಸ್ತು, ಮನೆತನಗಳ ನೆಪದಲ್ಲಿ ಇವರಿಬ್ಬರನ್ನು ಬೇರೆ ಮಾಡುವ ಸಂಪ್ರದಾಯವಾದಿಗಳು ಪ್ರೇಮಿಸುತ್ತಿದ್ದ ಹುಡುಗನ ದುರಂತ ಸಾವಿಗೆ ಕಾರಣರಾಗುತ್ತಾರೆ. ಇಲ್ಲಿ ಮಾಸ್ತಿಕಲ್ಲು ಅಮರ ಪ್ರೇಮ ಮತ್ತು ತ್ಯಾಗದ ಸಂಕೇತವಾಗಿ ಇಡೀ ಸನ್ನಿವೇಶ ಮಾಸ್ತಿಕಲ್ಲಿನ ಒಳಗಿರುವ ಚಿತೆಯೇರಿದ ಹೆಣ್ಣಿನ ಸಮೀಕರಣವಾಗಿ ಕಥೆಗೆ ಬಾವುಕತೆಯ ಅಂತ್ಯವನ್ನು ಕೊಡುತ್ತದೆಯೇವಿನಾ ಬೇರೊಬ್ಬನೊಂದಿಗೆ ಮದುವೆ ನಿಶ್ಚಯವಾದಾಗ ಆಕೆಯ ಪ್ರತಿಭಟನೆಯ ಸ್ವಂ ಎಲ್ಲೂ ಕೇಳಿಬರುವುದಿಲ್ಲ. ಶಂಕರನೊಂದಿಗೆ ನಿಶ್ಚಯವಾಗಿದ್ದಾಗ ಗೌರಿಯು ಪ್ರತಿಭಟಿಸದೆ ಇದ್ದೂ ಜಯರಾಮನು ರಕ್ತದ ಮಡುವಿನಲ್ಲಿ ಬಿದ್ದುದನ್ನು ನೋಡಿ ಚಿಟ್ಟನೆ ಚೀರಿ ಅವನನ್ನು ಅಪ್ಪಿ ತನ್ನೆಲ್ಲ ಸಮಸ್ಯೆಗಳಿಗೆ ಉತ್ತರವೆಂಬಂತೆ ಶಾಶ್ವತವಾಗಿ ಕೊನೆಯುಸಿರೆಳೆಯುವುದರ ಮೂಲಕ ಜಯರಾಮನನ್ನು ಸೇರುವಳು. ಇಲ್ಲಿ ಮಹಿಳೆಗೆ ಯಾವುದೇ ಬಗೆಯ ಸ್ವತಂತ್ರ ನಿರ್ಧಾರ ಕೈಗೊಳ್ಳುವ ಹಕ್ಕಿಲ್ಲ ಎಂಬುದಾಗಿದ್ದು, ಮಹಿಳೆಗೆ ಶೋಷಣೆ ಎಂಬುದು ಒಂದಲ್ಲ ಒಂದು ರೀತಿಯಲ್ಲಿ ನಡೆಯುತ್ತದೆ ಎಂಬುದನ್ನು ಕಥೆಗಾರ ರಾಮಣ್ಣನವರು 'ಶೂಲ' ಕಥೆಯಲ್ಲಿ ಅಭಿವ್ಯಕ್ತಿಸಿದ್ದಾರೆ.

೪) ಆಳುವ-ಆಳಿಸಿಕೊಳ್ಳುವ ಆಧಾರಿತ ಶೋಷಣೆಯ ಕಥೆಗಳು

ಸಮಾಜದಲ್ಲಿ ಆಳುವ ವರ್ಗ ಮತ್ತು ಆಳಿಸಿಕೊಳ್ಳುವ ವರ್ಗ ಎಂಬ ಎರಡು ವರ್ಗಗಳಿದ್ದು, ರಾಜಕೀಯ ಗಣ್ಯರು, ಅಧಿಕಾರ ಶಾಹಿಗಳು, ಪಟ್ಟಭದ್ರರು, ನ್ಯಾಯಾಧೀಶರು, ಪೊಲೀಸರು

ಮುಂತಾದ ಅಧಿಕಾರ ಹುದ್ದೆಗಳಲ್ಲಿರುವವರು ಆಳುವ ವರ್ಗಕ್ಕೆ ಸೇರುತ್ತಾರೆ. ದಲಿತರು, ಬಡವರು, ಅಸ್ಪೃಶ್ಯರು ಎರಡನೇ ವರ್ಗಕ್ಕೆ ಸೇರುವರು. ಈ ಎರಡೂ ವರ್ಗಗಳ ನಡುವೆ ನಡೆಯುವ ಸಂಘರ್ಷವನ್ನು ಕಥೆಗಾರ ರಾಮಣ್ಣನವರು ತಮ್ಮ ಅನೇಕ ಕಥೆಗಳಲ್ಲಿ ಚಿತ್ರಿಸಿದ್ದಾರೆ.

ರಾಮಣ್ಣ ಕಥೆಗಳಲ್ಲಿ ಅಧಿಕಾರಿಗಳು ಹೇಗೆ ತಮ್ಮ ತನವನ್ನು ಕಳೆದುಕೊಂಡು ಹಣಕ್ಕೆ ಆಸೆಪಟ್ಟು ಲಂಚಕ್ಕೆ ಸಿಕ್ಕಿಕೊಂಡು ಶ್ರೀಮಂತರ ಕೈಗೊಂಬೆಗಳಾಗುತ್ತಾರೆ ಎಂದು ವಿವರಿಸಲಾಗಿದೆ. ಇಲ್ಲಿ ಅಧಿಕಾರವನ್ನು ಹೊಂದಿರುವವರು ಇತರರ ಮೇಲೆ ತಾತ್ಸಾರ ಭಾವನೆಯನ್ನು ತೋರಿಸಿ ಶ್ರೀಮಂತರ ಕಡೆ ಹೆಚ್ಚು ಗಮನ ನೀಡುತ್ತಾರೆ. ನ್ಯಾಯ ಬಡವರ ಕಡೆಗಿದ್ದರೂ ಅಧಿಕಾರಿಗಳು ಮಾತ್ರ ಶ್ರೀಮಂತರ ಪರವಾಗಿ ನ್ಯಾಯ ಕೊಡಿಸಲು ಹೋರಾಡುತ್ತಾರೆ. ಇದರಿಂದಾಗಿ ದಲಿತರು ದಬ್ಬಾಳಿಕೆ, ದೌರ್ಜನ್ಯ, ಅನ್ಯಾಯ, ಆರೋಪ, ದೋಷಣೆಗೆ ಒಳಗಾಗಿ ಜೀವನವಿಡೀ ಅವರಿವರ ಕೈ ಕೆಳಗೆ ಬಾಳುತ್ತಾ ಶೋಷಣೆಗೆ ಗುರಿಯಾಗುವರು. ಎಂಬುದನ್ನು ಇಲ್ಲಿ ಕಥೆಗಾರರಾದ ರಾಮಣ್ಣನವರು ತಮ್ಮ ಜೀವನದ ಅನುಭವಗಳನ್ನು ಕಥೆಯ ಮೂಲಕ ಹೊರತಂದಿದ್ದಾರೆ.

ರಾಜಕಾರಣದ ಕುತಂತ್ರ ಹಾಗೂ ಕ್ಷುದ್ರತೆಯಿಂದಾಗಿ ಶ್ರೀಮಂತರು ಬಡವರ ಆಸ್ತಿಪಾಸ್ತಿಯನ್ನು ಹೊಡೆಯಲು ಅಧಿಕಾರಿಗಳ ಕೈ ಬೆಚ್ಚಗೆ ಮಾಡುವುದು, ಅವರಿಂದ ರೆಕಾರ್ಡ್‌ಗಳ ತಿದ್ದುಪಡಿ ಮಾಡಿಸುವುದು, ಭ್ರಷ್ಟ ಆಡಳಿತದಿಂದಾಗಿ ನಿರಪರಾಧಿಗಳಿಗೆ ಶಿಕ್ಷೆ ವಿಧಿಸುವುದು, ಹಾಗೂ ಬಡವರು ಅಧಿಕಾರಿಗಳ ಶೋಷಣೆಗೆ ಒಳಪಟ್ಟು ಅಸಹಾಯಕತೆ ಹೊಂದುವುದು, ಬಡವರ ಹಣ ದೋಚುವ, ಊಳಿಗ ಮಾನ್ಯ ಪದ್ಧತಿ ಇಂತಹ ವಸ್ತುಗಳನ್ನಿಟ್ಟುಕೊಂಡೇ ರಾಮಣ್ಣನವರು ಆಳುವ–ಆಳಿಸಿಕೊಳ್ಳುವವರ ನಡುವೆ ಶೋಷಣೆಗಳು ನಡೆಯುತ್ತವೆ ಎಂಬುದನ್ನು ನವಿರಾಗಿ ತೋರಿಸಿಕೊಟ್ಟಿದ್ದಾರೆ.

ಅಧಿಕಾರವನ್ನು ಬಳಸಿಕೊಂಡು ಇತರರ ಮೇಲೆ ಶೋಷಣೆ ಮಾಡುವ ಭ್ರಷ್ಟತೆಯ ಕರಾಳ ಮುಖವುಳ್ಳಂತಹ 'ಸಂತೆಯೊಳಗೊಂಡು ಮನೆಯ ಮಾಡಿ', 'ಚೆಲುವನ ಪರಂಗಿ ಗಿಡಗಳು', 'ಕರುಣಾಳು ಬಾ ಬೆಳಕೆ', 'ಹತ್ಯೆ', 'ಕ್ಷಯ', 'ತಾಯಿ', 'ಗೋಸುಂಬೆ' ಇತ್ಯಾದಿ ಕಥೆಗಳನ್ನು ರಾಮಣ್ಣನವರ ಕಥಾಗುಚ್ಛ ಒಳಗೊಂಡಿದೆ.

"ಸಂತೆಯೊಳಗೊಂದು ಮನೆಯ ಮಾಡಿ ಎಂಬ ಕಥೆಗೆ ಕಥೆಗಾರರು ಕೋಡಿಯಾಲ ಗ್ರಾಮದಲ್ಲಿ ಕಂಡ ಹೃದಯ ವಿದ್ರಾವಕ ಘಟನೆಯೇ ಪ್ರೇರಣೆಯಾಗಿದೆ. ಈ ಕಥೆಯನ್ನು ಕುರಿತು 'ಪ್ರಜಾವಾಣಿ'ಯಲ್ಲಿ ರಾಮಚಂದ್ರದೇವ ಅವರು ಬೆಸಗರಹಳ್ಳಿ ರಾಮಣ್ಣ ಕೆನ್ನೆಗೆ ಹೊಡೆದಂತೆ ಕಥೆ ಹೇಳಬಲ್ಲರು"[5] ಎಂದು ಅಭಿಪ್ರಾಯ ಸೂಚಿಸಿದ್ದಾರೆ ಈ ಕಥೆಯಲ್ಲಿ ಬರುವ ಹೊಂಬಾಳೆ ಮತ್ತು ಬಿಸಿಲರಿಗೆ ಹೊಸ ಹೊಸ ಕಾನೂನುಗಳು ಹೀಗೆ ಇವರ ಬಾಳನ್ನು ಶೋಷಣೆಗೊಳಪಡಿಸ

ಹೊರಟಿವೆ. ಅವುಗಳನ್ನು ಯಾವ ರೀತಿ ದುಷ್ಟ ಶಕ್ತಿಗಳು, ಊಳಿಗಮಾನ್ಯ ಪದ್ಧತಿಯ, ಜಮೀನ್ದಾರಿ ವ್ಯವಸ್ಥೆಯ ಸ್ವಾರ್ಥಿಗಳು ದುರುಪಯೋಗ ಪಡಿಸಿಕೊಂಡು ಹಾಳು ಮಾಡುತ್ತಿದೆ ಎಂಬುದನ್ನು ಮನ ಕರಗುವಂತೆ ಚಿತ್ರಿಸಿದ್ದಾರೆ.

ಹೊಲೆಯರ ಬಿಸಿಲ ಮತ್ತು ಹೊಂಬಾಳೆಯರ ಮಗ ರಾಜನನ್ನು ಕಪ್ಪು ಕನ್ನಡಕಧಾರಿಯೊಬ್ಬ ಸೈಕಲ್‌ನಿಂದ ಗುದಿಯುತ್ತಾನೆ. ಹಸುಳೆಯ ತಲೆ ಒಡೆದು ರಕ್ತ ಸುರಿಯುತ್ತಿದ್ದರೂ ಸೈಕಲ್ ಸವಾರನಾಗಲೀ ಅಥವಾ ಇರತರಾಗಲೀ ಮನುಷ್ಯತ್ವವನ್ನು ತೋರಲಿಲ್ಲ. ಆಗ ಪುಟ್ಟಣ್ಣ ಅವನ ನೆರವಿಗೆ ಬರುವನು. ಇಲ್ಲಿ ತನ್ನ ಜನಾಂಗದವರಿಗೆ ಆದ ಅನ್ಯಾಯದ ವಿರುದ್ಧ ಹೋರಾಡಲು ಹೊರಟ ಪುಟ್ಟಣನೂ ಕೂಡ ಭ್ರಷ್ಟ ವ್ಯವಸ್ಥೆಯಲ್ಲಿ ಸಿಕ್ಕಿ ನರಳುತ್ತಾನೆ. ರಾಜನ ಸಾವಿಗೆ ಪಟೇಲನ ಕಡೆಯವರೇ ಕಾರಣರೆಂದು ಸೂಕ್ಷ್ಮವಾಗಿ ಅರಿತಿದ್ದ ಪುಟ್ಟಣ್ಣ ಅವರನ್ನು ಕಾನೂನಿಗೆ ಒಪ್ಪಿಸಿ ಶಿಕ್ಷೆ ಕೊಡಿಸಲು ಹೊರಡುತ್ತಾನೆ. ಇವನು ಪಟೇಲರ ಬೆಂಬಲವನ್ನು ಪಡೆಯದೇ ಊರಿನ ಶ್ಯಾನುಭೋಗರ ಹತ್ತಿರ ಅರ್ಜಿ ಬರೆಸಿಕೊಂಡು ಪೊಲೀಸ್ ಸ್ಟೇಷನ್ನಿಗೆ ದೂರ ಕೊಡುತ್ತಾನೆ. ಇಲ್ಲಿ ಊರಿನ ಶ್ಯಾನುಭೋಗ ಮತ್ತು ಪಟೇಲ್ ಗೋವಿಂದೇ ಗೌಡರ ರಾಜಕಾರಣ ಇಡೀ ಊರನ್ನೇ ಹೇಗೆ ತನ್ನ ಮುಷ್ಟಿಯಲ್ಲಿಟ್ಟುಕೊಂಡಿದೆ ಎಂಬುದನ್ನು ಪೊಲೀಸ್ ಅಧಿಕಾರಿಗಳ ವರ್ತನೆಯಲ್ಲಿಯೇ ಕಾಣಬಹುದಾಗಿದೆ. ತಮ್ಮ ಅಧಿಕಾರವನ್ನು ಬಳಸಿಕೊಂಡು ಪೊಲೀಸರು ಪುಟ್ಟಣ್ಣನ ಮೇಲೆ ಆಪಾದನೆ ಹಾಕಿ ಲಾಕಪ್ ಸೇರುವಂತೆ ಮಾಡಿ ಶೋಷಣೆಯನ್ನು ಮಾಡುವರು. ಇಲ್ಲಿ ಸಮಾಜದಲ್ಲಿ ಅಧಿಕಾರ ವರ್ಗದವರಿಂದಲೂ ಸಹ ಶೋಷಣೆಯು ಮೇಲಿನ ರೀತಿಯಲ್ಲಿ ನಡೆಯುತ್ತದೆಂಬುದರ ಕುರಿತು ರಾಮಣ್ಣನವರು ಸೂಕ್ಷ್ಮವಾಗಿ ಈ ಕಥೆಯಲ್ಲಿ ರಾಜಕಾರಣದ ನವಿರಾದ ಚಿತ್ರಣವನ್ನು ಚಿತ್ರಿಸಿದ್ದಾರೆ.

'ಚಲುವನ ಪರಂಗಿ ಗಿಡಗಳು' ಕಥೆಯಲ್ಲಿ ಬರುವ ಸುಣ್ಣದಹಳ್ಳಿಯ ಹರಿಜನರ ಬದುಕು ಪಟ್ಟಭದ್ರ ಹಿತಾಸಕ್ತಿಗಳ ಮುಷ್ಟಿಗೆ ಸಿಕ್ಕಿ ನರಳುವುದನ್ನು ಮತ್ತು ಶೋಷಣೆ ಅತಿಯಾದಾಗ ಸಿಡಿದು ನಿಂತು ಪ್ರತಿಭಟಿಸುವುದನ್ನು ಕಾಣಲಾಗಿದೆ. ಸುಣ್ಣದ ಹಳ್ಳಿಯ ಶ್ರೀಮಂತ ಛೇರ್ಮನ್ ಗೋವಿಂದ ಸ್ವಾಮಿಯು ಶಾಲಾಭಿವೃದ್ಧಿಯ ಅಧ್ಯಕ್ಷನಾಗಿದ್ದು ಸರ್ಕಾರಿ ಸವಲತ್ತುಗಳನ್ನು ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳುವುದನ್ನು ಸಮಾಜ ಸೇವೆ ಎಂಬ ಹೆಸರಿನಲ್ಲಿ ಗುರುತಿಸಿಕೊಳ್ಳುತ್ತಿದ್ದನು. ಶಾಲೆಯ ಬಾವಿಗೆ ಅಳವಡಿಸಿದ್ದ ಪಂಪ್‌ಸೆಟ್ ಹಾಗೂ ಬೇಲಿ ತಂತಿಯನ್ನು ಶಾಲೆಯ ಹೆಸರಿನಲ್ಲಿ ಅವ್ಯವಹಾರವಾಗಿ ಉಪಯೋಗಿಸಲಾಗಿತ್ತು.

ಸರ್ಕಾರಿ ಅಧಿಕಾರಿಗಳು ಮತ್ತು ರಾಜಕಾರಣಿಗಳ ಬೆಂಬಲ ಪಡೆದು ದಲಿತರ ಆಸ್ತಿಪಾಸ್ತಿಗಳನ್ನೆಲ್ಲ ತನ್ನದಾಗಿಸಿಕೊಳ್ಳುವ ಕುತಂತ್ರ ಮೇಲು ವರ್ಗದವರ ಶೋಷಣೆಯ ನೆಲೆಗಳನ್ನು

ಬಯಲು ಮಾಡುತ್ತದೆ. ಗೋವಿಂದ ಸ್ವಾಮಿಗೆ ಸೇರಿದ ಭೂಮಿಯನ್ನು ಮೂಗೂರ ಮತ್ತಿತರು ಗುತ್ತಿಗೆ ಮಾಡುತ್ತಿರುವರು. ಸುಬ್ಬಣ್ಣರ ಸಹಾಯದಿಂದ ಗೇಣಿದಾರರು ಅತೀ ಹೆಚ್ಚಿನ ಬೆಳೆಯನ್ನು ಬೆಳೆದುದ್ದನ್ನು ಕಂಡು ಆ ಬೆಳೆಯನ್ನು ತನ್ನದನ್ನಾಗಿ ಮಾಡಿಕೊಳ್ಳಲು ಯೋಚಿಸುತ್ತಾನೆ. ಆಗ ಮೂಗೂರ ತನ್ನವರನ್ನೆಲ್ಲ ಗುಂಪುಕಟ್ಟಿಕೊಂಡು ಹೋಗಿ ನ್ಯಾಯ ಕೇಳಿದಾಗ ಅವನ ಮೇಲೆ ದ್ವೇಷದ ಮಚ್ಚರವಿಡುತ್ತಾನೆ.

ಈ ಕಥೆಯ ಶಾಲಾಭಿವೃದ್ಧಿಯ ಪೌಷ್ಠಿಕಾಂಶದ ಯೋಜನೆಯ ಹಿನ್ನಲೆಯಲ್ಲಿ ಮುಂದುವರೆದು, ಭಾಷಣ ಕೇಳಿ ಪ್ರಭಾವಿತನಾದ ಹೊಲೆಯರ ಮೂಗೂರನ ಮಗ ಚೆಲುವ ಅದಮ್ಯ ಆಶಾಭಾವನೆಯಿಂದ ಪರಂಗಿ ಗಿಡಗಳನ್ನು ನಿಟ್ಟು ಫಸಲಿನ ನಿರೀಕ್ಷೆಯಲ್ಲಿದ್ದ ತನ್ನ ಸೇಡಿಗಾಗಿ ಕಾಯುತ್ತಿದ್ದ ಗೋವಿಂದಸ್ವಾಮಿಯು ತನ್ನ ಶಿಷ್ಯ ಗಣೇಶನಿಗೆ ಹೇಳಿ ಪರಂಗಿಕಾಯಿಗಳನ್ನು ಕೀಳಿಸುವುದರ ಮೂಲಕ ಅಧಿಕಾರದ ದರ್ಪದಿಂದ ಶೋಷಣೆಯನ್ನು ಮಾಡಿದ್ದನ್ನು ಈ ಕಥೆಯಲ್ಲಿ ಸವಿವರವಾಗಿ ಚಿತ್ರಿಸಲಾಗಿದೆ.

ದಲಿತ ಜನಾಂಗದವರ ಬದುಕನ್ನು ದೂಳೀಪಟ ಮಾಡುತ್ತಾ ಸಮಾಜದಲ್ಲಿ ಅಧಿಕಾರದ ದೌರ್ಜನ್ಯದಿಂದ ಮರೆಯುತ್ತಿರುವ ಗೋವಿಂದಸ್ವಾಮಿಯ ವಿರುದ್ಧ ಮೂಗೂರನು ಪ್ರತಿಭಟಸಿ ಸಂಘರ್ಷಕ್ಕೆ ಇಳಿದಿದ್ದು ಶೋಷಕ ಮತ್ತು ಶೋಷಿತ ವರ್ಗದ ನಡುವಿನ ಸಂಬಂಧ ಮಾನವೀಯ ಮೌಲ್ಯಗಳಿಂದ ಕೂಡಿ, ಮನುಷ್ಯತ್ವಕ್ಕೆ ಬೆಲೆ ಸಿಗಬೇಕಾದರೆ ಸಂಘರ್ಷವಾಗಲೇ ಬೇಕು ಎಂಬ ಸತ್ಯವನ್ನು ಲೇಖಕರು ತಮ್ಮ ಕಥೆಯಲ್ಲಿ ದಾಖಲಿಸಿದ್ದಾರೆ.

'ಕರುಣಾಳು ಬಾ ಬೆಳಕೆ' ಕಥೆಯಲ್ಲಿ ನಡೆಯುವ ರಾಜಕೀಯ ಕ್ರೌರ್ಯ, ವಿದ್ಯಾವಂತ ವರ್ಗ ಹೆಚ್ಚಾಗಿರುವ ನಗರ ಪ್ರದೇಶಗಳಲ್ಲಿನ ಸ್ಥಿತಿಯನ್ನು ಚಿತ್ರಿಸುತ್ತದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರಾಗಿದ್ದರೂ ಸಹ ಖಾಸಗಿ ನರ್ಸಿಂಗ್ ಹೋಂ ತೆಗೆದು ಹೆಚ್ಚು ಹೆಚ್ಚು ಹಣ ದೋಚುವ, ಬಡವರ ರಕ್ತ ಹೀರುವ ಡಾಕ್ಟರುಗಳ ಅಧಿಕಾರ ಹಾಗೂ ಕರ್ತವ್ಯದ ಸಣ್ಣತನವನ್ನು ಚಿತ್ರಿಸುತ್ತದೆ. ಕಥೆಗಾರ ರಾಮಣ್ಣನವರು ತಮ್ಮ ವೃತ್ತಿಗೆ ಸಂಬಂಧಿಸಿದ ಸೂಕ್ಷ್ಮ ವಿಚಾರಗಳನ್ನು ಈ ಕಥೆಯಲ್ಲಿ ಬಯಲಿಗೆಳೆದಿದ್ದಾರೆ. ಈ ದೇಶದಲ್ಲಿರುವ ಸರ್ಕಾರಿ ಆಸ್ಪತ್ರೆಗಳ ಸ್ಥಿತಿ, ಅಲ್ಲಿರುವ ಡಾಕ್ಟರುಗಳ ಕರ್ತವ್ಯ ಭ್ರಷ್ಟತೆ, ಮೃಗಗಳಂತೆ ವರ್ತಿಸುವ ರೀತಿ ಅಸಹ್ಯ ಹುಟ್ಟಿಸುತ್ತದೆ.

ಈ ಕಥೆಯಲ್ಲಿ ಬರುವ ಹಳ್ಳಿಯ ಹೆಣ್ಣು ಸರೋಜ ಹರಿಗೆ ನೋವಿನಿಂದ ನರಳುತ್ತಾ ರಕ್ತಸ್ರಾವದಿಂದ ಒದ್ದಾಡುತ್ತಿದ್ದರೂ ಅವಳ ಕಡೆ ಗಮನ ಹರಿಸದೆ ಹಣದ ಆಸೆಯಿಂದ ಶ್ರೀಮಂತ ವ್ಯಾಪಾರಿಯ ಮಗಳನ್ನು ಉಪಚರಿಸುವುದು ಕಟುಕ ವೈದ್ಯರ ಬಣ್ಣವನ್ನು ಬಯಲುಮಾಡುತ್ತದೆ.

ಅದೂ ಅಲ್ಲದೆ ದೇಶವನ್ನೇ ಸೂರೆ ಮಾಡುತ್ತಿರುವ ನಗರದ ಪ್ರಖ್ಯಾತ ಶ್ರೀಮಂತ ಕಳ್ಳಸಾಗಾಣಿಗೆದಾರನ ಕಡೆಯವರಿಗೆ ಕಣ್ಣುಗುಡ್ಡೆ ಬೇಕಾದಾಗ ಸರೋಜಳ ಪ್ರಾಣವನ್ನೇ ತೆಗೆದು ಅವಳ ಕಣ್ಣುಗುಡ್ಡೆ ಕಿತ್ತು ಹಾಕುವುದಕ್ಕೂ ಹೇಸದಿರುವುದು ಡಾಕ್ಟರುಗಳಿಗೆ ಹಿಡಿದಿರುವ ಭಯಂಕರ ಧನ ಪಿಶಾಚಿಯನ್ನು ಚಿತ್ರಿಸುತ್ತದೆ. ಇಲ್ಲಿ ಅಧಿಕಾರವನ್ನು ಉಳ್ಳವರು ಏನು ಬೇಕಾದರೂ ಮೂಡಬಹುದೆಂದು ತಿಳಿದು ಇತರರ ಶೋಷಣೆ ಮಾಡುತ್ತಿರುವುದು ಎದ್ದು ಕಾಣುತ್ತದೆ.

ನಾರ್ಮಲ್ ಆಗಿ ಸರೋಜಳಿಗೆ ಹೆರಿಗೆಯಾಗುವಂತಿದ್ದರೂ ಕೇಸು ಸೀರಿಯಸ್ಸ್ ಆಗಿದೆ ಎಂದು ಹೇಳಿ ಸಿಸೇರಿಯನ್ ಮಾಡುವುದು, ಹಣ ಅಂತಸ್ಥಿಗೆ ಬೆಲೆ ಕೊಟ್ಟು ಮಾನವೀಯತೆಯನ್ನು ಮರೆತು ಮುಗ್ಧ ಜನರ ಪ್ರಾಣ ತೆಗೆಯುವ ವೈದ್ಯರುಗಳ ರಾಜಕಾರಣದ ಕರಾಳ ಛಾಯೆಯನ್ನು, ರಾಕ್ಷನೇ ಕೃತ್ಯವನ್ನು ಈ ಕಥೆ ಮಾರ್ಮಿಕವಾಗಿ ಬಿಂಬಿಸಿದೆ ಇಂತಹ ಕೆಟ್ಟ ಆಡಳಿತ ವ್ಯವಸ್ಥೆಯು ಶೋಷಣೆ ಮಾಡುತ್ತಿರುವುದು ಲೇಖಕರಿಗೆ ಅಪಾರ ರೋಷ ತಂದಿರುವುದನ್ನು ಇಲ್ಲಿ ಮನಗಾಣಬಹುದು.

'ಹತ್ಯೆ' ಕಥೆಯೂ ವೈದ್ಯಕೀಯ ಕ್ಷೇತ್ರದಲ್ಲಿ ನಡೆಯುವ ಶೋಷಣೆಯನ್ನು ನವಿರಾಗಿ ಚಿತ್ರಿಸುತ್ತದೆ. ವೈದ್ಯಕೀಯ ಸೌಲಭ್ಯವನ್ನು ಒದಗಿಸುವಲ್ಲಿ ಶ್ರೀಮಂತ ಬಡವರ ಮಧ್ಯೆ ತಾರತಮ್ಯ ನಡೆಸುವ ವೈದ್ಯರುಗಳ ಲಂಚಗುಳಿತನ ಮತ್ತು ಭ್ರಷ್ಟಾಚಾರದ ಬಣ್ಣವನ್ನು ಬಯಲು ಮಾಡುತ್ತದೆ. ಈ ಕಥೆಯಲ್ಲಿ ಕಥೆಗಾರರೇ ಒಂದು ಪಾತ್ರವಾಗುತ್ತಾರೆ. ವಿಷ ಕುಡಿದು ಸತ್ತವರ, ವಾಹನ ಅಪಘಾತದಲ್ಲಿ ಮಡಿದವರ, ದುರ್ಮರಣಕ್ಕೆ ಬಲಿಯಾದವರ ಹೆಣಗಳನ್ನು ಶವ ಪರೀಕ್ಷೆಗಾಗಿ ತರುವ ಅಮಾಯಕರು ಹೇಗೆ ಅಲ್ಲಿಯ ವೈದ್ಯರ ತಿರಸ್ಕಾರಕ್ಕೆ ಶೋಷಣೆಗೆ ಒಳಗಾಗುತ್ತಾರೆ. ಎಂಬುದನ್ನು ಈ ಕಥೆ ದಾಖಲಿಸುತ್ತದೆ.

ಹಣವಿದ್ದವರು, ಶಿಫಾರಸ್ಸು ಇದ್ದವರು ಇಲ್ಲಿಂದ ಪಡೆಯುವ ಬಿಡುಗಡೆಗೂ ಮತ್ತು ಬಡವರು ಪೊಲೀಸಿನವರಿಂದ, ವೈದ್ಯರಿಂದ ಬಿಡಿಸಿಕೊಳ್ಳಲಾಗದೆ ಅಸಹಾಯಕತೆಯ ನಿಟ್ಟುಸಿರು ಬಿಡುವ ಚಿತ್ರಣ ಕಥೆಯ ಉದ್ದಕ್ಕೂ ಚಿತ್ರಿತವಾಗಿದೆ. ರಾಜಕೀಯವಾಗಿ ನವಿರಾದ ಶೋಷಣೆ ನಡೆದು ಬಡವರ ಒಡಲಿಗೆ ಬೆಂಕಿ ಹಚ್ಚುತ್ತದೆ. ವೈದ್ಯರ ಸಂಬಂಧಿ ಕೃಷ್ಣನ ಶವ ಪರೀಕ್ಷೆ ಸರಾಗವಾಗಿ ನಡೆಯುವ, ಅದೇ ಹೆಣಕುಯ್ಯುವವನ ಸಂಬಂಧಿ ಸುರೇಶನ ಶವ ಪರೀಕ್ಷೆ ವೈದ್ಯರ ರಿಪೋರ್ಟ್ ಇಲ್ಲದೆ ಪೋಲೀಸ್ ತಕರಾರಿನಲ್ಲಿ ಕೊಳೆಯುವ ಪ್ರಸಂಗ ತುಂಬ ಮಾರ್ಮಿಕವಾಗಿ ದಾಖಲಾಗಿದೆ. ಡಾ॥ ಸಾರಥಿ ಹೇಳುವ ಎಷ್ಟೋ ಜನಕ್ಕೆ ಈಗ ನಾವು ತಿನ್ನುತ್ತಿರುವ ತಿಂಡಿ ಸಿಕ್ಕಿದ್ರೆ ವಿಷಕುಡಿಯೋಲ್ಲ. ಹಸಿವು ಕೆಟ್ಟದ್ದು ಅಲ್ಲಿ ಹೆಣ ಕೊಳೀತಿದ್ರೂ ನಾವಿಲ್ಲಿ ತಿನ್ತಾ ಇದ್ದೀವಿ" ಎನ್ನುವ ಮಾತಿನಲ್ಲಿ ಈ ದೇಶದ ಸ್ಥಿತಿಯ ಬಗ್ಗೆ, ಆಡಳಿತದ ಬಗ್ಗೆ

ಕಟುವಾಸ್ತವ ಸತ್ಯದ ಅರಿವು ತಾಕುತ್ತದೆ ಇಲ್ಲಿ ರಾಜಕಾರಣದ ಛಾಯೆ ದುರ್ಮರಣದಿಂದ ಮನುಷ್ಯ ಸತ್ತಾಗಲೂ ಕೂಡ ಬಿನ್ನಟ್ಟುತ್ತದೆ ಎಂಬುದನ್ನು ಕಥೆದಾರರು ನಿರೂಪಿಸಿದ್ದಾರೆ.

'ಕ್ಷಯ' ಕಥೆಯ ಅಧಿಕಾರವನ್ನು ಬಳಿಸಿಕೊಂಡು ಶೋಷಣೆ ಮಾಡುವ ಭ್ರಷ್ಟತೆಯ ಕರಾಳ ಮುಖವನ್ನು ಚಿತ್ರಿಸುತ್ತದೆ. ಸರ್ಕಾರಿ ಗೋದಾಮುಗಳಿಂದ ಕಳ್ಳ ಸಾಗಾಣಿಕೆ ಮಾಡುವ ಕದೀಮರ, ದಲ್ಲಾಳಿಗಳ, ಶಾಮೀಲಾದ ಅಧಿಕಾರಿಗಳ ವಂಚನೆಯ ಕ್ರೌರ್ಯವನ್ನು ಮತ್ತು ನ್ಯಾಯ, ನೀತಿ, ನಿಯತ್ತಿನಿಂದ ದುಡಿಯುವ ವಾಚ್‌ಮನ್ ದೇವೇಗೌಡನಂತಹ ಪ್ರಾಮಾಣಿಕ ವ್ಯಕ್ತಿಗಳ ಅಸಹಾಯಕತೆಯನ್ನು ಈ ಕಥೆಯು ದಾಖಲಿಸುತ್ತದೆ.

ಗಂಗಾವತಿ ಅಣೇಕಟ್ಟಿಗಾಗಿ ಸಹಸ್ರಾರು ಲಕ್ಷ ಬೆಲೆ ಬಾಳುವ ಸಿಮೆಂಟ್ ಮತ್ತು ಕಬ್ಬಿಣವನ್ನು ಸರ್ಕಾರಿ ಗೋದಾಮಿನಲ್ಲಿ ಶೇಖರಿಸಿಟ್ಟು ಆ ಗೋದಾಮಿಗೆ ಪ್ರಾಮಾಣಿಕ ಹಾಗೂ ನಿಷ್ಠಾವಂತ ವ್ಯಕ್ತಿ ದೇವೇಗೌಡರನ್ನು ವಾಚ್‌ಮನ್ ಕೆಲಸಕ್ಕೆ ನೇಮಿಸಿ ಆತ ತನ್ನ ಕರ್ತವ್ಯ ಪಾಲಿಸಲು ಹೊರಟಾಗ ಸ್ಥಳೀಯ ಅಧಿಕಾರಿಗಳ ಮತ್ತು ಸ್ಥಳೀಯ ಪ್ರಮುಖ ಕಂಟ್ರಾಕ್ಟರ್ ತಮ್ಮ ಸುರೇಂದ್ರ ಸೇರಿ ವಾಚ್‌ಮನ್ ದೇವೇಗೌಡನ ಜೊತೆಗಿದ್ದ ಮತ್ತೋರ್ವ ವಾಚಮನ್‌ನನ್ನು ಒಳ ಹಾಕಿಕೊಂಡು ರಾತ್ರೋರಾತ್ರಿ ಲಾರಿಗಳಲ್ಲಿ ಸಾಗಿಸುವಾಗ ದೇವೇಗೌಡನ ಕೈಗೆಸಿಕ್ಕಿ ಬೀಳುವುದು, ಕೊನೆಗೆ ಕಳ್ಳ ಸಾಗಾಣಿಕೆಯ ಆಪಾದನೆ ದೇವೇಗೌಡನ ಮೇಲೆಯೇ ಹೊರಿಸುವುದು ಇದೆಲ್ಲ ರಾಜಕಾರಣ ಅಥವಾ ಅಧಿಕಾರದ ಕರಾಳ ಸ್ವರೂಪವನ್ನು ಹಿಡಿದು ಕೊಡುತ್ತದೆ. ಕಳ್ಳ ಸಾಗಾಣಿಕೆ ಮಾಡುವ ಮುಂಚಿನ ದಿನವೇ ಸ್ಥಳೀಯ ಅಧಿಕಾರಿಗಳನ್ನು ಒಳ ಹಾಕಿಕೊಂಡು ವಿದ್ಯುತ್ ಸರಬರಾಜು ನಿಲ್ಲಿಸುವುದು, ಪೊಲೀಸ್ ಅಧಿಕಾರಿಗಳು ಕಾರ್ಯ ಪ್ರವೃತ್ತರಾಗದಂತೆ ಮುಂಚೆಯೇ ವ್ಯವಸ್ಥೆ ಮಾಡುವುದು ಇವತ್ತಿನ ನಮ್ಮ ಆಡಳಿತ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ದೇವೇಗೌಡನಿಗೆ ಚೆನ್ನಾಗಿ ಥಳಿಸಿ ಕಳ್ಳತನದ ಆರೋಪ ಹೊರಿಸಿ ಜೈಲಿಗೆ ಕಳಿಸುವುದು, ತಾವುಗಳು ಸರ್ಕಾರದಿಂದ ಪ್ರಶಸ್ತಿ, ಬಹುಮಾನಗಳನ್ನು ಪಡೆಯುವುದು ಇಂತಹ ಭ್ರಷ್ಟ ಆಡಳಿತ, ಅಧಿಕಾರಿಗಳ ಶೋಷಣೆಯಿಮದಾಗಿ ನಿರಪರಾಧಿಗಳು ಶಿಕ್ಷೆ ಅನುಭವಿಸುವಂತಾದ್ದುದನ್ನು ಕಥೆಗಾರರು ವಿರೋಧಿಸಿರುವುದು ಈ ಕಥೆಯಲ್ಲಿ ಚಿತ್ರಿತವಾಗಿದೆ.

'ತಾಯಿ' ಕಥೆಯಲ್ಲಿ ಸತ್ಯ, ನ್ಯಾಯಕ್ಕಾಗಿ ತನ್ನ ಮಗನನ್ನೇ ದೂರ ತಳ್ಳುವ ಉರುಗಮ್ಮನ ತುಂಬು ಜೀವನ ಹಗೂ ಚನ್ನಮ್ಮಳಂತಹ ಅಮಾಯಕ ಮಹಿಳೆಯರನ್ನು ಶೋಷಿಸುವ ಚಂದ್ರಪ್ಪ ಶೆಟ್ಟಿಯಂತಹ ಪಟ್ಟಭದ್ರ ಹಿತಾಸಕ್ತಿಗಳು ಹಳ್ಳಿಯಲ್ಲಿ ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ಈ ಕಥೆ ಚಿತ್ರಿಸುತ್ತದೆ. ಹಳ್ಳಿಯ ಚಿತ್ರಗುಪ್ತರೆನಿಸಿಕೊಂಡಿರುವ ಕಂದಾಯ ಅಧಿಕಾರಿಗಳು, ಗ್ರಾಮ ಲೆಕ್ಕಿಗರು ಹೇಗೆ ಬಡವರನ್ನು ಶೋಷಿಸುತ್ತಾರೆ. ಹಣವಂತರ ಕೈಗೊಂಬೆಗಳಾಗುತ್ತಾರೆ ಎನ್ನುವುದನ್ನು ರಾಮಣ್ಣನವರು ಇಲ್ಲಿ ಸೊಗಸಾಗಿ ಚಿತ್ರಿಸಿದ್ದಾರೆ.

ತಾಯಿ ಕಥೆಯಲ್ಲಿ ಬರುವ ಚಂದ್ರಶೆಟ್ಟಿಯು ಬಡವಿ ಚನ್ನಮ್ಮನ ಜಮೀನನ್ನು ಕಬಳಿಸಲು ಹುನ್ನಾರು ನಡೆಸಿ ಹಳ್ಳಿಯ ಕಂದಾಯ ಅಧಿಕಾರಿಯಾದ ಸೇಕ್‌ದಾರ್ ಹಗ್ಗಪ್ಪ ಮತ್ತು ವಿಲೇಜ್ ಅಕೌಂಟೆಡ್ ಪುಟ್ಟರಾಜಪ್ಪರಿಗೆ ಲಂಚವನ್ನು ನೀಡಿ ಪಾಣಿಯನ್ನು ತಿದ್ದಲು ತಿಳಿಸಿರುವನು. ಮತ್ತು ಚನ್ನಮ್ಮಳ ಎರಡೂವರೆಕರೆ ಭೂಮಿಯನ್ನು ಕಬಳಿಸುವುದಕ್ಕಾಗಿ 'ಟೆನೆನ್ಸಿ ಆಕ್ಟ್' ಪ್ರಕಾರ ಉಳುವವನದೇ ಭೂಮಿ ಎಂದು ಲಪಟಾಯಿಸಲು ಕ್ರಿಯಾಶೀಲವಾಗುವುದು ಹಾಗೂ ಆ ಭೂಮಿಯ ಅಕ್ಕಪಕ್ಕದ ಬಾಜೂದಾರರಾದ ಕೆಂಪಲಿಂಗೇಗೌಡ ಮತ್ತು ಅಬ್ದುಲ್ ವಹಾಬರಿಂದ ಚಂದ್ರಸೆಟ್ಟಿಯೇ ಈವರೆಗೂ ಚೆನ್ನಮ್ಮನ ಭೂಮಿಯನ್ನು ವ್ಯವಸಾಯ ಮಾಡುತ್ತಿದ್ದು ಚೆನ್ನಮ್ಮನು ಸೆಟ್ಟಿಯಿಂದ ಕೇವಲ ಗುತ್ತಿಗೆಯನ್ನು ಮಾತ್ರ ಪಡೆಯುತ್ತಿರುವಳೆಂದೂ ಹೇಳಿಸಿ ಹೇಳಿಕೆಯನ್ನು ಲಗತ್ತಿಸಿಕೊಂಡಿದ್ದನು. ಈ ರೀತಿ ಸುಳ್ಳು ಸಾಕ್ಷಿಯನ್ನು ಹೇಳಿಸುವುದು, ಲಂಚ ಕೊಟ್ಟು ಅಧಿಕಾರಿಗಳನ್ನು ತಮ್ಮಡೆಗೆ ಎಳೆದುಕೊಳ್ಳುವ ಭ್ರಷ್ಟ ಆಚರಣೆ ಹಾಗೂ ತನ್ನಲ್ಲಿರುವ ರಾಜಕಾರಣದ ಚಾಣಾಕ್ಷತನವನ್ನು ಉಪಯೋಗಿಸಿ ತಾಲ್ಲೂಕ್ ಆಫೀಸ್ ಕಡತಗಳಿಂದ ಹಿಡಿದು ಸ್ಥಳೀಯ ಗ್ರಾಮಧಿಕಾರಿಗಳ ರಿಕಾರ್ಡುಗಳವರೆಗೆ ತಿದ್ದಿ ಬರೆಸುವ ಚಂದ್ರ ಶೆಟ್ಟಿಯ ಕುತಂತ್ರ ಮತ್ತು ಕ್ಷುದ್ರ ರಾಜಕಾರಣವನ್ನು ಚಿತ್ರಿಸುತ್ತದೆ.

ರಾಮಣ್ಣನವರು 'ಗೋಸುಂಬೆ' ಕಥೆ ಅಂಟನ್ ಚೆಕಾವ್‌ನ 'ಕಮೀಲಿಯನ್' ಕಥೆಯ ಭಾವನುವಾದ ಈ ಕಥೆಯು ಕಟು ವ್ಯಂಗ್ಯದ ವಾಸ್ತವ ಜಗತ್ತು ಕಥೆಗಾರರ ಮೇಲೆ ಪರಿಣಾಮ ಬೀರಿದೆ. ಇಲ್ಲಿ ಬರುವ ಪೊಲೀಸ್ ಅಧಿಕಾರಿ ಹೇಗೆ ನಿಮಿಷಕ್ಕೊಂದು ಸಲ ಬಣ್ಣ ಬದಲಾಯಿಸುತ್ತಾನೆ ಎನ್ನುವುದಕ್ಕೆ ಕೂದಲನನ್ನು ಕಚ್ಚಿದ ನಾಯಿಯ ವಿಚಾರಣೆಯಲ್ಲಿ ಕಂಡು ಬರುತ್ತದೆ. ಶ್ರೀಮಂತರ ಕೈಗೊಂಬೆಗಳಾಗಿರುವ ಅಧಿಕಾರಿಗಳ ಬಣ್ಣವನ್ನು ಬಯಲು ಮಾಡುತ್ತಾ ಸಾಗುವ ಈ ಕಥೆ 'ಗೋಸುಂಬೆ' ಹೆಸರಿನ ಸಾಂಕೇತಿಕ ಅರ್ಥವನ್ನು ಯಶಸ್ವಿಯಾಗಿ ನಿರ್ವಹಿಸುತ್ತದೆ.

ದಲಿತ ಕೂದಲನನ್ನು ಒಂದು ನಾಯಿ ಕಚ್ಚಿದ್ದರಿಂದ ಅವನು ಅದನ್ನು ಅಟ್ಟಿಸಿಕೊಂಡು ಹೋಗುವನು. ಆಗ ಅಲ್ಲಿಗೆ ಬಂದಂತಹ ಪೊಲೀಸ್ ಇನ್‌ಸ್ಪೆಕ್ಟರ್ ಉಗ್ರನರಸಿಂಹಯ್ಯ ವಿಚಾರಣೆ ನಡೆಸುವರು. ಮೊದಲು ಕೂದಲನ ಕಡೆ ಮಾತನಾಡುತ್ತಿದ್ದವರು ಆ ನಾಯಿ ಮುನ್ಸಿಪಾಲ್ಟಿ ಅಧ್ಯಕ್ಷರಾದ ರಾಮೇಶ್ವರಯ್ಯನವರದ್ದು ಎಂದು ತಿಳಿದಾಗ ಅವರ ಮೈನಲ್ಲಿ ಬೆವರು ಉಕ್ಕಿ ಕೂದಲನ ವಿರೋಧವಾಗಿ ಮಾತನಾಡಲಾರಂಭಿಸಿದರು. ನಂತರ ಆ ನಾಯಿ ಅವರದಲ್ಲ ಎಂಬ ಭಾವನೆ ಒಂದು ಮತ್ತೆ ನಾಯಿದೇ ತಪ್ಪು ಎಂದು ಹೇಳುವರು. ಆದರೆ ಕೊನೆಗೆ ಅಧ್ಯಕ್ಷರ ಮನೆ ಅಡಿಗೆಯೋನು ರಂಗಪ್ಪ ಬಂದು ಇದು ನಮ್ಮ ಅಧ್ಯಕ್ಷರ ತಮ್ಮನದೆಂದು ಹೇಳಿದಾಗ ನಾಯಿಯ ತಪ್ಪಿಲ್ಲ, ತಪ್ಪೆಲ್ಲಾ ಕೂದಲನದೇ ಎಂದು ವಾದಿಸುವನು. ಮತ್ತು ಕಳ್ಳ

ನನ್ನ ಮಗ್ನೆ, ಇನ್ನು ಏನಾದ್ರೂ ಉಸಿರೆತ್ತಿ ತರ್ಲೆ ಮಾಡಿದ್ರೆ ನಿನ್ನ ಭೂಗತ ಮಾಡದೇ ಹೋದ್ರೆ ನನ್ನ ಹೆಸರು ಉಗ್ರನರಸಿಂಹಯ್ಯನೇ ಅಲ್ಲ! ಎಂದು ಅವನ ಮೇಲೆ ಗರ್ಜಿಸುವುದು ಅಧಿಕಾರಿಗಳು ಹಣವಂತರ ಕಡೆ ಸದಾ ನಿಷ್ಠರಾಗಿದ್ದು ಬಡವರ ಕಡೆ ನ್ಯಾಯವಿದ್ದರೂ ಅವರನ್ನು ಶೋಷಣೆಗೆ ಒಳಪಡಿಸುವಂತಹ ಹೃದಯ ವಿದ್ರಾವಕ ಸ್ಥಿತಿಯ ಕುರಿತು ರಾಮಣ್ಣನವರು 'ಗೋಸುಂಬೆ' ಯಂತಿರುವ ಅಧಿಕಾರಿಗಳ ಕುರಿತು ಚಿತ್ರಿಸಿರುವ ಕಥೆಯೇ ಇದಾಗಿದೆ.

* * * * *

ಅಡಿ ಟಿಪ್ಪಣಿಗಳು

1. ಕೆ.ಎಸ್.ಭಗವಾನ್ – ಕನ್ನಂಬಾಡಿ ಕೃತಿಗೆ ಬರೆದ ಮುನ್ನುಡಿ; ಪುಟ ಸಂ. 25
2. ಕೆ.ಎಸ್.ಭಗವಾನ್ – ಕನ್ನಂಬಾಡಿ ಕೃತಿಗೆ ಬರೆದ ಮುನ್ನುಡಿ; ಪುಟ ಸಂ. 21
3. ಶಿವರಾಮ ಕಾಡನಕುಪ್ಪೆ – ಸಮನ್ವಯ:ಸಾಹಿತ್ಯ ಸುಮ; ಪುಟ ಸಂ. 44
4. ಡಾ॥ ಬೆಸಗರಹಳ್ಳಿ ರಾಮಣ್ಣ – ಕನ್ನಾಂಬಾಡಿ:ಬಿಸಿಲು ಬೆಳ್ದಿಂಗ ನಡುವೆ, ಪುಟ. ಸಂ. 15
5. ಸ.ಚಿ. ರಮೇಶ – ಬೆಸಗರಹಳ್ಳಿ ರಾಮಣ್ಣನವರ ಜೀವನ ಚರಿತ್ರೆ, ಪುಟ. ಸಂ. 38

ಅಧ್ಯಾಯ – ೬

ಸಮಾರೋಪ

ಅಧ್ಯಾಯ – 6

ಸಮಾರೋಪ

ಬೆಸಗರಹಳ್ಳಿ ರಾಮಣ್ಣನವರ ಕಥೆಗಳನ್ನು ಚರ್ಚಿಸುವಾಗ ನಾವು ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಗ್ರಾಮೀಣ ಹಿನ್ನಲೆ, ಅಂದರೆ ಇವರು ಬರೆದಿರುವ ಪ್ರತಿಯೊಂದು ಕಥೆಯೂ ಸಹ ಹಳ್ಳಿಗಳ ಪರಿಸರದಿಂದ ಕೂಡಿವೆ. ಹಳ್ಳಿ ಜನರ ಮುಗ್ಧತೆ, ಅನಕ್ಷರತೆ, ಮಾನವೀಯ ಮೌಲ್ಯಗಳು ಅವರ ಕಥೆಗಳಲ್ಲಿ ಎದ್ದುಕಾಣುತ್ತದೆ. ಗ್ರಾಮಗಳಲ್ಲಿ ಹೆಚ್ಚಾಗಿರುವ ದಲಿತರು, ಅಸ್ಪೃಶ್ಯರು ವಿವಿಧ ರೀತಿಯಲ್ಲಿ ಶೋಷಣೆಗೆ ಒಳಗಾಗುವ ಅವರ ಬದುಕು, ವಿಭಿನ್ನ ನೆಲೆಗಳಲ್ಲಿ ಬಂದೊದಗುವ ಶೋಷಣೆಯನ್ನು ಹೇಗೆ ಸ್ವೀಕರಿಸುವರು, ತಿರಸ್ಕರಿಸುವರು ಎಂಬುದು ಬೆಸಗರಹಳ್ಳಿ ರಾಮಣ್ಣನವರ ಕಥಾ ಸಾಹಿತ್ಯದ ಹಿಂದಿರುವ ಪ್ರಧಾನ ಧ್ವನಿಯಾಗಿದೆ. ಅಂದಿನ ಗ್ರಾಮೀಣ ಸಂಸ್ಕೃತಿಯು ಪಾತ್ರಗಳಲ್ಲಿ ಮೈದಳೆದು ಬಂದಿವೆ. ಇಲ್ಲಿ ಕಥೆಗಾರರು ಮಾನವ ಸಂಬಂಧ ಮತ್ತು ಈ ನೆಲದ ನಂಟುಗಳಿಗೆ ಬೆಲೆ ಕೊಡುವುದನ್ನು ನೋಡಬಹುದು. ಒಟ್ಟಾರೆಯಾಗಿ ಗ್ರಾಮೀಣ ಸಂಸ್ಕೃತಿಯ ದಟ್ಟವಾದ ಸಾದೃಶ್ಯ ಚಿತ್ರಗಳು ರಾಮಣ್ಣನವರ ಕಥೆಗಳ ಬಹುದೊಡ್ಡ ಆಸ್ತಿಯಾಗಿದೆ.

ರಾಮಣ್ಣನವರ ಅನುಭವವು ಬರವಣಿಗೆಯ ರೂಪಕ್ಕೆ ಬಂದು ಕಥೆಗಳಾಗಿ ಮೂಡಿ ಬಂದಿವೆ. ಒಡೆದು ಹೋದ ಮನಸ್ಸು, ಸ್ನೇಹ, ಕುಟುಂಬ ಇವುಗಳು ಒಂದಾಗುವ ಸಹಜ ಚಿತ್ರಣ, ಅಲಕ್ಷ್ಯಕ್ಕೀಡಾದ ಜನಾಂಗದ ಬದುಕಿನ ವಿವಿಧಸ್ತರಗಳ ಸಾಂಸ್ಕೃತಿಕ ಶೋಷಣೆಯ ಸೂಕ್ಷ್ಮಗಳು, ಪಟ್ಟಭದ್ರರು ಹಾಗೂ ಅಧಿಕಾರ ಶಾಹಿಗಳ ನಡವಳಿಕೆ ಮತ್ತು ವ್ಯಕ್ತಿನಿಷ್ಠ ಪ್ರತಿಭಟನೆಯ ಇತಿಮಿತಿಗಳು, ತುರ್ತುಪರಿಸ್ಥಿತಿಯ ಘೋರ ವಾತಾವರಣದಲ್ಲಿ ದೇಶದ ಹಲವು ಸಮಸ್ಯೆಗಳು ತೆರೆದುಕೊಂಡಿರುವ ಬಗೆಗೆ, ಇರುವಿಕೆಗೆ ನೇರವಾಗಿ, ರೂಕ್ಷವಾಗಿ ಅನಾವರಣವಾಗುವ ಬಗೆಗೆ ಹಾಗೂ ಶೃಂಗಾರ, ವೇಶ್ಯಾವಾಟಿಕೆ, ಪಾಪಪ್ರಜ್ಞೆ ಹೀಗೆ ಜೀವನಕ್ಕೆ ಸಂಬಂಧಿಸಿದಂತೆ ವಿವಿಧ ಸ್ತರದಲ್ಲಿ ಚಿಂತನೆ ನಡೆಸಿ ಶೋಷಣೆಯ ವಿವಿಧ ಮಜಲುಗಳನ್ನು ತಮ್ಮ ಕಥೆಗಳಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ.

ಶೋಷಣೆಯು ಭಿನ್ನ ನೆಲೆಗಳಲ್ಲಿ ನಡೆದು ಶೋಷಣೆಗೆ ಒಳಗಾದವರು ಶೋಷಕರ ವಿರುದ್ಧ ಯಾವುದೇ ರೀತಿಯ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲಾಗದೆ ಅಸಹಾಯಕತೆಯಿಂದ ನೋವನ್ನು ನುಂಗುವುದು ದಲಿತರ ಒಂದು ಗುಂಪಾದರೆ ಶೋಷಕರ ವಿರುದ್ಧ ಪ್ರತಿಭಟನೆ ಮಾಡುವುದು ದಲಿತರ ಮತ್ತೊಂದು ಗುಂಪಾಗಿದೆ. ಹೀಗೆ ಶೋಷಣೆಯು ಜಾತಿ, ಮತ, ಧರ್ಮ, ಲಿಂಗದ ಹೆಸರಿನಲ್ಲಿ ಹಲವು ಬಗೆಯಲ್ಲಿ ಕಾಡುತ್ತಿರುವುದು ತಿಳಿದುಬರುತ್ತದೆ. ಬೆಸಗರಹಳ್ಳಿ

ರಾಮಣ್ಣನವರಲ್ಲಿ ಮಾನವೀಯ ದೃಷ್ಟಿಯೇ ಪ್ರಧಾನವಾಗಿದೆ. ಸಾಂಸ್ಕೃತಿಕ ಶೋಷಣೆಯ ವಿವಿಧ ಸೂಕ್ಷ್ಮಗಳನ್ನು ಚಿತ್ರಿಸುವ ಅಭಿವ್ಯಕ್ತಿ ಇವರ ಕಥೆಗಳಲ್ಲಿ ಸಫಲವಾಗಿದೆ. ಬಡಜನತೆಯ ಬಗ್ಗೆ, ತುಳಿತಕ್ಕೊಳಗಾದವರು, ಶೋಷಣೆಗೊಳಪಟ್ಟವರ ಬಗ್ಗೆ ಕಥೆಗಾರರಿಗೆ ಅಪಾರವಾದ ಅನುಕಂಪವಿರುವುದು ತಿಳಿಯುತ್ತದೆ ಅದರ ಜೊತೆಗೆ ಉಳ್ಳವರ,ಶೋಷಕರ ವಿರುದ್ಧ ಸಿಟ್ಟಿರುವುದನ್ನು ಇವರ ಕಥೆಗಳಲ್ಲಿ ಗಮನಿಸಬಹುದಾಗಿದೆ. ಸಾಮಾನ್ಯವಾಗಿ ಬೆಸಗರಹಳ್ಳಿ ರಾಮಣ್ಣನವರ ಬರವಣಿಗೆಯಲ್ಲಿ ಭಾವೋದ್ವೇಗ ಅಂಶಗಳು ಮತ್ತು ಅಸಮಾನತೆಯ ಬಗೆಗೆ ಆಕ್ರೋಶ ಹೆಚ್ಚಿರುವುದು ಕಂಡುಬರುತ್ತದೆ.

ರಾಮಣ್ಣನವರು ತಮ್ಮ ಪರಿಸರ ನಿಷ್ಟವಾದ ಹಾಗೂ ತಮ್ಮದೇ ಆದ ಭಾಷಾ ಪ್ರಯೋಗದ ಪ್ರಕ್ರಿಯೆಗಳಲ್ಲಿ ಒಬ್ಬ ಮಹತ್ವದ ಸ್ವತಂತ್ರ ದಲಿತಕಥೆಗಾರರಾಗಿದ್ದಾರೆ. ಕಥೆ ಹೇಳುವುದು ಅವರಿಗೆ ಕೇವಲ ಪ್ರವೃತ್ತಿಯಾಗದೆ ಅದನ್ನು ಬೆಸಗರಹಳ್ಳಿ ರಾಮಣ್ಣನವರು ಜೀವನದ ಅನುಭವ ಶೋಧನೆಯ ಒಂದು ಮಾರ್ಗವನ್ನಾಗಿ ಅವರು ಹಮ್ಮಿಕೊಂಡರು. ಇವರು ಜನರ ಬದುಕನ್ನು ಹತ್ತಿರದಿಂದ ಅಂದರೆ ಹೃದಯದಿಂದನೋಡಿ ಬರೆಯುವ ಹಂಬಲವುಳ್ಳ ಕಥೆಗಾರರಾಗಿದ್ದಾರೆ. ಇವರ ಸಾಹಿತ್ಯ ಪ್ರೇಮ ಎಂತಹದು ಎಂದರೆ ಇವರು ವೈದ್ಯರಾಗಿ ವೈದ್ಯಕೀಯ ಪುಸ್ತಕಗಳಿಗಿಂತ ಸಾಹಿತ್ಯದ ಪುಸ್ತಕಗಳನ್ನು ಹೆಚ್ಚು ಸಂಗ್ರಹಿಸಿದ್ದಾರೆ. ಸಾಹಿತ್ಯದ ಪುಸ್ತಗಳ ಬೆಟ್ಟದ ತೆಳದಲ್ಲಿ ಬಿದ್ದ ಕಲ್ಲುಗಳಿಗೆ ಇವರಲ್ಲಿರುವ ವೈದ್ಯಕೀಯ ಪುಸ್ತಕಗಳನ್ನು ಹೋಲಿಸಬಹುದಾಗಿದೆ.

ರಾಮಣ್ಣನವರ ಕಥೆಗಳ ವಸ್ತು, ಶೈಲಿ, ಭಾಷೆ, ಚಿಂತನೆಯು ಸಾಮಾಜಿಕವಾಗಿ ಗಮನಾರ್ಹವಾದುದಾಗಿದೆ. ಮೊದಲಿನಿಂದಲೂ ಇವರ ಬರವಣಿಗೆ ಸರಳ, ನೇರ, ಹೊಸ ಉದ್ದೇಶಗಳಿಗೆ ಒಗ್ಗುವಂಥದ್ದಾಗಿದೆ. ರಾಮಣ್ಣನವರ ಕಥೆಗಳಲ್ಲಿ ಸಿಟ್ಟು, ಹಾಸ್ಯ, ವ್ಯಂಗ್ಯ, ಪ್ರೀತಿ, ಸಹನೆ, ರೋಷ, ಪ್ರತಿಭಟನೆ, ವಿಷಾದ, ವಾಸ್ತವದ ಕ್ರೂರ ಸತ್ಯಗಳು, ಬದುಕಿನ ಪಾಪಪ್ರಜ್ಞೆ, ಪ್ರಾಯಶ್ಚಿತತೆ, ಮಾನಮೀಯತೆ, ಕೇಡು ಮೊದಲಾದವುಗಳು ನೈತಿಕ ಹಿನ್ನಲೆಯಲ್ಲಿ ಚಿತ್ರಿತವಾಗಿದೆ. ಇವರು ನಿರೂಪಿಸುವ ಕಥನ ಕೌಶಲವು ಅದ್ಭುತವಾಗಿದೆ. ಇವರ ಕಥೆಗಳಲ್ಲಿ ಸಾಂಕೇತಿಕತೆಯು ಸಹಜವಾಗಿ ಅಭಿವ್ಯಕ್ತಗೊಂಡಿವೆ. ಒಟ್ಟಾರೆಯಾಗಿ ರಾಮಣ್ಣನವರು ವಸ್ತು ಶೈಲಿ, ತಂತ್ರದಲ್ಲಿ ತಮ್ಮದೇ ಆದ ವೈಶಿಷ್ಟ್ಯತೆಯನ್ನು ಮೆರೆದಿದ್ದಾರೆ.

ಗ್ರಾಮೀಣ ಜಗತ್ತಿನ ಜನಪದರಿಂದ ಪ್ರೇರಣೆಯನ್ನು ಪಡೆದು ಕಥೆಗಳನ್ನು ಬರೆದವರಲ್ಲಿ ಬೆಸಗರಹಳ್ಳಿ ರಾಮಣ್ಣನವರು ಪ್ರಮುಖರಾಗಿದ್ದಾರೆ. ಅವರ ಪ್ರತಿಭೆಯು ದೇಶೀಮೂಲವಾದ್ದೂ ಆಗಿದೆ. ಮಂಡ್ಯ, ಮದ್ದೂರು, ಬೆಸಗರಹಳ್ಳಿ ಪರಿಸರದ ವಿಶಿಷ್ಟ ಭಾಷೆ ಹಾಗೂ ಅನುಭವಗಳ ಮೂಲಕ ಕಥೆಗಳನ್ನು ಹೆಣೆದಿದ್ದಾರೆ. ಕಥೆ ಕಟ್ಟುವುದರಲ್ಲಿ ಅವರ ನಿಮುಣತೆ, ಕೌಶಲ್ಯ ಎದ್ದುಕಾಣುತ್ತದೆ.

ಇವರು ಸರಳವಾಗಿ ಕಥೆ ಹೇಳುತ್ತಲೇ ಗ್ರಾಮೀಣ ಜೀವನದ ಕೆಲವು ಮೂಲಭೂತ ಸತ್ಯಗಳನ್ನು ಧ್ವನಿಸುವ ರಾಮಣ್ಣನವರು ಅವುಗಳ ಬಗ್ಗೆ ತಾಳುವ ನಿಲುವುಗಳನ್ನು ಅವರ ಬರವಣಿಗೆಯಲ್ಲೇ ಕಾಣಬಹುದಾಗಿದೆ.

ರಾಮಣ್ಣನವರ ಕಥೆಗಳಲ್ಲಿ ಜೀತಪದ್ಧತಿ, ದಲಿತರ ಬಾಳಿನ ಗೋಳಿನ ವಿವರಗಳು, ಅವರ ದೈನಂದಿನ ಜೀವನ ಕ್ರಮ, ಜಾತಿ ಪದ್ಧತಿ, ದಲಿತರ ಬದುಕಿನ ಪರಿವರ್ತನೆಯ ಚಿತ್ರಗಳು, ಸಮಾಜದ ದುಷ್ಟಶಕ್ತಿಗಳು, ಅಧಿಕಾರ ಶಾಹಿಗಳು, ಶ್ರೀಮಂತರು, ಜಮೀನ್ದಾರರ ಸ್ವಾರ್ಥಪರ ಭಾವನೆಗಳು, ಉಳ್ಳವರು ದಲಿತರ ಮೇಲೆ ಮಾಡುವ ಶೋಷಣೆಯ ಪರಮಾವಧಿ, ಶೋಷಣೆ ಎಂಬುದು ದಲಿತರು, ಅಸ್ಪೃಶ್ಯರ ಮೇಲೆ ಹೇಗೆ ವಿವಿಧ ನೆಲೆಗಳಲ್ಲಿ ನಡೆಯುತ್ತವೆ ಎಂಬಿತ್ಯಾದಿ ಅಂಶಗಳನ್ನೊಳಗೊಂಡ ದಲಿತರ, ಶೋಷಿತರ ಬದುಕಿನ ಜೀವನ ಜಂಜಾಟವನ್ನು ಇವರ ಕಥೆಗಳಲ್ಲಿ ಕಾಣಬಹುದಾಗಿದೆ. ಜಾತಿ ಪದ್ಧತಿಯ ಹಿನ್ನಲೆಯಲ್ಲಿ ಅಂದರೆ ಮೇಲ್ಜಾತಿ ಹಾಗೂ ಕೆಳಜಾತಿ ಎಂಬ ಆಧಾರದಿಂದ ಮೇಲ್ಜಾತಿಯವರಾದ ಹಿಂದುಗಳು ಕೆಳಜಾತಿಯವರಾದ ಹೊಲೆಯರು, ಮಾದಿಗರನ್ನು ಅತ್ಯಂತ ತುಚ್ಚವಾಗಿ ಕಂಡು ಅವರಿಂದ ಕೆಳಮಟ್ಟದ ಹಾಗೂ ಕಷ್ಟಕರವಾದ ಕೆಲಸವನ್ನು ಮಾಡಿಸಿಕೊಂಡು ಅವರನ್ನು ಅಸ್ಪೃಶ್ಯರೆಂದು ಗುರುತಿಸಿ ಶೋಷಣೆಗೊಳಪಡಿಸುತ್ತಿದ್ದರು. ವರ್ಗ ಆಧಾರಿತವಾಗಿಯೂ ಶೋಷಣೆಯು ನಡೆದು ಬ್ರಾಹ್ಮಣ, ಕ್ಷತ್ರಿಯ ವರ್ಗಗಳಿಗೆ ಸೇರಿದವರು ಶೂದ್ರ ವರ್ಗಕ್ಕೆ ಸೇರಿದವರನ್ನು ದೇವಾಲಯ, ಮಠ, ಮನೆ, ಯಜ್ಞಯಾಗಾದಿ ಶುಭ ಸಮಾರಂಭಗಳಿಗೆ ಪ್ರವೇಶವನ್ನು ನಿಷೇಧಿಸಲಾಗಿತ್ತು. ಇನ್ನು ಆರ್ಥಿಕತೆಯ ಆಧಾರದ ಮೇಲೂ ಶೋಷಣೆಯು ನಡೆದು ಶ್ರೀಮಂತರು, ಜಮೀನ್ದಾರರು ಬಡವರನ್ನು ತಮ್ಮ ಸುಖಕ್ಕಾಗಿ ದುಡಿಸಿಕೊಂಡು ಜೀತಪದ್ಧತಿಯಂತಹ ಅನಿಷ್ಟ ಆಚರಣೆಯನ್ನು ಅನುಸರಿಸಲಾಗುತ್ತಿತ್ತು. ಅದೇ ರೀತಿ ಅಧಿಕಾರ ಶಾಹಿಗಳು ತಮ್ಮ ಸ್ವಾರ್ಥ ಕಾರ್ಯಕ್ಕಾಗಿ ಇತರರನ್ನು ಶೋಷಣೆಗೆ ಒಳಪಡಿಸಿ ಖುಷಿ ಪಡುತ್ತಿದ್ದರು. ಕೊನೆಯದಾಗಿ ಲಿಂಗ ತಾರತಮ್ಯ ಅಂದರೆ ಗಂಡು ಹೆಣ್ಣಿನ ವಿಷಯದಲ್ಲೂ ಶೋಷಣೆಯು ಅಡ್ಡ ಬಂದು ಗಂಡಿನಿಂದ ಹೆಣ್ಣು ಅತ್ಯಾಚಾರ, ಸತಿಸಹಗಮನ ಪದ್ಧತಿ, ವರದಕ್ಷಿಣೆಯಂತಹ ಪಿಡುಗುಗಳಿಗೆ ಬಲಿಯಾಗಿರುವುದನ್ನು ಕಾಣಬಹುದಾಗಿದೆ. ಒಟ್ಟಾರೆಯಾಗಿ ಈ ಮೇಲಿನ ವಿವಿಧ ಬಗೆಯ ಶೋಷಣೆಯ ನೆಲೆಗಳನ್ನು ವಸ್ತುವಾಗಿ ಒಳಗೊಂಡಂತಹ ರಾಮಣ್ಣನವರ ಕಥೆಗಳು ಕನ್ನಡ ಸಾಹಿತ್ಯಕ್ಕೆ ಅಮೋಘ ಕಾಣಿಕೆಗಳಾಗಿವೆ.

ಒಟ್ಟಾರೆಯಾಗಿ ಕನ್ನಡದ ಅಪರೂಪದ ಕಥೆಗಾರ ಡಾ॥ ಬೆಸಗರಹಳ್ಳಿ ರಾಮಣ್ಣನವರು ವಾಸ್ತವತೆಯ ಅದ್ಭುತ ಚಿತ್ರಣ, ನೇರವಾದ ಕಥನ ಶೈಲಿ, ಗ್ರಾಮೀಣ ಪರಿಸರದ ಅಪ್ಪಟ

ಸಂಸ್ಕೃತಿಯ ನೈಜ ಅಭಿವ್ಯಕ್ತಿ ಇವರ ಕಥೆಗಳಲ್ಲಿ ಸಾಧಿತವಾಗಿದೆ. ಈ ಮಣ್ಣಿನಿಂದ ಸಹಜವಾಗಿ ಎದ್ದು ಬಂದ ಜೀವಂತ ಪಾತ್ರಗಳೇನೋ ಎಂಬಂತೆ ಇವರ ಪಾತ್ರಗಳು ಅತ್ಯದ್ಭುತವಾಗಿ ಅವರ ಕಥಾನಕಗಳಲ್ಲಿ ಅನಾವರಣಗೊಳ್ಳುತ್ತದೆ. ಅಲ್ಲಿನ ದಲಿತರ ಬದುಕಿನ ಚಿತ್ರಣವನ್ನು ಶೋಷಣೆಗೆ ಒಳಗಾದ ಬಗೆಯನ್ನು ಯಥಾವತ್ತಾಗಿ ಚಿತ್ರಿಸಿದ್ದಾರೆ. ಹೀಗಾಗಿ ಕನ್ನಡ ಕಥಾ ಜಗತ್ತಿನ ಅನನ್ಯ ಗ್ರಾಮೀಣ ಕಥೆಗಾರ ಹಾಗೂ ದಲಿತ ಕಥೆಗಾರ ಡಾ॥ ಬೆಸಗರಹಳ್ಳಿ ರಾಮಣ್ಣ ಎಂದರೆ ಎಳ್ಳಷ್ಟೂ ಅತಿಶಯೋಕ್ತಿ ಆಗುವುದಿಲ್ಲ.

* * * * *

ಗ್ರಂಥ ಋಣ

ಗ್ರಂಥ ಋಣ

1. ಗಿರಡ್ಡಿ ಗೋವಿಂದ ರಾಜ – "ಸಣ್ಣ ಕಥೆಯ ಹೊಸ ಒಲವುಗಳು", "ಸಾತತ್ಯ"
ಸಂಕ್ರಮಣ ಪ್ರಕಾಶನ,
ಧಾರವಾಡ. 1978

2. ಕೀರ್ತಿನಾಥ ಕುರ್ತುಕೋಟಿ – "ಯುಗಧರ್ಮ ಹಾಗೂ ಸಾಹಿತ್ಯ ದರ್ಶನ"
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,
ಬೆಂಗಳೂರು. 1983

3. ಡಾ॥ ಕರೀಗೌಡ ಬೀಚನಹಳ್ಳಿ – "ವ್ಯಷ್ಟಿ ಮತ್ತು ಸಮಷ್ಟಿ", "ಹೆತ್ತೊಡಲು"
ಅಜಂತಾ ಪ್ರಕಾಶನ, ಕೆಂಗೇರಿ ಉಪನಗರ,
ಬೆಂಗಳೂರು. 1991

4. ಜಿ.ಎಸ್. ಅಮೂರ – "ಕನ್ನಡ ಕಥನ ಸಾಹಿತ್ಯ : ಸಣ್ಣಕಥೆ"
ಕನ್ನಡ ಸಾಹಿತ್ಯ ಪರಿಷತ್ತು,
ಬೆಂಗಳೂರು. 1981

5. ಎಚ್ಚಾರೆಸ್ ಮತ್ತು ಎಚ್ಚಾರ್ಕೆ – "ಭಾರತೀಯ ಸಮಾಜ ಅಧ್ಯಯನ"
ಎಸ್.ಬಿ.ಎಸ್. ಪಬ್ಲಿಷರ್ಸ್
ಬೆಂಗಳೂರು. 2001

6. ಕೆ. ಭೈರಪ್ಪ – "ಸಮಗ್ರ ಗ್ರಾಮೀಣ ಸಮಾಜ"
ಎಸ್.ಬಿ.ಎಸ್. ಪಬ್ಲಿಷರ್ಸ್
ಬೆಂಗಳೂರು. 2000

7. ಡಾ॥ ಸಿ.ಬಿ. ಹೊನ್ನಯ್ಯ – "ಕನ್ನಡ ಸಣ್ಣಕತೆಗಳಲ್ಲಿ ದಲಿತ ಸಂಸ್ಕೃತಿ"
ಬೆಂಗಳೂರು. 2004

8. ಡಾ॥ ವಿ. ಮುನಿವೆಂಕಟಪ್ಪ – "ದಲಿತ ಚಳವಳಿ:ಒಂದು ಅವಲೋಕನ"
ವಿಚಾರವಾದಿ ಪ್ರಕಾಶನ,
ಮೈಸೂರು. 1998

9. ಡಿ.ಎಸ್. ವೀರಯ್ಯ – "ದಲಿತ ಚಿಂತನ"
ಕರ್ನಾಟಕ ಬುಕ್ ಏಜೆನ್ಸಿ,
ಬೆಂಗಳೂರು. 2005

10. ಸ.ಚಿ. ರಮೇಶ – "ಡಾ॥ ಬೆಸಗರಹಳ್ಳಿ ರಾಮಣ್ಣ"

11. ಡಾ॥ ಬೆಸಗರಹಳ್ಳಿ ರಾಮಣ್ಣ – "ಕನ್ನಂಬಾಡಿ:ಸಮಗ್ರಕಥೆಗಳು"
ಮಂಡ್ಯ. 1986

12. ಡಾ॥ ಸಮತಾ.ಬಿ. ದೇಶಮಾನೆ – "ಸಮಾಜಶಾಸ್ತ್ರ ಮತ್ತು ಮಹಿಳೆ"
ಚೇತನ ಬುಕ್ ಹಾಸ್,
ಮೈಸೂರು. 2003

13. ಯು.ಆರ್. ಅನಂತಮೂರ್ತಿ – "ಪ್ರಜ್ಞೆ ಮತ್ತು ಪರಿಸರ"
ಅಕ್ಷರ ಪ್ರಕಾಶನ,
ಸಾಗರ. 1971

14. ಅ.ನ. ಕೃಷ್ಣರಾಯ – "ಸಾಹಿತ್ಯ ಮತ್ತು ಜೀವನ"
ಕರ್ನಾಟಕ ಸಾಹಿತ್ಯ ಮಂದಿರ,
ಧಾರವಾಡ. 1944

15. ಆರ್.ಸಿ. ಕುಲಕರ್ಣಿ – "ಕನ್ನಡ ಸಣ್ಣ ಕಥೆಯ ಮೊದಲ ದಿನಗಳು"

16. ಜಿ.ಹೆಚ್. ನಾಯಕ – "ಅನಿವಾರ್ಯ"
ಅಕ್ಷರ ಪ್ರಕಾಶನ,
ಸಾಗರ, 1980

17. ಶಿವರಾಮ ಕಾಡನಕುಪ್ಪೆ – "ಸಮನ್ವಯ"
ಸಾಹಿತ್ಯ ಸುಮ ಪ್ರಕಾಶನ,
ಮೈಸೂರು. 1976

* * * * *